ನಮ್ಮ ಮಾನಸ

ಸಂಪುಟ : 5 ಜೂನ್ 2011 ಸಂಚಿಕೆ : 2





ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ
ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ

- ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
- ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತವೆ.
- ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು, ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
- ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
- ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
- ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
- ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
- ಸಂಜೆವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
- ಹರಿಯದೇ ನಿಂತ ನೀರು ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ

ಶೀಘ್ರ ಪತ್ತೆ – ತ್ವರಿತ ಚಿಕಿತ್ಸೆಯಿಂದ
ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಜೂನ್ 2011
ಸಂಪುಟ : 5 ಸಂಚಿಕೆ : 2

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : **'ಮಾನುಷಿ'** (1985ರಲ್ಲಿ),
ಅನಂತರ **'ಮಾನಸ'**,
ಈಗ **'ನಮ್ಮ ಮಾನಸ'**

ಸಂಪಾದಕೀಯ

ಬಾಲೆಯರ ಬದುಕ ಚಿವುಟುವ ತಾಳಿಭಾಗ್ಯ !

ಕರ್ನಾಟಕದಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚು ಹೆಚ್ಚು ಕಂಡುಬರುತ್ತಿರುವುದು ಗಾಬರಿ ಹುಟ್ಟಿಸುವ ಸಂಗತಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಸಾಮೂಹಿಕ ವಿವಾಹಗಳಲ್ಲಿ ಕಂಡುಬರುತ್ತಿದ್ದ ಬಾಲ್ಯವಿವಾಹಗಳು ಇಂದು ಜಿಲ್ಲಾ ಹಾಗೂ ನಗರಪ್ರದೇಶಗಳಲ್ಲಿ ಕಂಡುಬರುತ್ತಿವೆ. ರಾಜಕೀಯ ಅಥವಾ ಧಾರ್ಮಿಕ ಉದ್ದೇಶಗಳಿಂದ ನಡೆಯುವ ಸಾಮೂಹಿಕ ವಿವಾಹಗಳಲ್ಲಿ ಬಹಳಷ್ಟು ಬಾಲ್ಯವಿವಾಹಗಳು ನಡೆಯುತ್ತಿದ್ದು, ಇದರಲ್ಲಿ ಮಂತ್ರಿ ಮಹೋದಯರು ಭಾಗವಹಿಸಿರುವಂತಹ ನಿದರ್ಶನಗಳು ನಮ್ಮ ಮುಂದಿವೆ. ಬೆಳಕಿಗೆ ಬರುವ ಬಾಲ್ಯವಿವಾಹದ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ. ಆಗಾಗ್ಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿ, ಅಂತಹ ಮದುವೆಗಳನ್ನು ನಿಲ್ಲಿಸಿ, ತಂದೆ–ತಾಯಿಯರಿಂದ ಮುಚ್ಚಳಿಕೆಯನ್ನು ಬರೆಸಿಕೊಂಡು ಕಳುಹಿಸಿಬಿಡುತ್ತಾರೆ.

ಸರ್ಕಾರ ಹೆಣ್ಣುಮಕ್ಕಳ ಭದ್ರತೆಗಾಗಿ ಹಾಗೂ ಲಿಂಗತಾರತಮ್ಯವನ್ನು ತಪ್ಪಿಸುವ ಉದ್ದೇಶದಿಂದ ಪಿತೃತ್ವ ಭಾವನೆಯಲ್ಲಿ ಭಾಗ್ಯಲಕ್ಷ್ಮಿ, ಸೈಕಲ್ ನೀಡುವ ಕಾರ್ಯಕ್ರಮವನ್ನು ರೂಪಿಸಿದ್ದರೂ, ಬಾಲ್ಯವಿವಾಹವನ್ನು ನಿಲ್ಲಿಸುವಂತಹ ರಾಜಕೀಯ ಇಚ್ಛಾಶಕ್ತಿಯನ್ನಾಗಲೀ, ಅಥವಾ ಕಾರ್ಯಕ್ರಮಗಳನ್ನಾಗಲೀ ರೂಪಿಸಿಲ್ಲ. ಸದಾ ಸರ್ಕಾರದ ಪ್ರಗತಿಯ, ಅಭಿವೃದ್ಧಿಯ ಹಾಡು ಹಾಡುವ ಸರ್ಕಾರಗಳು ಮಹಿಳೆಯರ ಅಭಿವೃದ್ಧಿ–ಪ್ರಗತಿಯ ಮಾನದಂಡವಾಗಿರಬೇಕು ಎಂಬುದನ್ನು ಗಣನೆಗೂ ತೆಗೆದುಕೊಳ್ಳುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಮಹಿಳೆಯರ ವಿದ್ಯಾಭ್ಯಾಸ ಕುಂಠಿತವಾಗುತ್ತದೆ ಎಂಬುದನ್ನು ಪ್ರಭುತ್ವಗಳು ಗಮನಿಸಬೇಕು. ಬೆಂಗಳೂರಿನಿಂದ ದೂರವಿರುವ ಕರ್ನಾಟಕದ ಹಳ್ಳಿಗಳ ಚಿತ್ರಣವಿರಲಿ, ರಾಜಧಾನಿಯಿಂದ ಕೇವಲ 40–50 ಕಿ.ಮೀ. ದೂರವಿರುವ ಹಳ್ಳಿಗಳಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ 7ನೇ ತರಗತಿ ಅಥವಾ ಎಸ್.ಎಸ್.ಎಲ್.ಸಿಗೇ ಮುಗಿದಿರುತ್ತದೆ. ಮನೆಯಲ್ಲಿ ಇಟ್ಟುಕೊಳ್ಳುವುದು ಏಕೆ ಎಂದು ಅವರಿಗೆ ವಿವಾಹ ಮಾಡಿಬಿಡುತ್ತಾರೆ. ಇಂತಹ ಬಾಲ್ಯ ವಿವಾಹಗಳು ಮಹಿಳೆಯರ ವ್ಯಕ್ತಿತ್ವ ವಿಕಸನಕ್ಕೆ ತಡೆಯೊಡ್ಡುತ್ತವೆ ಎಂಬುದನ್ನು ನಾವು ಗಮನಿಸಬೇಕು.

1929ರಲ್ಲಿ ಬಾಲ್ಯವಿವಾಹ ರದ್ದುಗೊಳಿಸುವ ಶಾರದಾ ಆ್ಯಕ್ಟ್ ಜಾರಿಗೆ ಬಂತು. ಇದರ ರೂವಾರಿಯಾದ ಹರ್‌ಬಿಲಾಸ್ ಶಾರದ ಮಕ್ಕಳ ವಿವಾಹದ ವಯಸ್ಸನ್ನು 14 ವಯಸ್ಸಿಗೆ ನಿಗದಿ ಪಡಿಸಿದರು. 1940ರಲ್ಲಿ ಈ ಕಾನೂನು ಮಾರ್ಪಾಡಾಗಿ ಮದುವೆಯ ವಯಸ್ಸನ್ನು 15ಕ್ಕೆ ಏರಿಸಲಾಯಿತು. 1978ರಲ್ಲಿ ಹೆಣ್ಣುಮಗುವಿನ ಮದುವೆಯ ವಯಸ್ಸನ್ನು 18ಕ್ಕೆ ಏರಿಸಲಾಯಿತು.

1929ರಿಂದ ಕಾನೂನು ಪ್ರಕಾರ ಬಾಲ್ಯವಿವಾಹವನ್ನು ರದ್ದುಗೊಳಿಸಿದ್ದಾಗ್ಯೂ ಸಹ, ಈ ಪದ್ಧತಿ ಇಂದಿಗೂ ಕೂಡಾ ಭಾರತದಲ್ಲಿ ಜಾರಿಯಲ್ಲಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ರಾಜಸ್ಥಾನದಲ್ಲಿ ಇಂದಿಗೂ ಕೂಡ 15, 16ರ ಆಜುಬಾಜಿನಲ್ಲಿ 82% ಹೆಣ್ಣುಮಕ್ಕಳು ಮದುವೆಯಾಗುತ್ತಾರೆಂದು ಯೂನಿಸೆಫ್ ವರದಿ ಮಾಡಿದೆ. ರಾಜಸ್ಥಾನದ ಗ್ರಾಮೀಣ ಪ್ರದೇಶದಲ್ಲಿ 13ರ ವಯಸ್ಸಿಗೇ ಮದುವೆಯಾದ ಹೆಣ್ಣುಮಕ್ಕಳು 15 ಹಾಗೂ 19ನೆಯ ವಯಸ್ಸಿನ ಒಳಗೇ ಮೊದಲ ಬಸಿರು, ಬಾಣಂತನವನ್ನು ಕಾಣುತ್ತಾರೆ. ರಾಜಸ್ಥಾನ, ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರದಲ್ಲಿ ಬಾಲ್ಯವಿವಾಹವನ್ನು ಅಧಿಕೃತವಾಗಿ ಕಾಣಬಹುದಾಗಿದೆ. ಇದರಿಂದಾಗಿ ಹೆಣ್ಣುಮಗುವಿನ ವಿದ್ಯಾಭ್ಯಾಸವನ್ನು ಕಡೆಗಣಿಸಲಾಗುತ್ತಿದೆ. ಚಿಕ್ಕವಯಸ್ಸಿನಲ್ಲಿಯೇ ಆಕೆ ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾಗುತ್ತಾಳೆ. ಚಿಕ್ಕ ವಯಸ್ಸಿನ ಬಸಿರು, ಬಾಣಂತನ, ಮಗುವಿನ ಆರೈಕೆ

ಆಕೆಯ ಆರೋಗ್ಯದ ಮೇಲೆ ಅಡ್ಡ ಪರಿಣಾಮವನ್ನು ಬೀರುತ್ತದೆ. 17 ವಯಸ್ಸಿಗೆ ಮುಂಚೆ ತಾಯಿಯಾಗುವ ಹೆಣ್ಣುಮಕ್ಕಳ ಕಂದಮ್ಮಗಳು ಒಂದು ವರ್ಷದ ಅವಧಿಯಲ್ಲಿಯೇ ಸಾಯುವ ಪ್ರಮಾಣ ಅಧಿಕವಾಗಿದೆ ಎಂದು ವರದಿಗಳು ದೃಢಪಡಿಸಿವೆ. 2006ರಲ್ಲಿ ಬಂದ ಬಾಲ್ಯವಿವಾಹ ರದ್ದತಿಯ ಬಿಲ್‌ನಿಂದಾಗಿ ಬಾಲ್ಯವಿವಾಹಕ್ಕೆ ಒತ್ತಾಯ ಪೂರ್ವಕವಾಗಿ ತಳ್ಳಲ್ಪಡುವ ಮಕ್ಕಳು ರಕ್ಷಣೆ ಪಡೆಯಬಹುದೆಂದು ಮಹಿಳಾ ಮತ್ತು ಮಕ್ಕಳ ಇಲಾಖೆಯ ಮಂತ್ರಿಯಾದ ರೇಣುಕಾ ಚೌಧರಿ ಅಭಿಪ್ರಾಯ ಪಡುತ್ತಾರೆ. ಆದರೆ ಒತ್ತಾಯ ಪೂರ್ವಕವಾಗಿ ತಳ್ಳಲ್ಪಡುವುದನ್ನೇ ಅರಿಯಲಾಗದ ವಯಸ್ಸಿನ ಹೆಣ್ಣುಮಕ್ಕಳು ಈ ಸಾಮಾಜಿಕ ಬಲೆಯಿಂದ ರಕ್ಷಣೆ ಪಡೆಯುವುದಾದರು ಹೇಗೆ?

ಬಾಲ್ಯವಿವಾಹದ ವಿರುದ್ಧ ಹೋರಾಡಿ ಕೊನೆಗೆ ಅತ್ಯಾಚಾರಕ್ಕೆ ಒಳಗಾದ ಸಾಮಾಜಿಕ ಕಾರ್ಯಕರ್ತೆ ಬಾನ್ವರಿದೇವಿಯ ಪ್ರಕರಣವನ್ನು ನಾವು ಇಲ್ಲಿ ನೆನೆಯಬಹುದಾಗಿದೆ. ಭಾರತದುದ್ದಕ್ಕೂ ಮಹಿಳಾ ಸಂಘಟನೆಗಳನ್ನು ಸಿಟ್ಟಿಗೆಬ್ಬಿಸಿದ್ದ ಪ್ರಕರಣ ಇದು. ಆಕೆ ಸರ್ಕಾರದ ಯೋಜನೆಯಡಿಯಲ್ಲಿಯೇ ಬಾಲ್ಯವಿವಾಹದ ವಿರುದ್ಧ ಹೋರಾಡಿದ್ದರೂ ರಾಜಸ್ತಾನ ಸರ್ಕಾರ ಆಕೆಗೆ ರಕ್ಷಣೆ ನೀಡಿರಲಿಲ್ಲ. ರಾಜಕಾರಣಿಗಳ ಅಟ್ಟಹಾಸದಲ್ಲಿ ಬಾನ್ವರಿದೇವಿಗೆ ನ್ಯಾಯ ಸಿಗಲಿಲ್ಲ. ಪ್ರಭುತ್ವದ ವ್ಯಂಗ್ಯವಾದ ಮುಖವನ್ನು, ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ಇದು ಸೂಚಿಸುತ್ತದೆ. ಈ ಹೋರಾಟದ ಪ್ರಕರಣ ನಡೆದು ಇಂದಿಗೆ 20 ವರ್ಷಗಳಾದರೂ ಬಾಲ್ಯವಿವಾಹ ನಡೆಯುತ್ತಲೇ ಇದೆ. ಒಂದು ಕಡೆ ಜಾಗತೀಕರಣ ಐ.ಟಿ. ಬಿ.ಟಿ. ಕ್ಷೇತ್ರಗಳಲ್ಲಿ ದುಡಿಯುವ ಹೆಣ್ಣುಮಕ್ಕಳ ಆಧುನಿಕ ಚಿತ್ರಣ ತೋರಿಸಿದರೆ, ರಾಜಸ್ತಾನ, ಬಿಹಾರ್, ಮಧ್ಯಪ್ರದೇಶ, ಉತ್ತರಪ್ರದೇಶಗಳಲ್ಲಿ ಹಾಗೂ ಇತರ ಕಡೆಗಳಲ್ಲಿ ನಡೆಯುತ್ತಿರುವ ಬಾಲ್ಯವಿವಾಹ ಮಹಿಳೆಯರ ಬದುಕಿಗೇ ಸವಾಲೊಡ್ಡುವ ಸಂಗತಿಯಾಗಿದೆ.


ಇಂದಿಗೂ ಬಾಲ್ಯವಿವಾಹ ನಡೆಯುತ್ತಿರುವುದು ಅನೇಕ ಕಾರಣಗಳಿಂದಾಗಿ ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ರಕ್ಷಣೆ ಹೆಣ್ಣಿಗೆ ವಿವಾಹದಿಂದಲೇ ಸಾಧ್ಯ ಎನ್ನುವ ಪಿತೃಪ್ರಧಾನದ ಮೌಲ್ಯದ ಹಿನ್ನೆಲೆಯಲ್ಲಿ ಬಹಳಷ್ಟು ಜನ ಬಾಲ್ಯವಿವಾಹದ ಹಿಡುಗಿಗೆ ಒಳಗಾಗುತ್ತಾರೆ. ಆದರೆ ವೈವಾಹಿಕ ಜೀವನ ಇಂದು ಹೆಣ್ಣಿಗೆ ಭದ್ರತೆ ಒದಗಿಸುತ್ತಿದೆಯೇ? 16–17 ವರ್ಷಗಳಲ್ಲಿಯೇ ತಾಯಂದಿರಾಗುವ ಹೆಣ್ಣುಮಕ್ಕಳು– ಕೌಟುಂಬಿಕ ದೌರ್ಜನ್ಯಗಳಿಲ್ಲದೇ ಬದುಕುತ್ತಿದ್ದಾರೆಯೇ ಎಂಬುದರ ಅಧ್ಯಯನ ನಡೆಸಬೇಕಾಗಿದೆ. ಜೊತೆಗೆ ಹೆಣ್ಣುಮಕ್ಕಳ ಲೈಂಗಿಕತೆಯ ಮೇಲೆ ಬಲವಾದ ಹಿಡಿತ ಸಾಧಿಸುವುದೂ ಕೂಡಾ ಬಾಲ್ಯವಿವಾಹದ ರೂಢಿಗೆ ಮುಖ್ಯ ಕಾರಣವಾಗಿದೆ. ಮರ್ಯಾದಾ ಹತ್ಯೆಗಳು ನಡೆಯುತ್ತಿರುವುದೂ ಈ ಹಿನ್ನೆಲೆಯಲ್ಲಿಯೇ. ಮರ್ಯಾದಾ ಹತ್ಯೆಗಳು ಹೆಚ್ಚಾಗುತ್ತಾ ಹೋದ ಹಾಗೆ ಬಾಲ್ಯವಿವಾಹದ ರೂಢಿಗೆ ಜನ ಹೆಚ್ಚು ಹೆಚ್ಚಾಗಿ ಅಂಟಿಕೊಳ್ಳತೊಡಗಿದ್ದಾರೆ. ಹುಡುಗಿಯ ಕನ್ಯತ್ವ ಕಾಪಾಡುವುದು, ಆಕೆ ಹೆಚ್ಚು ಸಾಮಾಜೀಕರಣಕ್ಕೆ ಒಳಗಾಗದಂತೆ ವಿದ್ಯಾಭ್ಯಾಸ ನಿಲ್ಲಿಸುವುದು, ಆಕೆ ಪ್ರಶ್ನಿಸುವ ಮೊದಲೇ ಆಕೆಯನ್ನು ವೈವಾಹಿಕ ಜೀವನಕ್ಕೆ ತಳ್ಳುವುದು ಇಂತಹ ಮೌಲ್ಯಗಳಿಂದ ಕುಟುಂಬದ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಸಮಾಜ ಆಕೆಯ ಮಾನವ ಹಕ್ಕುಗಳನ್ನೇ ಕಸಿದುಕೊಂಡು ಬಿಡುತ್ತದೆ. ಜೊತೆಗೆ ಅಂಧಶ್ರದ್ಧೆಯ ಧಾರ್ಮಿಕ ಭಾವನೆಗಳಿಗಾಗಿ ಕೂಡಾ ಬಾಲ್ಯವಿವಾಹ ನಡೆಯುತ್ತಿರುವುದು ಕಂಡುಬರುತ್ತದೆ. ವೇದಿಕೆಗಳ ಮೇಲೆ ಇವೆಲ್ಲದರ ಕುರಿತು ಪುಂಖಾನುಪುಂಖವಾಗಿ ಮಾತನಾಡುವ ರಾಜಕಾರಣಿಗಳು ಸಾಮೂಹಿಕ ಬಾಲ್ಯವಿವಾಹಗಳಲ್ಲಿ ಭಾಗವಹಿಸುವ ಮೂಲಕ ಮಹಿಳೆಯರ ಘನತೆಗೇ ದ್ರೋಹವೆಸಗುತ್ತಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳಿಂದ ಹೀಗೆ ವರ್ತಿಸುವ ರಾಜಕಾರಣಿಗಳ ನಿಜವಾದ ಬಣ್ಣವನ್ನು ಬಯಲಿಗೆಳೆಯಬೇಕಿದೆ. ಹೆಣ್ಣುಮಗುವಿನ ವಿದ್ಯಾಭ್ಯಾಸಕ್ಕೇ ಅಡ್ಡಗೋಡೆಯಾಗಿ ನಿಲ್ಲುವ ಈ ಬಾಲ್ಯವಿವಾಹ ದೇಶದ ಪ್ರಗತಿಗೆ ಮಾರಕವಾಗಿದೆ ಎಂಬುದನ್ನು, ಹೆಣ್ಣಿನ ಬದುಕಿನ ಸಮಗ್ರ ಅಭಿವೃದ್ಧಿಯನ್ನು ತಡೆದು ನಿಲ್ಲಿಸುತ್ತದೆ ಎಂಬುದನ್ನು ರಾಜಕಾರಣಿಗಳು ತಿಳಿಯಬೇಕಾಗಿದೆ. ಬಾಲ್ಯವಿವಾಹ ರದ್ದುಗೊಳಿಸುವ ಅನೇಕ ಕಾರ್ಯಕ್ರಮಗಳನ್ನು ಕೂಡಾ ಪ್ರಭುತ್ವ ಹಮ್ಮಿಕೊಳ್ಳಬೇಕಿದೆ. ಈ ಹಂತದಲ್ಲಿ ನಾಗರೀಕ ಸಮುದಾಯ, ಚಳವಳಿಗಳು ಪ್ರಬಲವಾದ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿ ಹೋರಾಡುವ ಜರೂರಿ ಅಗತ್ಯವಿದೆ. ●

2011ನೇ ಸಾಲಿನ ಮಾಸ್ತಿ ಪ್ರಶಸ್ತಿಗೆ ಭಾಜನರಾದ ಡಾ. ವೀಣಾ ಶಾಂತೇಶ್ವರ್, ವೈದೇಹಿ ಹಾಗೂ ಡಾ. ವಿಜಯಾರವರನ್ನು ನಮ್ಮ ಮಾನಸ ಬಳಗ ಅಭಿನಂದಿಸುತ್ತದೆ. ಲೇಖಕಿಯರ ಸಂಘದಿಂದ ಅನುಪಮ ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ವಿಜಯಾ ಅವರಿಗೆ 'ನಮ್ಮ ಮಾನಸ'ದ ವಿಶೇಷ ಅಭಿನಂದನೆಗಳು

ಒಳಗಿನ ಪುಟಗಳಲ್ಲಿ....

ಓದುಗರಲ್ಲಿ ಮನವಿ

ಜಾಗತೀಕರಣದ ಇಂದಿನ ಸಂದರ್ಭದಲ್ಲಿ 'ನಮ್ಮ ಮಾನಸ'ದಂತಹ ಸಣ್ಣ ಪತ್ರಿಕೆಗೆ ಓದುಗರೇ ಜೀವಾಳ. ಪತ್ರಿಕೆಗೆ ಚಂದಾದಾರರಾಗುವ ಮೂಲಕ ಹಾಗೂ ಈ ವರ್ಷದ ಚಂದಾ ನವೀಕರಿಸುವ ಮೂಲಕ ಪತ್ರಿಕೆಯ ಪ್ರಕಟಣೆಗೆ ಸಹಕಾರ ನೀಡಿ.



ಕನ್ನಡ ಸಾಹಿತ್ಯ ವಿಮರ್ಶೆ : ಮಹಿಳಾ ಅನುಸಂಧಾನಘಟ್ಟ (1940 – 1990)


■ ಡಾ. ಬಿ.ಎನ್. ಸುಮಿತ್ರಾಬಾಯಿ

"ಓದುಗರಾಗಿ ಬರಹಗಾರರಾಗಿ ಮಹಿಳೆಯರು ತಮ್ಮ ಪೂರ್ವಸಾಹಿತ್ಯ ಪರಂಪರೆಯ ಉತ್ತರಾಧಿಕಾರವನ್ನೂ ವರ್ತಮಾನದಲ್ಲಿ ಅದರ ಸಾಮಾನ್ಯ ಕಾಳಜಿಗಳ ಪಾಲುದಾರಿಕೆಯನ್ನೂ ಹೊಂದಿರುತ್ತಾರೆ. ಆದರೆ ಮಹಿಳೆಯರಾಗಿ ಅವರು ಪರಂಪರೆಯಲ್ಲಿ ಭಾಗವಹಿಸುವುದಿಲ್ಲ; ಪರಂಪರೆ ಅವರನ್ನು ತೊಡಗಿಸಿಕೊಂಡಿರುತ್ತದೆ. ಹೀಗೆ ಪರಂಪರೆಯ ಜೊತೆಗಿನ ಮಹಿಳೆಯರ ಸಂಬಂಧ ಎನ್ನುವುದು ತೊಡಕಿನದೂ ವಿಡಂಬನೆಯದೂ ಆಗಿರುತ್ತದೆ" *(Jan montefiore: Feminism and Poetry, Pandora, London and Newyork, 1987. p.26)*

ಕನ್ನಡದಲ್ಲಿ ಸಾಹಿತ್ಯವಿಮರ್ಶೆ ಎಂಬ ಆಧುನಿಕ ಜ್ಞಾನಶಿಸ್ತಿನ ಚರಿತ್ರೆ ಅರ್ವಾಚೀನವಾದದ್ದು. ಅದರಲ್ಲಿ ಮಹಿಳೆಯರ ಪ್ರವೇಶ ಮತ್ತೂ ಈಚಿನದು. ಸಾಹಿತ್ಯದೊಳಗೆ ವಸ್ತುವಾಗಿ ಅವರ ಪರಂಪರೆಯಲ್ಲಿ ಉದ್ದಕ್ಕೂ ಕಾಣಿಸುವ ಮಹಿಳೆಯರು ತಾವೇ ಬರಹಕ್ಕೆ ತೊಡಗಿ ಆ ಪರಂಪರೆಯನ್ನು ತಲುಪಲು, ಅದರ ರೂಪ ಲಕ್ಷಣಗಳನ್ನು ಪರೀಕ್ಷಿಸಲು ಯತ್ನಿಸಿರುವುದರ ಪ್ರಕ್ರಿಯೆ ಯಾವಾಗಲೂ ಸಹಜ, ನೇರ ಎನ್ನುವಂತಿಲ್ಲ.

ಮಹಿಳೆಯರು ವಿಮರ್ಶೆಯ ಮುಖ್ಯ ಪರಂಪರೆಯ ಜೊತೆ ಹೊಂದಿರುವ Spaceಗಳು ಸಮಸ್ಯಾತ್ಮಕವಾದಂಥವು. ತಮ್ಮ ಅಸ್ತಿತ್ವವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಿರ್ಲಿಪ್ತ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮಹಿಳೆಯರು ಆ ಉದಾಸೀನತೆಯ ಬೇರುಗಳನ್ನು ಅಲುಗಾಡಿಸಿ, ಜಾಗ ಮಾಡಿಕೊಂಡು ಆ ಜಾಗದಿಂದ ತಮ್ಮದೇ ಅನುಭವದ ವಿಶೇಷ ಲಕ್ಷಣವೊಂದನ್ನು ಸಾಹಿತ್ಯಕ್ಕೆ ಕೊಡುವ ಯತ್ನಮಾಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಆರಂಭಕಾಲದ ಮಹಿಳೆಯರು 'ಮಹಿಳಾಭಿವ್ಯಕ್ತಿಗಾಗಿ' ಜಾಗವೊಂದನ್ನು ಸೃಷ್ಟಿಸಲು ಎಷ್ಟೆಲ್ಲ ಶ್ರಮಪಟ್ಟರು, ಏನೆಲ್ಲ ತೊಡಕುಗಳನ್ನು ಎದುರಿಸಿದರು ಎಂಬುದು ಈಗ ಮಹಿಳಾ ಸಾಹಿತ್ಯಚರಿತ್ರೆಯಲ್ಲಿ ದಾಖಲುಗೊಂಡ ಅಂಶಗಳಾಗಿವೆ.

ತಮಗಾಗಿ ಮಾತ್ರವಲ್ಲ, ಮುಂದಿನ ಪೀಳಿಗೆಯ ಮಹಿಳೆಯರ ಬರಹಗಳಿಗೂ ಈ ಭಾಷೆಯಲ್ಲಿ ತಮ್ಮ ಅನುಭವವನ್ನು ಹೇಗೆ ಕಟ್ಟಿಕೊಡಲು ಸಾಧ್ಯ ಎಂಬುದನ್ನೂ ಅವರು ತೋರಿಸಿ ಕೊಟ್ಟಿದ್ದಾರೆ. ಮುಖ್ಯ ಪರಂಪರೆಯ ಎದುರಿಗೆ ಮುಖ ಮಾಡಿ, ಅದರ ಜೊತೆಯಲ್ಲಿ ಸಾಗಿ ಇಲ್ಲವೆ ಅದು ತಮಗೆ ಒಗ್ಗೀತೇ ಎಂದು ಪರೀಕ್ಷಿಸಿ ಗ್ರಹಿಸಲು ಬೇಕಾದ ವಿಮರ್ಶನೆಯ ಆಧುನಿಕ ವಿಚಾರಗಳು ನಿಧಾನವಾಗಿ ಮಹಿಳೆಯರಲ್ಲಿ ವಿಕಾಸಗೊಂಡಿವೆ. ಬೇರೆ ಬೇರೆ



ಕಾಲಘಟ್ಟಗಳಲ್ಲಿ ಮಹಿಳೆಯರು ಸಾಹಿತ್ಯವನ್ನು ಕುರಿತ ತಮ್ಮ ವಿಚಾರಗಳೇನು, ತಮ್ಮ ಬರಹದ ಧ್ಯೇಯ, ಪ್ರಯೋಜನವೇನು ಎಂಬ ಬಗ್ಗೆ ತಮ್ಮ ನಿಲುವುಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಆದರೆ ಅವರ ಸಾಹಿತ್ಯದ ಬಗ್ಗೆಯೇ ಒಂದು ರೀತಿಯ ಅಲಕ್ಷ್ಯದ ಧೋರಣೆಯಿರುವ ಪರಂಪರೆಯು ಅವರ ವಿಮರ್ಶನಾಶಕ್ತಿಯನ್ನು ಹಿಂದೆ ಲೆಕ್ಕಕ್ಕೆ ತೆಗೆದುಕೊಂಡದ್ದಿಲ್ಲ. ಮಹಿಳೆಯರೂ ವಿಮರ್ಶೆಯ ಸಾಮರ್ಥ್ಯ ಹೊಂದಿದ್ದಾರೆ, ಅವರ ವಿಚಾರಗಳನ್ನೂ ಮಾನ್ಯ ಮಾಡಬೇಕೆಂಬ ಅರಿವು ಕನ್ನಡ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಮೂಡಿದ್ದು ಸ್ತ್ರೀವಾದಿ ವಿಮರ್ಶೆಯ ಪ್ರವೇಶವಾದ ಅನಂತರದ್ದೇ ಬೆಳವಣಿಗೆ.

ಸಾಹಿತ್ಯ ವಿಮರ್ಶೆಯ ಜೊತೆಗಿನ ಮಹಿಳಾ ಅನುಸಂಧಾನ ಏಕರೂಪದ್ದಲ್ಲ, ಏಕಸೂತ್ರದ ವಿಚಾರವೂ ಅದಲ್ಲ. 'ಅನುಸಂಧಾನ' ಎಂದರೆ ಕೇವಲ ಅನುಸರಣೆಯಲ್ಲ. 'ಪರೀಕ್ಷಿಸುವುದು' 'ಪ್ರಯೋಗಿಸುವುದು' ಹಾಗೂ 'ವಿಸ್ತರಿಸುವುದು' ಎಂಬ ಅರ್ಥಗಳೂ ಆ ಶಬ್ದದಲ್ಲಿವೆ. ನವೋದಯವೆಂದು ಮುಖ್ಯ ಸಾಹಿತ್ಯ ಪರಂಪರೆ ತನ್ನನ್ನು ಕರೆದುಕೊಂಡ ಕಾಲಘಟ್ಟದಲ್ಲಿ ಕೇವಲ ಇಬ್ಬರು ಮೂವರಿಂದ ಆರಂಭವಾಗಿ ಹತ್ತಿಪ್ಪತ್ತು ಮಹಿಳೆಯರು ಹೊಸಗನ್ನಡ ಸಾಹಿತ್ಯರಚನೆಗೆ ತೊಡಗಿದ್ದರಷ್ಟೆ. ಅವರೊಳಗಿನ ಸಾಹಿತ್ಯಧೋರಣೆ ಕ್ರಮವಾಗಿ ನವೋದಯ ಪೂರ್ವದ ವಿಚಾರಗಳಿಂದ ಹಿಡಿದು ನವೋದಿತ ಸಾಹಿತ್ಯಕ ವಿಚಾರಗಳವರೆಗೆ ಭಿನ್ನ ಭಿನ್ನ ಸ್ತರಗಳಲ್ಲಿ ಹರಡಿಕೊಂಡಿದ್ದುದನ್ನು ಗಮನಿಸಬೇಕು.

"ಮಾನವರ ಮನಸ್ಸು ಅಂತಃಕರಣಗಳಲ್ಲಿ ಬೀಜರೂಪದಿಂದ ವಾಸಮಾಡಿಕೊಂಡಿರುವ ಲೋಕಾನಂದಕರವಾದ ಅನೇಕ ಸದ್ಭಾವನೆಗಳೂ, ಸದ್ಗುಣಗಳೂ ಸ್ವಾರ್ಥ ದುರಹಂಕಾರಾದಿಗಳಿಂದ ಆಚ್ಛಾದಿತವಾಗಿ ಸಂಸ್ಕೃತಿಯನ್ನು ಹೊಂದದೆ ಅಜಾಗರೂಕ ಸ್ಥಿತಿಯಲ್ಲಿಯೇ ಉಳಿದುಕೊಂಡಿರುವುವು. ಪ್ರಗತಿಗೆ ವಿರೋಧಕರವಾದ ಇಂತಹ ಸ್ವಾರ್ಥ ದುರಹಂಕಾರಾದಿ ದುರ್ಗುಣಗಳನ್ನು ಅಳಿಸಿ, ಸ್ವಭಾವ ಸಿದ್ಧವಾದ ಸದ್ಗುಣಗಳು ಅಂಕುರಿಸಿ ಪರಿಮಿತಿಯಿಲ್ಲದಂತೆ ಅವುಗಳನ್ನು ವಿಸ್ತಾರಗೊಳಿಸಲು ಸಮರ್ಥವಾದ ವಿಚಾರಗಳಿಂದ ಪರಿಪ್ಲುತವಾದ ಪುಸ್ತಕವೇ ನಿಜವಾದ ಪುಸ್ತಕವೆಂಬುದು ನಮ್ಮ ಮತವು"

–(ನಂಜನಗೂಡು ತಿರುಮಲಾಂಬಾ, 1987, ಪು. 31)

ತಿರುಮಲಾಂಬಾ ಅತ್ಯಂತ ಸ್ಪಷ್ಟವಾಗಿ ಸಾಹಿತ್ಯದ ನೀತಿಬೋಧಕ ಪ್ರಯೋಜನದಲ್ಲಿ ನಂಬಿಕೆ ಹೊಂದಿದ್ದರು ಎಂಬುದು ಅವರ ಖಚಿತವಾದ ಈ ನುಡಿಗಳಿಂದಲೇ ವ್ಯಕ್ತವಾಗುತ್ತದೆ. 'ಮೃದು ಮಧುರವಾದ ಮಾತುಗಳಿಂದ ಕಾಂತಾಸಮ್ಮಿತಿಯೋ ಎಂಬಂತೆ ಓದುಗರ ಮನಸ್ಸನ್ನು ಆಕರ್ಷಿಸಿಕೊಂಡು' ಅವರ ಅಭಿರುಚಿಗಳನ್ನು ತಿದ್ದುವುದಕ್ಕೆ ಲೇಖನ ರೂಪದಲ್ಲಿ ವಿಚಾರಗಳನ್ನು ಹೇಳಿದರೆ ಸಾಮಾನ್ಯ ವಾಚಕವರ್ಗಕ್ಕೆ ನೀರಸವೆನಿಸುವುದರಿಂದ ಕಥಾರೂಪಕದಿಂದ ಹೇಳುತ್ತಿರುವುದಾಗಿ ಅವರು ತಿಳಿಸುತ್ತಾರೆ. *–(ಪೂರ್ವೋಕ್ತ : ಪುಟ. 22)*

ಕಾದಂಬರಿ ಮತ್ತು ನಾಟಕಗಳ ರಾಚನಿಕ ಸ್ವರೂಪದ ಭಿನ್ನತೆಗಳಾಗಲಿ, ಅವುಗಳು ಸೃಜನಶೀಲವಾಗಿ ಉತ್ತಮವಾಗಿ ಹೇಗೆ ರಚಿತವಾಗಬೇಕು ಎಂಬ ನಿಟ್ಟಿನಲ್ಲಿ ಆಗಲಿ ನವೋದಯ ಲೇಖಕರಲ್ಲಿ ಕೂಡ ಇನ್ನೂ ಸ್ಪಷ್ಟವಾದ ಸಿದ್ಧಾಂತಗಳು ರೂಪುಗೊಂಡಿರದಿದ್ದ ಕಾಲ ಅದು. (ತಿರುಮಲಾಂಬಾ ಏಳೆಂಟು ಕಾದಂಬರಿಗಳನ್ನು ಬರೆದಿದ್ದಾಗ ತಾನಿನ್ನೂ

ಒಂದನ್ನೂ ಬರೆದಿರಲಿಲ್ಲವೆಂದು ಮಾಸ್ತಿ ಹೇಳಿಕೊಂಡಿದ್ದರೆ, ತಾವು ತಿರುಮಲಾಂಬಾ ಅವರ ಕಾದಂಬರಿಗಳಿಗಿಂತಲೂ ಬಿ.ವೆಂಕಟಾಚಾರ್ಯರ ಬಂಗಾಲಿ ಅನುವಾದಗಳನ್ನು ಮೆಚ್ಚಿ ಓದುತ್ತಿದ್ದುದಾಗಿ ಕಾರಂತರು ಹೇಳಿಕೊಳ್ಳುತ್ತಾರೆ.)

ತಿರುಮಲಾಂಬಾ ವಸಾಹತುಶಾಹಿ ಇಂಗ್ಲಿಷ್ ಶಿಕ್ಷಣವನ್ನು ವಿರೋಧಿಸುತ್ತ ರಾಷ್ಟ್ರೀಯವಾದಿ ಆರ್ಯಸಂಸ್ಕೃತಿಯ ಪುನರುತ್ಥಾನದಲ್ಲಿ ಬಲವಾದ ನಂಬಿಕೆಯಿಟ್ಟು ಅದನ್ನೇ ಎತ್ತಿಹಿಡಿವ ರೀತಿಯ ಸ್ತ್ರೀಪ್ರಧಾನ ಕಾದಂಬರಿಗಳನ್ನು ಬರೆದಾಗ ಅವರ ಮೇಲಿದ್ದ ಪ್ರಭಾವ ನವೋದಯ ಸಾಹಿತ್ಯದ್ದಾಗಲಿ, ಪಾಶ್ಚಾತ್ಯ ರೊಮಾಂಟಿಕ್ ಸಿದ್ಧಾಂತಗಳದ್ದಾಗಲಿ ಅಲ್ಲ. ಸ್ಪಷ್ಟವಾಗಿ ದೇಶೀಯತಾ ವಾದವನ್ನು ಪ್ರತಿಪಾದಿಸುತ್ತಿದ್ದ ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕೆರೂರು ವಾಸುದೇವಾಚಾರ್ಯ ಮುಂತಾದವರ ಬರಹ ವಿಚಾರಗಳಿಂದ ತಮಗೆ ಪ್ರೇರಣೆ ದೊರೆತಿದ್ದರೂ ತಾವು ಯಾರನ್ನೂ ಅನುಕರಿಸಿದ್ದಿಲ್ಲ ಎಂದು ಅವರು ಹೇಳುತ್ತಾರೆ. (ಪೂರ್ವೋಕ್ತ ಪುಟ. 10–11) ಅಂದರೆ ಮಹಿಳೆಯರ ಸಾಹಿತ್ಯವಿಮರ್ಶೆಯ ಅನುಸಂಧಾನ ಮುಖ್ಯವಾಹಿನಿಗಿಂತ ಹಿಂದೆ ಅಥವಾ ಅದರ ಅಂಚಿನ ಜಾಗಗಳಿಂದ ಆರಂಭವಾಗಿರುವುದನ್ನು ಇದರಿಂದ ಗ್ರಹಿಸಬಹುದು.

ನನ್ನ ಪ್ರಬಂಧದ ವಿಷಯವು ಸಾಹಿತ್ಯ ವಿಮರ್ಶೆಯೊಂದಿಗಿನ ಮಹಿಳಾ ಅನುಸಂಧಾನದ ಎರಡನೆಯ ಘಟ್ಟವನ್ನು ಕುರಿತದ್ದು. ಈ ಎರಡನೆಯ ಘಟ್ಟ ಎನ್ನುವುದನ್ನು ಸುಮಾರಾಗಿ 1940ರಿಂದ 1990ರ ನಡುವಿನ ಅವಧಿ ಎಂದು ಸ್ಥೂಲವಾಗಿ ಮಿತಿಯನ್ನು ಹಾಕಿಕೊಂಡರೆ, ಮೊದಲ ಪೀಳಿಗೆಯವರು ನವೋದಯ ಸಾಹಿತ್ಯ ಮತ್ತು ಅಂದಿನ ವಿಮರ್ಶೆಯ ಜೊತೆ ಹೊಂದಿಕೊಳ್ಳುವ ಯತ್ನಗಳನ್ನು ನಡೆಸಿದ್ದಾದ ಬಳಿಕ ಮಹಿಳಾಭಿವ್ಯಕ್ತಿ ಹೇಗೆ ವಿಶಿಷ್ಟ ರೂಪ ತಳೆಯಿತು ಎಂಬುದನ್ನು ಪರಿಶೀಲಿಸಲು ಸಹಾಯವಾಗಬಹುದು. ಈ ಐದಾರು ದಶಕಗಳಲ್ಲಿ ಕನ್ನಡದಲ್ಲಿ ಮಹಿಳೆಯರು ಹೆಚ್ಚಾಗಿ ಬರೆದದ್ದು ಸಣ್ಣಕಥೆ, ಕಾದಂಬರಿಗಳನ್ನು. ಅವರ ರಚನೆಗಳು ಕೆಲಮಟ್ಟಿಗೆ ನವೋದಯದ ಮತ್ತು ಕೆಲಮಟ್ಟಿಗೆ ಪ್ರಗತಿಶೀಲತೆಯ ಅಂಶಗಳನ್ನು ಒಳಗೊಂಡ ರೀತಿಯದಾದವು. ಆದರೆ ಮುಂದಿನ ನವ್ಯಸಾಹಿತ್ಯ ಪಂಥದ ಪ್ರವೇಶವಾದ ಮೇಲೆ ಅದರ ವೈಲಕ್ಷಣ್ಯಗಳೆಲ್ಲ ಮುಖ್ಯ ಮಹಿಳಾ ಬರಹಗಾರರಿಗೆ ಕಬ್ಬಿಣದ ಕಡಲೆಯಾಗಿ, ಅಗ್ರಾಹ್ಯವಾಗಿಯೇ ಉಳಿದವು. ಇಂತಹ ವಾತಾವರಣದಲ್ಲಿ ಇಬ್ಬರು ಮೂವರು ಲೇಖಕಿಯರಷ್ಟೇ ತಮ್ಮ ಆಂಗ್ಲಸಾಹಿತ್ಯ ವಿದ್ವತ್ತಿನ ಮೂಲಕ ನವ್ಯಸಾಹಿತ್ಯ ಹಾಗೂ ವಿಮರ್ಶೆಯ ಸೈದ್ಧಾಂತಿಕ ಅಸ್ತ್ರಗಳನ್ನು ತಮ್ಮ ಬತ್ತಳಿಕೆಯಲ್ಲಿ ಇಟ್ಟುಕೊಂಡು ಸಾಹಿತ್ಯ ರಣರಂಗಕ್ಕೆ ಬಂದು ಸಾಹಿತ್ಯಕ 'ಹೋರಾಟ' ಮಾಡಿದ್ದು ಈಗ ಚರಿತ್ರೆಯಾಗಿದೆ.

ಹೀಗೆ ಸಾಹಿತ್ಯವಿಮರ್ಶೆಯೊಂದಿಗಿನ ಮಹಿಳಾ ಅನುಸಂಧಾನದ ಎರಡನೆಯ ಘಟ್ಟದಲ್ಲಿ ತುಂಬ ವೈವಿಧ್ಯಮಯ ಸ್ತರಗಳಿವೆ. ಮಹಿಳೆಯರು ಈಗ ಹೆಚ್ಚಿನ ಸಂಖ್ಯೆಯಲ್ಲಿ ಬರೆಯಲಾರಂಭಿಸಿದ್ದಾರಾದರೂ ನವೋದಯ, ಪ್ರಗತಿಶೀಲ, ನವ್ಯದಂಥ ವಿವಿಧ ಸಾಹಿತ್ಯ ಚಳವಳಿಗಳು ಅವರ ಸುತ್ತಲಿನ ಸಾಹಿತ್ಯಪರಿಸರದಲ್ಲಿ ಜರುಗಿ ಹೋಗುತ್ತಿರುವಾಗ ಅದ್ಯಾವುದರಿಂದಲೂ ಬಾಧಿತವೇ ಆಗದ ದಿವ್ಯಉದಾಸೀನತೆಯಿಂದ ತಮಗೆ ರೂಢಿಸಿದ ರೀತಿಯಲ್ಲೇ ಮಹಿಳೆಯರು ಬರೆದುಕೊಳ್ಳುತ್ತಾ ಹೋದರು ಎಂದರೆ ಅದು ಅಂದಂದಿನ ಸಾಂಸ್ಕೃತಿಕ ವಿದ್ಯಮಾನದ ಸರಳೀಕೃತ ಗ್ರಹಿಕೆ ಮಾತ್ರ ಆಗಬಹುದು. ಚಲನಶೀಲತೆಯೇ ಬೆಳವಣಿಗೆ, ಚಲನಶೀಲತೆಯೇ ಜೀವಂತಿಕೆ.

ಸಂವೇದನಾಶೀಲ ಪ್ರಜ್ಞೆಯಿದ್ದವರೇ ಸಾಹಿತ್ಯ ರಚಿಸಲು ಸಾಧ್ಯ ಎನ್ನುವುದಾದರೆ ಆ ಕಾಲಕ್ಕೆ ಬರೆದ ಬಹುಸಂಖ್ಯೆಯ ಲೇಖಕಿಯರೂ ಸುತ್ತಲಿನ ಸಾಹಿತ್ಯ ಮತ್ತು ವಿಮರ್ಶೆಯ ಪರಿಸರಕ್ಕೆ ಸ್ಪಂದಿಸಿಯೇ ಇರುತ್ತಾರೆ. ಅವರ ಸ್ಪಂದನೆಯನ್ನು ಮುಖ್ಯವಿಮರ್ಶೆ ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿತು ಅಥವಾ ಯಾವ ರೀತಿಯಲ್ಲಿ ಅದಕ್ಕೆ ವ್ಯಾಖ್ಯಾನ ಮಾಡುತ್ತಾ ಬರಲಾಗುತ್ತಿದೆ ಎನ್ನುವುದೂ ಈ ಅನುಸಾಂಧಾನಿಕ ಪ್ರಕ್ರಿಯೆಯ ಭಾಗವೇ.

ಆದ್ದರಿಂದ ಪ್ರಸ್ತುತ ಈ ಪ್ರಬಂಧದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯು ವಿವಿಧ ಸಾಹಿತ್ಯಪಂಥಗಳಿಗೆ ತಕ್ಕಂತೆ ಬದಲಾಗುತ್ತ ಸಾಗಿದ್ದಾಗ, ಲೇಖಕಿಯರು ಆ ಸಾಹಿತ್ಯಕ ಧೋರಣೆಗಳಿಗೆ ಹೇಗೆ ಮುಖಾಮುಖಿಯಾದರು? ಈ ಮುಖಾಮುಖಿ ಅನುಕರಣೆ–ವಿರೋಧದ, ಸ್ವೀಕೃತಿ–ನಿರಾಕೃತಿಯ ದ್ವಂದ್ವರೀತಿಗಳದೆ? ಅಥವಾ ವಾದವಿವಾದಗಳ ಮೂಲಕ ನಿಜವಾದ ಆಯಾ ಪಂಥೀಯ ವೈಚಾರಿಕ ಲಕ್ಷಣಗಳ ಅಳವಡಿಕೆಯ ರೀತಿಯದೆ? ಇಲ್ಲವೆ ದಿವ್ಯವಾದ ನಿರ್ಬಾಧಿತವಾದ ಉದಾಸೀನತೆಯದೆ? ಎಂಬುದನ್ನು ಗುರುತಿಸಲು ಇಲ್ಲಿ ಯತ್ನಿಸಬಯಸಿದ್ದೇನೆ.

ಸಹಜವಾಗಿಯೇ ಈ ಅನುಸಂಧಾನ ಬಹುಮುಖಿಯಾದದ್ದು ಮತ್ತು ಬಹುಸ್ತರೀಯ ಲಕ್ಷಣವುಳ್ಳದ್ದು. ಎಷ್ಟು ಜನ ಓದುಗರೋ ಅಷ್ಟು ಬಗೆಯ ಅರ್ಥಗಳು ಸಾಹಿತ್ಯಪಠ್ಯಗಳಿಗೆ ಇರುತ್ತವೆ ಎಂಬಂತೆಯೇ ಎಷ್ಟು ಮಹಿಳೆಯರು ಬರೆದರೋ/ಬರೆಯುತ್ತಿದ್ದಾರೋ ಅಷ್ಟು ಬಗೆಯ ಸಾಹಿತ್ಯ ಕುರಿತ ಗ್ರಹಿಕೆಗಳೂ ತಾರ್ಕಿಕವಾಗಿ ಸಾಧ್ಯವಾಗಬೇಕು, ಆದರೆ ಅನೇಕರು ಇಂಥ ವಿಚಾರಗಳ ಬಗ್ಗೆ ಹೆಚ್ಚು ಗಮನ ಹರಿಸಿರುವುದಿಲ್ಲ. ಗಮನಿಸಬೇಕಾದ ಅವಶ್ಯಕತೆ ಕೂಡ ಅವರಿಗೆ ಅರಿವಿಲ್ಲದಿರುವುದು ಸಾಧ್ಯ. ವಿಶೇಷತಃ ಅನುಕರಣಶೀಲತೆ ಸಾಹಿತ್ಯಸೃಷ್ಟಿಯ ಮುಖ್ಯಗತಿಯಾಗಿದ್ದಾಗ ಇಂಥ ಸಾಹಿತ್ಯ ಸಿದ್ಧಾಂತಗಳು ಹುಟ್ಟಲಾರವು. ಮಹಿಳಾ ಬರಹಗಾರಿಕೆ ನಾನು ಪ್ರಸ್ತಾಪಿಸಿರುವ ಐದಾರು ದಶಕಗಳ ದೀರ್ಘಾವಧಿಯಲ್ಲಿ ಕಥನ ಸಾಹಿತ್ಯರೂಪದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. ಆದರೆ ಸಾಹಿತ್ಯವಿಮರ್ಶೆಯ ದೃಷ್ಟಿಯಿಂದ ಆ ಅವಧಿಯಲ್ಲಿ ತುಂಬ ಕೆಲಸವು ನಡೆಯಲಿಲ್ಲ. ಹಾಗೆಂದು ಲೇಖಕಿಯರಾರೂ ವಿಚಾರ ಮಾಡಲಿಲ್ಲವೆಂದೂ ಅರ್ಥವಲ್ಲ. ಆಗ ನಡೆದ ಸಾಹಿತ್ಯ ವಿಮರ್ಶೆಯ ಚರ್ಚೆಗಳು ಮಹಿಳಾ ಬರಹಗಾರಿಕೆಯ ಅಂದಿನ ಸ್ವರೂಪವನ್ನು, ಅದರ ಕಲಾತ್ಮಕ ಮೌಲಿಕ ಪರಿಮಿತಿಗಳನ್ನು, ಅದು ಬದಲಾವಣೆಯಾಗಬೇಕಾದ ಅವಶ್ಯಕತೆಯನ್ನು ಬಲವಾಗಿ ಮುಂಚೂಣಿಗೆ ತಂದವು. ಆದ್ದರಿಂದ ಬರಹಗಾರರಾದ ಮಹಿಳೆಯರು ತಮ್ಮ ಸಮಕಾಲೀನ ಸಾಹಿತ್ಯಲೋಕದ ಕಾಳಜಿಗಳಿಗೆ ಬಲವಂತವಾಗಿಯಾದರೂ ಪ್ರವೇಶಿಸಲು ಯತ್ನಿಸುವಂತಹ ಪರಿಸರ ನಿರ್ಮಾಣವಾಯಿತು. ಇದು ಮಹಿಳೆಯರ ಅಭಿವ್ಯಕ್ತಿಯ ದೃಷ್ಟಿಯಿಂದ ಚಾರಿತ್ರಿಕ ಮಹತ್ವವಿರುವ ಘಟ್ಟ ಎಂಬುದರಲ್ಲಿ ಅನುಮಾನವಿಲ್ಲ.

2

ಕನ್ನಡ ಸಾಹಿತ್ಯ ವಿಮರ್ಶೆಯ ಮುಖ್ಯ ಪರಂಪರೆಯು ಮಹಿಳೆಯರ ಎಲ್ಲರ ಅಭಿವ್ಯಕ್ತಿಯನ್ನೂ ನಿರ್ಲಕ್ಷಿಸಿದ್ದಿಲ್ಲ, ಹಾಗೆಯೇ ಎಲ್ಲರ ಬರಹಕ್ಕೂ ವಿಮರ್ಶೆಯ ಮಾನ್ಯತೆಯನ್ನು ದೊರಕಿಸಿಕೊಟ್ಟದ್ದೂ ಇಲ್ಲ. ಬರೆಯತೊಡಗಿದ ಮಹಿಳೆಯರ ಸಂಖ್ಯೆ ಕಡಿಮೆಯಿದ್ದಾಗ ಮಹಿಳೆಯಾಗಿ ಬರೆಯುತ್ತಾರಲ್ಲ ಎಂಬುದೇ ವಿಶೇಷ ವಿದ್ಯಮಾನ. ಆ ಕಾಲದಲ್ಲಿ ಅಂಥ ಮೊದಲಿಗರು ಬರೆದದ್ದು ಹೆಚ್ಚಿಲ್ಲದಿದ್ದರೂ ಪುರುಷ ವಿಮರ್ಶಕರು ಅವರ ಬರಹಗಳನ್ನು ಸ್ವಾಗತಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ ಮೆಚ್ಚುಗೆ ಪ್ರಶಂಸೆಗಳನ್ನು ಬರಹದಲ್ಲೂ ದಾಖಲಿಸಿದ ಚರಿತ್ರೆಯನ್ನು ಈಗ ನಾವು



ಗುರುತಿಸಿದ್ದಾಗಿದೆ. ಆದರೆ ಈ ರೀತಿ ಮೆಚ್ಚುಗೆಯ ರೀತಿಯ ವಿಮರ್ಶೆ ಯಾವಾಗ ಲೇಖಕಿಯರಿಗೆ ದೊರೆತಿದೆ ಎಂಬುದು ಕುತೂಹಲಕರ. ಸೂಕ್ಷ್ಮವಾಗಿ ನೋಡಿದಲ್ಲಿ, ಯಾವಾಗ ಮಹಿಳೆಯರು ಬರೆದದ್ದು ಆ ಕಾಲದ ಮುಖ್ಯ ಸಾಹಿತ್ಯದೊಂದಿಗೇ ಅದರ ಮೌಲ್ಯ ನಿರೀಕ್ಷೆಗಳೊಂದಿಗೆ ಸಹಜವಾಗಿ ಬೆರೆತುಕೊಳ್ಳುವ ರೀತಿಯದಾಗಿತ್ತೋ ಅಂಥ ಎಲ್ಲ ಸಂದರ್ಭಗಳಲ್ಲೂ ಲೇಖಕರು ಹಾಗೂ ವಿಮರ್ಶಕರೂ ಮುಕ್ತವಾಗಿ ಅಂಥವರ ಕೃತಿಗಳ ಬಗ್ಗೆ ಪ್ರಶಂಸೆ ಮಾಡಿದ್ದಾರೆ.

ನಿದರ್ಶನಕ್ಕಾಗಿ, ತಿರುಮಲೆ ರಾಜಮ್ಮನವರ ಮಾದರಿಯನ್ನು ನೋಡಬಹುದು. ಅವರು ಬದುಕಿದ್ದು, ಬರೆದದ್ದೂ ತಿರುಮಲಾಂಬಾ ಅವರ ಕಿರಿಯ ಸಮಕಾಲೀನರಾಗಿ. ಆದರೆ ಅವರ ಸಾಹಿತ್ಯ ಮಾತ್ರ ಸಂಪೂರ್ಣವಾಗಿ ನವೋದಯ ಕಾವ್ಯವೇ. ಮೂರೇ ಮೂರು ಗೀತರೂಪಕಗಳನ್ನು ಮುಖ್ಯವಾಗಿ ಆಕೆ ಬರೆದಿದ್ದರೂ ಮಾಸ್ತಿಯವರಿಂದ ಹಿಡಿದು ವಿ.ಸೀ., ಎಸ್.ಕೆ. ರಾಮಚಂದ್ರರಾಯರ ವರೆಗೆ ಅನೇಕರ ಮುಕ್ತ ಪ್ರಶಂಸೆ ಮಾತ್ರವಲ್ಲ, ಭಾರತಿಯವರ ಸಾಹಿತ್ಯದ ಮೌಲಿಕತೆ ಕೂಡ ಎತ್ತಿಹಿಡಿದಿರುವ ವಿಮರ್ಶೆ ಆಕೆಯ ರಚನೆಗಳಿಗೆ ದೊರೆಯಿತು.

–(ತಿರುಮಲೆ ರಾಜಮ್ಮ 1992 ಪುಟ. 54–62)


ಒಂದೇ ಕಾಲಘಟ್ಟದಲ್ಲಿದ್ದರೂ ತಿರುಮಲಾಂಬಾ ಮತ್ತು ತಿರುಮಲೆ ರಾಜಮ್ಮನವರ ವ್ಯಕ್ತಿತ್ವ, ಧ್ಯೇಯ, ಬರವಣಿಗೆಗಳು ಅವರವರ ವೈಯಕ್ತಿಕ ಬದುಕುಗಳ ಹಾಗೆಯೇ ತೀರಾ ವಿರುದ್ಧ ಜಾಗಗಳಲ್ಲಿ ಹೊಮ್ಮಿ ಬಂದಂಥವು. ನವೋದಯದ ಧೋರಣೆಗಳಿಗೆ ಹತ್ತಿರಕ್ಕೆ ಬರದಿದ್ದ ತಿರುಮಲಾಂಬಾ ಬರಹ ವಿಮರ್ಶಕರಿಂದ ಮೂಲೆಗುಂಪಾದರೆ. ಅದೇ ನವೋದಿತರೆಲ್ಲರ ಪ್ರೀತಿ ತಿರುಮಲೆ ರಾಜಮ್ಮನಿಗೆ ಸಂದಿದೆ.

ಸಾಹಿತ್ಯ ಮತ್ತು ಸಾಹಿತ್ಯವಿಮರ್ಶೆಯ ಮುಖ್ಯವಾಹಿನಿಯ ಜೊತೆ ಮಹಿಳಾ ಬರಹಕ್ಕೆ ಸಂವಾದಿತ್ವ ಇದ್ದಾಗಲೇ ಅವರಿಗೆ ಬೆಂಬಲವೂ ಕಂಡುಬಂದಿದೆ ಎಂಬುದಕ್ಕೆ ಬೇಂದ್ರೆಯವರು ಗೌರಮ್ಮ, ಜಾನಕಮ್ಮ ನವರನ್ನು ಮೆಚ್ಚಿದ್ದರಲ್ಲಿ, ದ.ಬಾ. ಕುಲಕರ್ಣಿ ಗೌರಮ್ಮನವರಿಗೆ ಬಲವಾದ ಬೌದ್ಧಿಕ, ಭಾವನಾತ್ಮಕ ಬೆಂಬಲ ನೀಡಿದ್ದರಲ್ಲಿ, ಸ.ಸ. ಮಾಳವಾಡರು ಶ್ಯಾಮಲಾದೇವಿಯವರ 'ಹೂಬಿಸಿಲು' 'ಹೊಂಬಿಸಿಲು' ಕಥಾ ಸಂಕಲನ ಗಳಿಗೆ ಬರೆದ ಸಹೃದಯ ವಿಮರ್ಶೆಯಲ್ಲಿ ಕಾಣಿಸುತ್ತದೆ. ಹೀಗೇ ಅನೇಕ ನಿದರ್ಶನಗಳನ್ನು ಹೇಳಬಹುದು.

ಮುಖ್ಯ ಪರಂಪರೆಯೊಂದಿಗೆ ಲೇಖಕಿಯರ ಸಾಹಿತ್ಯ ಹೊಂದಿಕೊಳ್ಳ ಲಾಗದಂಥ ಸ್ಥಿತಿಗೆ ಬಹುದೊಡ್ಡ ನಿದರ್ಶನ ಎಂದರೆ ನಾನು ಚರ್ಚಿಸಲು ಹೊರಟಿರುವ ಕಾಲಘಟ್ಟದ ಮಹಿಳಾ ಬರಹಗಾರಿಕೆಯದೇ ಆಗಿದೆ. ಸಣ್ಣಕಥೆ, ಕಾದಂಬರಿಗಳ ಪ್ರಕಾರಗಳಲ್ಲಿ ಮಾತ್ರವೇ ಮಹಿಳೆಯರು ತೊಡಗಿದ್ದಕ್ಕೆ ಅಂದಿನ ಆರ್ಥಿಕಾದಿ ಸಾಂಸ್ಕೃತಿಕ ಪರಿಸ್ಥಿತಿಗಳು ಸೃಷ್ಟಿಸಿದ್ದ ಒತ್ತಡಗಳು ಬಹು ಮೂಲಭೂತವಾದ ಕಾರಣಗಳು. ಮುದ್ರಣ ತಂತ್ರದ ಕ್ಷೇತ್ರದಲ್ಲಾದ ವೈಜ್ಞಾನಿಕ ಅಭಿವೃದ್ಧಿ, ಪತ್ರಿಕಾರಂಗದ ಔದ್ಯಮೀಕರಣ, ಬಗೆ ಬಗೆಯ ಪತ್ರಿಕೆಗಳ ಸಂಖ್ಯೆಯ ತೀವ್ರ ಹೆಚ್ಚಳ, ಶಿಕ್ಷಣಾವಕಾಶ ಸಿಕ್ಕಿದ್ದ ಬಿಡುವುಳ್ಳ ಮಧ್ಯಮವರ್ಗೀಯ ಓದುಗರ ಸಂಖ್ಯೆಯ ಹೆಚ್ಚಳ, ಮತ್ತು ಅವರ ಮನರಂಜಿಸಬಲ್ಲ ಸರಳ ಲಲಿತ ಕಥನಸಾಹಿತ್ಯಕ್ಕೆ ವಿಪರೀತ ಬೇಡಿಕೆಯುಂಟಾದ್ದು ಮುಂತಾದ ಆರ್ಥಿಕ ಬೆಳವಣಿಗೆಯು 'ಜನಪ್ರಿಯ' ಸಾಹಿತ್ಯ ಹುಟ್ಟಿದ್ದರ ಮೂಲದಲ್ಲಿತ್ತು.

ಇಂತಹ ಒತ್ತಡಗಳ ನಡುವೆ, ವಿದ್ಯಾವಂತ ಹೆಣ್ಣಿನ ಸ್ವಪ್ರಜ್ಞೆ, ಸ್ವತಂತ್ರ ವಿಚಾರ ಸಾಮರ್ಥ್ಯವನ್ನು ಸಾಹಿತ್ಯಕ್ಕೆ ಕರೆತಂದ ದಿಟ್ಟ ಲೇಖಕಿ ತ್ರಿವೇಣಿ ಹೊಮ್ಮಿಬಂದರು. ಅವರು ಬರೆದದ್ದು, ಬದುಕಿದ್ದು ತೀರ ಸ್ವಲ್ಪಕಾಲ, ಆದರೆ ಎಂದಿಗೂ ಚರಿತ್ರೆಯಲ್ಲಿ ಅಳಿಸಲಾಗದಂಥ ಕುರುಹೊಂದನ್ನು ತಮ್ಮದನ್ನಾಗಿ ಉಳಿಸಿಹೋದರು. ಮೇಲುಜಾತಿಗಳ ಮಧ್ಯಮವರ್ಗದ ವಿದ್ಯಾವಂತ ಹೆಣ್ಣುಮಕ್ಕಳ ಎಂದರೆ ಅದರಲ್ಲಿದ್ದ ಆ ಹೊಸತನ, ಲವಲವಿಕೆ ಹಾಗೂ ಆಡುಮಾತಿನ ಸೊಗಸುಗಾರಿಕೆಗಳೇ ಅನೇಕ ಲೇಖಕಿಯರ ಹುಟ್ಟಿಗೆ ಪ್ರೇರಣೆಯನ್ನೂ ಒದಗಿಸಿದವು. ಕಿಂದರಿಜೋಗಿಣಿಯಾದ ತ್ರಿವೇಣಿಯ ಹಿಂದೆ ಹಿಂದೆ ಮಂತ್ರಮುಗ್ಧರಾದ ಲೇಖಕಿಯರು ಸಾಗಿದರು. ತ್ರಿವೇಣಿ ಬದುಕಿಗೆ ಮಂಗಳಹಾಡಿ ಕಣ್ಮರೆಯಾಗಿ ಹೋದಮೇಲೂ ಈ ಹಿಂಬಾಲಕತನದಲ್ಲೇ ಮುಂದುವರೆದು ಸಾಗಿದ ಮಹಿಳಾ ಕಥನ ಸಾಹಿತ್ಯ ಮಾರುಕಟ್ಟೆಯಲ್ಲಿ ಗೆಲುವು ಕಂಡರೂ ಕಲಾತ್ಮಕತೆ ಮೌಲಿಕತೆಗಳ ಸಾಹಿತ್ಯ ವಿಮರ್ಶೆಯ ನಿರೀಕ್ಷೆಗಳ ದೃಷ್ಟಿಯಲ್ಲಿ ಈ ಬರಹ ಕುರುಡಾಗಿ ಹೋಗಿ ಪ್ರಪಾತಕ್ಕೆ ಬಿದ್ದ ಇಲಿಗಳ ಸ್ಥಿತಿಯದಾಯಿತು.

ತ್ರಿವೇಣಿಯ ಮಾದರಿಯ ಅನುಸರಣೆಯಲ್ಲಿ ಸೃಷ್ಟಿಯಾದ ಎಸರಲ್ಲಿ ಸಾರವು ಕುಗ್ಗಿರಬಹುದು. ಅದಕ್ಕೆ ತ್ರಿವೇಣಿ ಕಾರಣರಲ್ಲ. ಬದಲಾಗಿ ಸ್ವಂತಿಕೆಯುಳ್ಳ ವಿಚಾರಶಕ್ತಿ, ಕಥಿಸಬಲ್ಲ ಪ್ರತಿಭೆ, ಹೊಸಕಾಲದ ಬದುಕಿನ ಹಲವು ಕ್ಷೇತ್ರಗಳಿಂದ ಆಯ್ದ ವಸ್ತುಗಳನ್ನು ಸಾಹಿತ್ಯಕ್ಕೆ ತರುವ ಯತ್ನ ಮುಂತಾದವು ಗಳಿಂದಾಗಿ ತ್ರಿವೇಣಿಯವರು ಪ್ರಶಂಸಿಸು ವವರಿಗೂ, ಟೀಕಿಸುವವರಿಗೂ ಅಂದಿಗೂ ಇಂದಿಗೂ ಒಂದೇರೀತಿ ಒದಗಿ ಬರುತ್ತಿದ್ದಾರೆ! ಮೆಚ್ಚುಗೆ, ತಿರಸ್ಕಾರಗಳು ಹೇಗೆ ಅವರ ಸಾಹಿತ್ಯಕ್ಕೆ ಮರಣೋತ್ತರ ವಿಮರ್ಶಾಪ್ರಶಸ್ತಿ ಗಳಾಗಿವೆ ಎಂಬುದಕ್ಕೆ ಈ ಕೆಲವು ಮಾದರಿಗಳತ್ತ ನೋಡೋಣ.



1. "ತ್ರಿವೇಣಿ ಎಂಬ ಲೇಖಿಕೆಯರ ಗುಣವತ್ತಾದ ಬರವಣಿಗೆಯ ಬಗ್ಗೆ ಮೆಚ್ಚಿಗೆಯನ್ನು ತಿಳಿಸುವುದು ಅವಶ್ಯ. ಈವರೆಗೆ ಅವರು ಬರೆದಿರುವ ಏಳೆಂಟು ಕಾದಂಬರಿಗಳಲ್ಲಿ ಅಚ್ಚಹೊಸದಾರಿಯಲ್ಲಿ 'ಮೊದಲಹೆಜ್ಜೆ' ಇದೆ. ಹೊಸ 'ಅಪಸ್ವರ'ಗಳೂ 'ಅಪಜಯ'ಗಳೂ ಇರುತ್ತವೆ. ಈವರೆಗೆ ಕನ್ನಡಕ್ಕೆ 'ಮುಚ್ಚಿದ ಬಾಗಿಲು' ತೆರೆದಿದೆ. ಜೇಲು, ಆಸ್ಪತ್ರೆ–ಅದರಲ್ಲಿ ಹುಚ್ಚರಾಸ್ಪತ್ರೆ ಸಹ–ಇವುಗಳಲ್ಲಿಯ ಜೀವನಕ್ರಮ ರೂಪತಾಳಿದೆ. ತ್ರಿವೇಣಿಯವರ ಕೃತಿಗಳಲ್ಲಿ 'ಬೆಕ್ಕಿನ ಕಣ್ಣು' ತನ್ನ ರೀತಿಯಿಂದ ಪ್ರಭಾವಿಯಾದ ವಿಶಿಷ್ಟ ಕೃತಿ. ಹೊಸಗನ್ನಡ ಕಾದಂಬರೀ ಪ್ರಪಂಚಕ್ಕೆ ವಿನೂತನ ಕಾಣಿಕೆ ಎಂದು ಹೆಮ್ಮೆಯಿಂದ ಹೇಳಬಹುದು."

–(ರಂ.ಶ್ರೀ ಮುಗಳಿ; 1963, ಪುಟ. 257–58)

2. "ಮುಖ್ಯವಾಗಿ ಗಂಡುಹೆಣ್ಣಿನ ಸಹಜೀವನ ಅವರ ಕಾದಂಬರಿಗಳ ವಸ್ತು. ಅಂತಃಕರಣದ ಹೊಂದಾಣಿಕೆಯ ಜೀವನದ ಶ್ರೀಮಂತಿಕೆಯನ್ನು ಮತ್ತೆ ಮತ್ತೆ ಚಿತ್ರಿಸುತ್ತಾರೆ. ಪುರುಷನ ಪ್ರೇಮ, ತಾಯ್ತನದ ಹಿಗ್ಗು ಇವನ್ನು ಹೆಣ್ಣು ಎಷ್ಟರಮಟ್ಟಿಗೆ ಬಯಸುತ್ತಾಳೆ ಎಂಬುದನ್ನು ಹೆಣ್ಣಿನ ದೃಷ್ಟಿಯಿಂದ ನಿರೂಪಿಸುತ್ತಾರೆ... ಮನೋವಿಜ್ಞಾನವನ್ನು ಬಳಸಿದುದರಿಂದ ಅವರು ಹೊಸ ಹಾದಿಯನ್ನು ಹಿಡಿದರು ಎಂದು ತೋರಿದರೂ ಅವರ ಕಾದಂಬರಿಗಳ ಮೌಲ್ಯಗಳು ಅಂದಿನವರೆಗೆ ಕಂಡುಬಂದಿದ್ದ ಮೌಲ್ಯ ಗಳಿಗಿಂತ ಭಿನ್ನವಾಗಿರಲಿಲ್ಲ"

–(ಎಲ್.ಎಸ್. ಶೇಷಗಿರಿರಾವ್, 1999 ಪು. 158)

3. ಅ.ನ.ಕೃ ಅವರ ಸಣ್ಣಕಥೆಗಳೊಂದಿಗೆ ತ್ರಿವೇಣಿಯವರ ಕಥೆಗಳನ್ನು ಹೋಲಿಸುತ್ತಾ ಲಂಕೇಶರು ಬರೆಯುತ್ತಾರೆ: "ಇದೇ ವರ್ಗ ಕಾಳಜಿಯ

ಇನ್ನೊಂದು ಮುಖವನ್ನು ತ್ರಿವೇಣಿಯವರ ಕತೆಗಳಲ್ಲಿ ಕಾಣುತ್ತೇವೆ. ಇಲ್ಲಿಯ ಹಣಾಹಣಿ ಹೆಣ್ಣು-ಗಂಡುಗಳ ನಡುವೆ. ಗಂಡಸರ ದೃಷ್ಟಿಯಿಂದಲೇ ಹೆಣ್ಣಿನ ಬದುಕನ್ನು ನೋಡುತ್ತಿದ್ದ ಓದುಗರಿಗೆ ತ್ರಿವೇಣಿಯವರ ಕತೆಗಳು ತುಂಬ ಹೊಸತಾಗಿ ಕಂಡರೂ ಕೊಂಚ ಯೋಚಿಸಿದರೆ, ಇಲ್ಲಿಯ ಟೊಳ್ಳು ಹೊಳೆಯುತ್ತದೆ. ಸಂಪ್ರದಾಯದ ಕಟ್ಟಿನಲ್ಲೇ ಇರಲು ತೃಪ್ತಳಾದ ಇವರ ಹೆಣ್ಣು ತನ್ನ ಸಿಟ್ಟನ್ನೆಲ್ಲ ಗಂಡಸಿಗೆ ಗುದ್ದಿ ತೀರಿಸಿಕೊಳ್ಳುತ್ತಾಳೆ. ಗಂಡಸು ಈ ಆಘಾತಕ್ಕೆ ತಕ್ಕವನೇ ಅನ್ನಿಸಿದರೂ ಅನುಭವದ ದೃಷ್ಟಿಯಿಂದ ಹೊಸದೇನೂ ದಕ್ಕುವುದಿಲ್ಲ"

-(ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ; ಪುಟ. 94)

4. "ತ್ರಿವೇಣಿಯವರ ಬೇರೆ ಸಾಧನೆಗಳು ಏನೇ ಇರಲಿ, ಹೆಣ್ಣಿನ ಅದೃಷ್ಟ ಮತ್ತು ಭವಿಷ್ಯದ ಪ್ರಶ್ನೆಯನ್ನು ಕಾದಂಬರಿ ಲೋಕಕ್ಕೆ ತಂದವರು ಅವರೆ ಎಂಬುದು ಮಾತ್ರ ನಿರ್ವಿವಾದವಾದ ಸಂಗತಿ. ಮಧ್ಯಮವರ್ಗದ ಹೆಣ್ಣಿನ 'ಮುಕ್ತಿ' ಎಲ್ಲಿ? ವಿವಾಹದ ಕಂಕಣದಲ್ಲೆ, ಉದ್ಯೋಗದ ಕಂಕಣದಲ್ಲೆ, ಅವಳು ಅರಳುವುದು ಹೇಗೆ ಎಂಬ ಪ್ರಶ್ನೆಯನ್ನು ಮತ್ತೆ ಮತ್ತೆ ಅವರು ಒಂದೇ ರೀತಿಯ ಪಾತ್ರಗಳಂತೆ ಕಾಣುವ ನೂರೆಂಟು ಪಾತ್ರಗಳ ಮೂಲಕ ಎದುರಿಸಿದರು. ಹೀಗಾಗಿ ಅಕ್ಷರ ಕಲಿತು ತನ್ನ ಬಗ್ಗೆ, ತನ್ನ ಭವಿಷ್ಯದ ಬಗ್ಗೆ ನೂರೆಂಟು ಕನಸುಗಳನ್ನು ಕಟ್ಟುವ ವಯಸ್ಸಿನಲ್ಲಿ ತನ್ನ ನಾಡಿಯ ಮಿಡಿತ, ತನ್ನ ಉಸಿರಾಟದ ಲಯ, ತನ್ನ ಪ್ರೇಮದ ಕಂಪನ, ಗಂಡಸಿನಿಂದ ತಿರಸ್ಕೃತರಾದಾಗ ಆಗುವ ಅವಮಾನ ಇವುಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ ತ್ರಿವೇಣಿಯ ಕಾದಂಬರಿಗಳಲ್ಲಿ ತನ್ನದೇ ಪ್ರತಿಬಿಂಬ ಕಂಡು ಅದಕ್ಕೇ ಮಾರು ಹೋಗಿರಬೇಕು. ಹೀಗೆ ಸಾಹಿತ್ಯ ಕೃತಿಗಳಲ್ಲಿ ನಮ್ಮ ಪ್ರತಿಬಿಂಬವನ್ನು ನಾವೇ ಕಾಣುತ್ತಾ ಅನುಭವಿಸುವ ಸುಖ ಕೂಡ ಇಂತಹ ಕಾದಂಬರಿಗಳಿಗೆ ಓದುಗರನ್ನು ಬದ್ಧಮಾಡಿಬಿಡುತ್ತವೆ, ಸ್ಥಿರೀಕರಿಸಿಬಿಡುತ್ತವೆ"

-(ಕೆ. ಸತ್ಯನಾರಾಯಣ; ತ್ರಿವೇಣಿ: 1989, ಪು. 39)

5. "ಸ್ಪಷ್ಟ ಸ್ತ್ರೀಪರ ಧ್ವನಿ, ದ್ವಿಸ್ತರ ನ್ಯಾಯ ವಿರೋಧ, ಮನೋವಿಶ್ಲೇಷಣಾ ಸಿದ್ಧಾಂತದ ಹಿನ್ನೆಲೆಯಲ್ಲಿ ಮೂಡಿಬಂದ ಉದಾರವಾದಿ ನೆಲೆ, ಮಹಿಳೆಗೆ ವಿದ್ಯೆಯ ಅಗತ್ಯದ ಪ್ರತಿಪಾದನೆ, ಸಂಕ್ರಮಣ ಕಾಲದ ಮಹಿಳೆಯರ ಅನೇಕ ಸಮಸ್ಯೆಗಳನ್ನು ಕುರಿತ ಕಾಳಜಿ, ಸಾಂಪ್ರದಾಯಿಕ ಜೀವನ ವ್ಯವಸ್ಥೆಯಲ್ಲಿನ ಮಹಿಳೆಯರ ಬದುಕಿನ ಕೆಲವು ವಿಶಿಷ್ಟ ಮುಖಗಳತ್ತ ಬೆಳಕು, ಮಹಿಳೆಯರಿಗೆ ಸಂಬಂಧಿಸಿದಂತೆ ಸಾಮಾಜಿಕ ಕೌಟುಂಬಿಕ ವಲಯಗಳಲ್ಲಿನ ಅನೇಕ ಜೀವವಿರೋಧಿ ನಿಲುವುಗಳನ್ನು ಕುರಿತು ಪ್ರತಿಭಟನೆ, ಮಹಿಳೆಯರ ವಿಶಿಷ್ಟ ಜೀವನ ಸಂದರ್ಭ ಮತ್ತು ಅನುಭವವನ್ನು ಪ್ರತಿಬಿಂಬಿಸುವಿಕೆ-ಇಂಥ ಅನೇಕ ಅಂಶಗಳನ್ನು ತನ್ನೊಡಲಿನಲ್ಲಿ ಹೊಂದಿರುವ ತ್ರಿವೇಣಿಯವರ ಸಾಹಿತ್ಯ ಸಹಜವಾಗಿ ಚಾರಿತ್ರಿಕ ಮಹತ್ವದ ಪ್ರಸ್ತುತತೆಯ ದೃಷ್ಟಿಯಿಂದ ಗಮನಿಸಬೇಕಾದ್ದಾಗಿದೆ"



-(ವಿಜಯಾದಬ್ಬೆ; ತ್ರಿವೇಣಿ, 1989, ಪುಟ. 60)

ಮುಖ್ಯಸಾಹಿತ್ಯ ವಿಮರ್ಶೆಯ ದಾರಿಯಲ್ಲಿ ನವೋದಯದಿಂದ ಹಿಡಿದು ನವ್ಯೋತ್ತರದ ಸ್ತ್ರೀವಾದಿ ವಿಮರ್ಶೆ ವರೆಗಿನ ವಿವಿಧ ವಿಮರ್ಶಾಘಟ್ಟಗಳಲ್ಲಿ ವಿವಿಧ ವಿಮರ್ಶಕರ ವೈಚಾರಿಕ ಮೂಸೆಯೊಳಗೆ ಹೊಕ್ಕುಬಂದಿರುವ ತ್ರಿವೇಣಿಯವರ ಬರಹದ ಎಷ್ಟೆಲ್ಲ ಲಕ್ಷಣಗಳಿಗೆ ಯಾವೆಲ್ಲ ವ್ಯಾಖ್ಯಾನಗಳು ದೊರೆತಿವೆ ಎಂಬುದನ್ನು ಗಮನಿಸಿದಾಗ ನೋಡುವ ದೃಷ್ಟಿಕೋನದ ವೈವಿಧ್ಯ ಅಷ್ಟು ಅಚ್ಚರಿಯನ್ನು ಹುಟ್ಟಿಸಲಾರದು. ಆದರೆ ತ್ರಿವೇಣಿ ಅಲ್ಪವಯಸ್ಸಿಗೇ ತೀರಿಕೊಳ್ಳದೆ, ತಮ್ಮ ಕಾಲದ ಅನೇಕರ ಹಾಗೆ ದೀರ್ಘಕಾಲ ಅದೇ ರೀತಿ ಬರೆಯುತ್ತಾ ಹೋಗಿದ್ದು, ಅವರ ಸಾಹಿತ್ಯಕ ಧೋರಣೆಗಳೇನೆಂದು ಯಾರಾದರೂ ಪ್ರಶ್ನಿಸಿದ್ದರೆ ಆಕೆ ಏನು ಹೇಳುತ್ತಿದ್ದರೋ ಕಲ್ಪಿಸುವುದು ಅಸಾಧ್ಯ. ಆದರೆ ಅವರ ಮಾದರಿ ಹಿಡಿದು ಹೊರಟು ದೀರ್ಘಕಾಲ ಸಂತೃಪ್ತ-ಸಮೃದ್ಧ ಕಾದಂಬರಿ ಸಾಹಿತ್ಯ ಸೃಷ್ಟಿಸಿ ಅಪಾರ ಜನಪ್ರಿಯತೆ ಪಡೆದಿದ್ದ ಉಷಾ ನವರತ್ನರಾಂ ರೀತಿಯಲ್ಲೇ ಬಹುಶಃ ತ್ರಿವೇಣಿ ಹೀಗೆ ಹೇಳಬಹುದಿತ್ತೇನೋ ಹೇಳುವುದು ಸುಲಭವಲ್ಲ. ಉಷಾ ನವರತ್ನರಾಂ ಅವರ ಸ್ವವಿಮರ್ಶೆ ಹೀಗಿದೆ:

"ಕಾದಂಬರಿಯನ್ನು ಬರೆಯಲು ನನಗೆ ಇಂತಹುದೇ ಒಂದು ಧ್ಯೇಯವಿದೆಯೆಂದು ಹೇಳಲಾರೆ. ಮಹಿಳೆ ಬದುಕಿನ ಎಲ್ಲಾ ಸ್ತರಗಳಲ್ಲೂ ಇಂದು ಪುರುಷನೊಡನೆ, ಸಮಾಜದೊಡನೆ, ನಂಬಿಕೆಗಳೊಡನೆ, ತನ್ನ ವ್ಯಕ್ತಿತ್ವದೊಡನೆ ಸ್ಪಂದಿಸಬೇಕಾಗುತ್ತದೆ. ಆಗ ಅವಳಿಗುಂಟಾಗುವ ನೋವು, ನಲಿವು, ಅವಳೆದುರಿಸುವ ಕಷ್ಟ, ಸುಖ ಇವೆಲ್ಲವೂ ಅವಳ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ. ವಿದ್ಯಾವಂತೆಯರ ಉದ್ಯೋಗಸ್ಥೆಯಾದ ಹೆಣ್ಣಿನ ಬದುಕಿನ ಚಿತ್ರಣವೊಂದಾದರೆ, ಮನೆಯಲ್ಲಿ ನಾಲ್ಕುಗೋಡೆಗಳ ಮಧ್ಯೆಯಿದ್ದು ಹೆಣಗುವುದೂ ಇನ್ನೊಂದು ಚಿತ್ರ. ಪತಿ-ಪತ್ನಿ ಇಬ್ಬರೂ ಉದ್ಯೋಗಸ್ಥರಾದರೆ ಒಂದು ಸಮಸ್ಯೆಯಾದರೆ, ಒಂದೇ ಉದ್ಯೋಗವನ್ನು ಹಿಡಿದಿರುವ ಪತಿಪತ್ನಿಯರ ಮಧ್ಯೆ ಬೆಳೆಯಬಹುದಾದ ಸ್ಪರ್ಧೆ ಮತ್ತೊಂದು. ಹೆಣ್ಣಿನ ಶೋಷಣೆ ಒಂದೇ ರೀತಿಯದೆಂದು ಹೇಳಲಾಗುವುದಿಲ್ಲ; ಒಂದರಿಂದಲೇ ಎಂದು ಹೇಳಲಾಗುವುದಿಲ್ಲ. ತಿಳಿದೋ ತಿಳಿಯದೆಯೋ ಅವಳ ಸಮೀಪ ವ್ಯಕ್ತಿಗಳೂ, ಬೇಕಾದವರೂ ಅವಳನ್ನು ಶೋಷಣೆಗೊಳಪಡಿಸಬಹುದು... ಈ ವಿಷಯದಲ್ಲಿ ಸತ್ಯ ಸುಳ್ಳಿಗಿಂತ ವಿಸ್ಮಯಕಾರಿ ಎನ್ನಬಹುದು. ನನ್ನ ಕಾದಂಬರಿಗಳೆಲ್ಲ ಹೆಚ್ಚುಕಡಿಮೆ ಇಂತಹ ಘಟನೆಗಳ ಸುತ್ತ ಹೆಣೆದವು'

-(ಹೊಂಬೆಳಕು; 19 ಪುಟ 106-107)

ಉಷಾ ನವರತ್ನರಾಂ ಅವರನ್ನು ಅದೇ ಮಾದರಿಯ ಕಾಕೋಳು ಸರೋಜಾರಾವ್, ಸಾಯಿಸುತೆ, ವಿಜಯಶ್ರೀ ಮುಂತಾದ ಮುಂದಿನ 'ಜನಪ್ರಿಯ' ಲೇಖಕಿಯರ ಪ್ರತಿನಿಧಿ ಎಂದು ಭಾವಿಸಿದರೆ, ಇವರುಗಳಿಗೂ ತ್ರಿವೇಣಿಗೂ ಇರುವ ರಚನಾತ್ಮಕ ವ್ಯತ್ಯಾಸಗಳು ಸ್ಪಷ್ಟವಾಗಬಲ್ಲವು. ಉಷಾ ಅವರು ಮಹಿಳೆಯರ ಒಂದೊಂದು ಸಮಸ್ಯೆ ಅನುಭವಗಳಿಗೆ ಒಂದೊಂದು ಕಾದಂಬರಿ ಎಂಬ ಚೌಕಟ್ಟನ್ನು ಇಟ್ಟುಕೊಂಡಿದ್ದು, ಮನೋರಂಜಕ ಸಾಹಿತ್ಯದ ಮೊಟ್ಟಮೊದಲ ಲಕ್ಷಣವೂ ಆಗಿರುತ್ತದೆ. ಸಮಸ್ಯೆಗಳ ಬಿಡಿಬಿಡಿ ಸರಳಗ್ರಹಿಕೆಗಳಿಂದ ಎಷ್ಟೆಷ್ಟು ಪುಟಗಳನ್ನೂ ತುಂಬಿಸಬಲ್ಲ ಹಿಗ್ಗಿಸಬಲ್ಲ ಸಾಮರ್ಥ್ಯ ಇದು. ಮಾತ್ರವಲ್ಲ ಇಲ್ಲಿ ಉಷಾ ತಮ್ಮ ಕಾದಂಬರಿಗಳ ವಸ್ತುಗಳ ಬಗ್ಗೆ ವಿವರಣೆ ನೀಡಿದ್ದಾರೆಯೇ ಹೊರತು ಅದರ ನಿರ್ವಹಣೆಯ ಸ್ವರೂಪ, ವಿಧಾನ, ತಂತ್ರಗಳ ಬಗ್ಗೆ ನಿಶ್ಚಿಂತರೇ ಆಗಿರುವುದನ್ನು ಗಮನಿಸಬೇಕು. ಹೀಗಾಗಿ ಅವರ ತರಹದ ಮಹಿಳೆಯರು ಬರಹವನ್ನು ಕಲೆಯ ಸೃಷ್ಟಿ ಎಂದು ತಿಳಿದದ್ದಕ್ಕಿಂತ ಹೆಚ್ಚಾಗಿ ತಮ್ಮ ವಿಚಾರವನ್ನು ಓದುಗರಿಗೆ ತಿಳಿಸಲು ಒಂದು 'ರಹದಾರಿ' ಎಂಬಂತೆ ಸ್ವೀಕರಿಸಿದ್ದುದನ್ನು ಕಾಣಬಹುದು.

ತ್ರಿವೇಣಿಯವರ ಸಾಹಿತ್ಯದಲ್ಲಿ ಕಾಣಿಸಿಕೊಂಡ ವಸ್ತುವೈವಿಧ್ಯ, ಶೋಷಣೆಯ ವಿರುದ್ಧ ಎತ್ತಿದ ಧ್ವನಿ, ನಿರೂಪಣೆಯ ಹೊಸ ವೈಖರಿ ಮುಂತಾದ ಹಲವು ಲಕ್ಷಣಗಳಲ್ಲಿ ಅವರ ದಾರಿಯನ್ನು ಅನುಸರಿಸಿ ಹೊರಟವರು ಕೆಲವನ್ನು ಮಾತ್ರವೇ ಹೆಕ್ಕಿಕೊಂಡದ್ದು ಕಾಣಿಸುತ್ತದೆ.



ಪೂರ್ವ ಲೇಖಕಿಯನ್ನು 'ಪರೀಕ್ಷಿಸುವ' 'ವಿಸ್ತರಿಸುವ' ನಿಟ್ಟಿನ ಸಾಹಿತ್ಯ ಪರಿಕಲ್ಪನೆಗಳಾಗಲಿ, ಅವರ ಮೌಲಿಕತೆಯನ್ನು ವಿಚಾರ ಮಾಡಬಲ್ಲ ವಿಮರ್ಶಾಪ್ರಜ್ಞೆಯಾಗಲಿ ಈ ಲೇಖಕಿಯರಲ್ಲಿ ಒಂದು ಜ್ಞಾನಶಿಸ್ತಿನ ಕಲಿಕೆಯ ರೀತಿಯಲ್ಲಿ ಇರಲಿಲ್ಲ. ಅದನ್ನು ಪಡೆವ ಅವಕಾಶಗಳೂ ಅವರಿಗೆ ಇರಲಿಲ್ಲ. ತುಂಬು ಕುಟುಂಬದ ಮನೆಗೆಲಸವನ್ನು ದಿನವಿಡೀ ದುಡಿದು ಎಲ್ಲರೂ ಮಲಗಿಕೊಂಡಾದ ಮೇಲೆ ನಡುರಾತ್ರಿಯಲ್ಲಿ ತಮ್ಮ ಸಾಹಿತ್ಯರಚನೆಯ ಕಾಯಕಕ್ಕೆ ಕೈಹಾಕುತ್ತಿದ್ದ ವಾಣಿಯಂಥ ಎಷ್ಟೋ ಜನ ಆ ಅವಧಿಯಲ್ಲಿ ಬರೆದವರಿದ್ದಾರೆ. ಆದರೆ ಇವರಲ್ಲಿ ತಕ್ಕಮಟ್ಟಿನ ವಿಮರ್ಶಾತ್ಮಕ ಎಚ್ಚರವಿದ್ದ ಅನುಪಮಾ ನಿರಂಜನ, ಎಚ್.ಎಸ್. ಪಾರ್ವತಿಯವರು ಬೇಗನೆ ತಮ್ಮದೇ ಆದ ಅಭಿವ್ಯಕ್ತಿ ವಿಧಾನವನ್ನು ಹುಡುಕಲೂ ಯತ್ನಿಸಿದ್ದಾರೆ. ತ್ರಿವೇಣಿಯವರ ರೀತಿಯಲ್ಲಿ ಬರೆದರೆ ಬೇಗ 'ಜನಪ್ರಿಯ'ರಾಗಬಹುದೆಂಬುದರ ಅರಿವು ಅನುಪಮಾ ಅವರಿಗಿತ್ತು. ಆದರೆ "ಆ ರೀತಿ ಬರೆಯಲು ನನಗೆ ಸಾಧ್ಯವಿರಲಿಲ್ಲ. ಇನ್ನೊಬ್ಬ ಸಾಹಿತಿಯ ಬರಹವನ್ನು ಎಷ್ಟೇ ಮೆಚ್ಚಿಕೊಂಡರೂ ಅನುಕರಣೆಗೆ ಕೈಹಾಕದೆ ಸ್ವಂತಿಕೆಯನ್ನು ಬೆಳೆಸಿಕೊಳ್ಳುವುದು ಸರಿ ಎಂಬ ತೀರ್ಮಾನಕ್ಕೆ ಬಂದು" ಕಾದಂಬರಿಗಳನ್ನು ತಾವು ಬರೆಯಲಾರಂಭಿಸಿದ್ದನ್ನು ಅವರು ಹೇಳುತ್ತಾರೆ.

–(ಅನುಪಮಾ ನಿರಂಜನ: 1990. ಪುಟ. 70)

ತಮ್ಮದು ಪ್ರಗತಿಶೀಲರು ಅನುಸರಿಸಿದ, ಮಾರ್ಕ್ಸ್‌ವಾದದಿಂದ ಪ್ರೇರಿತವಾಗಿದ್ದ ಸಾಹಿತ್ಯ ಚಿಂತನೆಯಾಗಿದ್ದು, ಅದು ಸಮಾಜವಾದಿ ಸೈದ್ಧಾಂತಿಕತೆಯಲ್ಲಿ ನಂಬಿಕೆ ಹೊಂದಿದ್ದುದನ್ನೂ ಅನುಪಮಾ ಸ್ಪಷ್ಟಪಡಿಸುತ್ತಾರೆ. 'ಕೊಳಚೆ ಕೊಂಪೆಯ ದಾನಿಗಳು' ಅಥವಾ ಅನೇಕ ಸಣ್ಣಕಥೆಗಳಲ್ಲಿ ಅನುಪಮಾ ಅವರ 'ಸಂಕೋಲೆಯೊಳಗಿಂದ' ಮತ್ತು 'ಚಿತ್ತಮೋಹನ' ಕಾದಂಬರಿಗಳು ಆ ರೀತಿಯ ದೃಢವಾದ ಪ್ರಗತಿಪರತೆಯನ್ನು ಮೈಗೂಡಿಸಿಕೊಂಡನಂತರದ ರಚನೆಗಳೆನ್ನಲು ಕಷ್ಟ. ಅವುಗಳಲ್ಲಿ ಸ್ತ್ರೀಯ ಕೌಟುಂಬಿಕ/ವೈವಾಹಿಕ ಜೀವನ ಕ್ರಮದಲ್ಲಿ ಸಂಪ್ರದಾಯಗಳ ಸಂಕೋಲೆಗಳು ಹೇಗೆ ಆಕೆಯನ್ನು ಸೆರೆಯಾಳಾಗಿಸಿವೆ, ಅವುಗಳಿಂದ ಬಿಡುಗಡೆ ಆಗುವ ಹೆಣ್ಣಿನ ಸ್ವಾತಂತ್ರ್ಯದ ಹಂಬಲದ ತೊಳಲಾಟಗಳೇನು ಎಂಬುದೇ ಜಿಜ್ಞಾಸೆಗೆ ಒಳಗಾಗುವ ವಸ್ತುಗಳು. ವೈವಾಹಿಕವಾಗಿ ದಿಗ್ಬಂಧಿಸಿರುವ ಬದುಕಿನಿಂದ ಹೊರಬರಲು ಹೆಣ್ಣು ಚಡಪಡಿಸುವುದು ಒಂದು, ವೈಧವ್ಯದ ಬವಣೆಗಳಿಂದ ಪಾರಾಗಲು ಮತ್ತೆ ವಿವಾಹದ ಚೌಕಟ್ಟಿಗೆ ಹಂಬಲಿಸುವುದು ಇನ್ನೊಂದು. ಇಂಥ ಸಮಸ್ಯೆಗಳನ್ನು ಆಯ್ದುಕೊಂಡರೂ ಅನುಪಮಾ ನಿರಂಜನ ತಮ್ಮದೇ ಮನದಾಳದಲ್ಲಿ ಬೇರೂರಿರಬಹುದಾದ ಸಂಸ್ಕೃತಿಯ ಬಿಗಿತದಿಂದ ಬಹುಶಃ ಹೊರಬರಲಾಗದ್ದರಿಂದಲೋ ಏನೋ ಈ ಎರಡೂ ಕಾದಂಬರಿಗಳು ಲೇಖಕಿಯು ಉದ್ದೇಶಿಸಿದ ಪ್ರಗತಿಯ ಆಶಯವನ್ನು ಕೊನೆಯವರೆಗೂ ತಲುಪಿಸಲಾರದೆ ಹೋಗುತ್ತವೆ.

ಕಾದಂಬರಿಕಾರ್ತಿಯರ ಕೃತಿಗಳಲ್ಲಿ ವಸ್ತುನಿರ್ವಹಣೆ ಹೇಗೆ ವಿಫಲವಾಗುತ್ತದೆ ಎಂಬುದನ್ನು ನವ್ಯವಿಮರ್ಶಕ ಗಿರಡ್ಡಿಗೋವಿಂದರಾಜ ಅವರು ತೀಕ್ಷ್ಣವಾಗಿ ಚರ್ಚಿಸಿದ್ದು ಅವರ ವಿಚಾರ ಪ್ರತಿಪಾದನೆಗೆಂದು ಅನುಪಮಾ ಅವರ 'ಸಂಕೋಲೆಯೊಳಗಿಂದ' ಮತ್ತು 'ಚಿತ್ತಮೋಹನ' ಕಾದಂಬರಿಗಳನ್ನು ವಿಶ್ಲೇಷಿಸುತ್ತಾರೆ. ಸ್ತ್ರೀಸ್ವಾತಂತ್ರ್ಯವನ್ನು ಉದ್ದೇಶವಾಗಿಟ್ಟುಕೊಂಡು ರಚಿತವಾದರೂ 'ಸಂಕೋಲೆಯೊಳಗಿಂದ' ಕಾದಂಬರಿಯಲ್ಲಿ ಗಂಡಿನ ದೌರ್ಜನ್ಯ, ದಬ್ಬಾಳಿಕೆಗಳು ಕೇಂದ್ರವಸ್ತುವಿಗೆ ಎಷ್ಟೂ ಹೊಂದಾಣಿಕೆಯಾಗದ ಇತರರ ವೃತ್ತಾಂತಗಳನ್ನು ಜೋಡಿಸಿರುವುದರಿಂದ ಕಾದಂಬರಿಯ ವಸ್ತುವಿಗೆ ಸಂಕೀರ್ಣತೆಯೇ ಇಲ್ಲದಂತಾಗಿ ಕೃತಿಗೊಂದಲ ಹುಟ್ಟಿಸುತ್ತದೆ ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ 'ಚಿತ್ತಮೋಹನ' ಕಾದಂಬರಿಯಲ್ಲಿ ವಿಧವಾ ವಿವಾಹದ ಸಮಸ್ಯೆಯನ್ನು ವಸ್ತುವಾಗಿಟ್ಟುಕೊಳ್ಳುವ ಲೇಖಕಿ, ನಾಯಕಿಯು ಅ ಸಮಸ್ಯೆಯನ್ನು ಎದುರಿಸಿ ನಿಭಾಯಿಸಬೇಕಾದ ಹಂತದಲ್ಲೇ ಅವಳು ಕೈ ಹಿಡಿಯಲಿದ್ದ ವರನನ್ನೇ ಅಪಘಾತದಿಂದ ಸಾಯುವಂತೆ ಮಾಡಿ ಸಮಸ್ಯೆಯನ್ನೇ ನಿವಾರಿಸಿಬಿಟ್ಟಿದ್ದಾರೆ ಎಂದು ಗುರುತಿಸುತ್ತಾರೆ. "ಕಾದಂಬರಿಯ ಈ ಕಠಿಣ ಘಟ್ಟದಲ್ಲಿ ಇಲ್ಲಿ ಲೇಖಕಿ ಸಮಸ್ಯೆಗಳನ್ನು ಎದುರಿಸುವುದೇ ಇಲ್ಲ. ಸಮಸ್ಯೆಯ ಪೂರ್ವತಯಾರಿಯಲ್ಲಿಯೇ ಕಾದಂಬರಿ ಮುಗಿದು ಬಿಡುತ್ತದೆ."

–(ಮಹಿಳೆ ಮತ್ತು ಕನ್ನಡ ಸಾಹಿತ್ಯ: 1929 ಪು. 31–31)

ಗಿರಡ್ಡಿಯವರ ಲೇಖನದಲ್ಲಿ ಅನುಪಮಾ ಅವರ ಜೊತೆಗೆ ತ್ರಿವೇಣಿ, ಎಚ್.ಎಸ್. ಪಾರ್ವತಿ, ಎಂ.ಕೆ. ಇಂದಿರಾ ಮತ್ತು ಜಯಲಕ್ಷ್ಮೀದೇವಿಯವರ ಕಾದಂಬರಿಗಳೂ ವಿಶ್ಲೇಷಣೆಗೆ ಒಳಪಟ್ಟಿವೆ. ಅವುಗಳ ಓದಿನಿಂದ ಒಟ್ಟಾಗಿ ಗಿರಡ್ಡಿ ತಲುಪಿರುವ ತೀರ್ಮಾನ ಹೀಗಿದೆ:

"ಕನ್ನಡ ಕಾದಂಬರಿಕಾರ್ತಿಯರ ಮುಕ್ಕಾಲುಪಾಲು ಕೃತಿಗಳಲ್ಲಿಯ ಒಡೆದು ಕಾಣುವ ಅಂಶವೆಂದರೆ ಇವುಗಳಲ್ಲಿ ಕೇಂದ್ರವಸ್ತುವೇ ಇಲ್ಲದಿರುವುದು. ಇವರಲ್ಲಿ ಹೆಚ್ಚು ಜನ ಕೇವಲ ಘಟನೆ ಇಲ್ಲವೆ ಪಾತ್ರವೇ ಮುಖ್ಯವಾದ ಕಥೆಗಳ ನಿರೂಪಣೆಯಲ್ಲಿ ಮಾತ್ರ ಆಸಕ್ತಿ ತಳೆದಿದ್ದಾರೆ. ಈ ಕಥೆಯ ಹಿಂದೆ ಒಂದು ನಿರ್ದಿಷ್ಟವಾದ ಉದ್ದೇಶ, ಘಟನೆ, ಪಾತ್ರವರ್ಣನೆ ಇತ್ಯಾದಿಗಳನ್ನೆಲ್ಲ ಒಂದು ಕೇಂದ್ರಕ್ಕೆ ಜೋಡಿಸುವ ವಸ್ತುವಿಲ್ಲ. ವಸ್ತುವೇ ಇಲ್ಲದ್ದರಿಂದ ಅದರ ಬಗೆಗೆ ಲೇಖಕಿ ತಳೆಯುವ ದೃಷ್ಟಿಕೋನ, ಮೌಲ್ಯವಿವೇಚನೆಯ ತೊಡಕು, ಆ ವಸ್ತುವಿನ ಸಂಕೀರ್ಣ ಸ್ವರೂಪವನ್ನು ತೋರಿಸುವ ಸಂವಿಧಾನ ಕೌಶಲ ಇತ್ಯಾದಿಗಳ ಪ್ರಶ್ನೆಗಳೇ ಏಳುವುದಿಲ್ಲ"

–(ಪೂರ್ವೋಕ್ತ ಪುಟ 26–27)

ನವ್ಯಸಾಹಿತ್ಯವಿಮರ್ಶಕರ ಪೈಕಿ ಇಷ್ಟಾದರೂ ಗಂಭೀರವಾಗಿ ಮಹಿಳೆಯರ ಕೃತಿಗಳನ್ನು ಓದಿ, ಒಳಗಿನಿಂದ ವಿಶ್ಲೇಷಿಸಿ, ತರ್ಕಬದ್ಧವಾಗಿ ತಮ್ಮ ವಿಮರ್ಶಾತ್ಮಕ ತೀರ್ಮಾನಗಳನ್ನು ಅಚ್ಚುಕಟ್ಟಾಗಿ ಮಂಡಿಸಿದ ಮಾದರಿ ಎಂದರೆ ಗಿರಡ್ಡಿಯವರದೇ. ಏಕೆಂದರೆ ಅದೇ ಪಂಥದ ಅನೇಕರು ಮಹಿಳಾ ಬರಹವನ್ನು ಓದುವ ತಾಳ್ಮೆ ಕೂಡ ತೋರಿಸದೆ ತೀರ್ಮಾನಗಳನ್ನೇ ಮುಂದಿಟ್ಟು ತಿರಸ್ಕರಿಸಿದುದನ್ನೂ ಕಾಣಬಹುದು. ಗಿರಡ್ಡಿಯವರ ವಿವರವಾದ ಈ ವಿಮರ್ಶಾ ವ್ಯಾಖ್ಯಾನ ಮುಂದೆ ಹಲವು ಲೇಖಕಿಯರಿಗೂ ಮಹಿಳೆಯರ ಕಥೆ ಕಾದಂಬರಿಗಳನ್ನು ಹೇಗೆ ವಿಮರ್ಶಿಸಬಹುದು ಎಂಬ ದಾರಿಯನ್ನು ತೋರಿಸಿಕೊಟ್ಟಂತೆ ಕಾಣಿಸುತ್ತದೆ. ಉದಾಹರಣೆಗೆ ಈ ಕೆಳಗಿನ ಉಲ್ಲೇಖಗಳನ್ನು ನೋಡಬಹುದು.

"ಕಾದಂಬರಿಕಾರ್ತಿಯರ ಕೃತಿಗಳನ್ನು ಓದಿ ಮುಗಿಸಿದಾಗ ಬಹುತೇಕ ಕೃತಿಗಳಲ್ಲಿ ಎದ್ದು ಕಾಣುವುದು ಜೀವನಾನುಭವದ ವೈವಿಧ್ಯವಿಲ್ಲದಿರುವುದು, ತೀವ್ರತೆ ಇಲ್ಲದಿರುವುದು, ಆರಿಸಿಕೊಂಡ ವಸ್ತುವನ್ನು ಕೇಂದ್ರವಾಗಿಟ್ಟುಕೊಂಡು, ಪಾತ್ರಗಳನ್ನು ಪರಿಣಾಮಕಾರಿಯಾಗಿ ಬೆಳೆಸುವ ರೀತಿ ಅನೇಕರಿಗೆ ಗೊತ್ತಿಲ್ಲ. ಎಷ್ಟೋ ಮಂದಿಗೆ ಪಾತ್ರಗಳ ಮೇಲೆ ಹತೋಟಿಯೇ ಇರುವುದಿಲ್ಲ.... ಬಹುಪಾಲು ಕಾದಂಬರಿಗಳು ವಿಫಲವಾಗಲು ಕಾರಣ ಅವುಗಳಲ್ಲಿ ಚಿತ್ರಿಸಿರುವ ಅವಾಸ್ತವ

ಸನ್ನಿವೇಶಗಳು, ದುರ್ಬಲ ಪಾತ್ರಸೃಷ್ಟಿ... ಯಾವ ಪೂರ್ವಸಿದ್ಧತೆಯೂ ಇಲ್ಲದೆ ಬರೆಯುವ ಪ್ರಯತ್ನ"

-(ಪಂಕಜಾ ಶ್ರೀನಾಥ್; ಲೇಖಕಿಯರ ಸಾಮಾಜಿಕ ಕಾದಂಬರಿಗಳು: 1982, ಪು. 150-60)

"ಆದರೆ ಹೆಚ್ಚಿನ ಲೇಖಕಿಯರು ತಂತ್ರದ ಬಗ್ಗೆ ವಿಶೇಷ ಕಾಳಜಿ ವಹಿಸದೆ ತಮ್ಮ ಅನುಭವದ ಪರಿಧಿಯಲ್ಲಿ ಬಂದ ವಿಷಯಗಳನ್ನು ಸಾಂಪ್ರದಾಯಿಕವಾಗಿಯೇ ನಿರೂಪಿಸಿ ತೃಪ್ತಿಪಟ್ಟುಕೊಳ್ಳುತ್ತಿರುವುದು ಸ್ತ್ರೀ ಕಥಾ ಸಾಹಿತ್ಯದ ಒಂದು ದೊಡ್ಡ ದೌರ್ಬಲ್ಯ, ಪ್ರಕೃತಿ, ಘಟಶ್ರಾದ್ಧ, ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ, ಅಣ್ಣಯ್ಯನ ಮಾನವಶಾಸ್ತ್ರ ಇಂಥ ಕಥೆಗಳಲ್ಲಿಯ ಹೊಸ ಒಲವುಗಳು, ವ್ಯಕ್ತಿಪ್ರಜ್ಞೆಯ ಹತ್ತಾರು ಮುಖಗಳನ್ನು ಹುಡುಕಿ ಅದರ ಹಿನ್ನೆಲೆಯಲ್ಲಿ ಹಬ್ಬಿಕೊಂಡಿರುವ ಪರಂಪರೆಯ ಪ್ರಜ್ಞೆಯೊಂದಿಗೆ ಸ್ಪಂದಿಸಬೇಕಾದಾಗ ಉಂಟಾಗುವ ಘರ್ಷಣೆಯ ಚಿತ್ರಣ, ತಕ್ಕುದಾದ ಭಾಷೆಯ ಬಳಕೆ ಇವುಗಳನ್ನೆಲ್ಲ ನೋಡಿದಾಗ ನಮ್ಮ ಲೇಖಕಿಯರು ಈ ದಿಸೆಯಲ್ಲಿ ಶ್ರಮಿಸಬೇಕಾದದ್ದು ಸಾಕಷ್ಟಿದೆಯೆಂದು ಕಂಡುಬಾರದಿರದು"

-(ಗೀತಾದೇಸಾಯಿ: ಆಧುನಿಕ ಮಹಿಳಾ ಕಥಾಸಾಹಿತ್ಯದಲ್ಲಿ ಸಮಕಾಲೀನ ಪ್ರಜ್ಞೆ : 1982, ಪು. 204)


ನವ್ಯಸಾಹಿತ್ಯದ ಆಕ್ರಮಣಕಾರಿ ಪ್ರವೇಶ ಮತ್ತು ಕನ್ನಡದ ಬೌದ್ಧಿಕ ಕ್ಷೇತ್ರವನ್ನು ಬಲವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡ ಆ ಪಂಥದ ಲೇಖಕವರ್ಗ, ಸಂಸ್ಕೃತಿಯ ಬಹುಮುಖ್ಯ ಆಯಾಮವೆಂದರೆ ಸಾಹಿತ್ಯ ಎಂದು ಓದುಗರು ಭಾವಿಸುವಷ್ಟು ಪ್ರಭಾವ ಬೀರಿತ್ತು. ಅದರ ವೈಚಾರಿಕತೆ ಹೇಗೆ ಅಂದಿನ ಹೊಸ ತಲೆಮಾರಿನ ಲೇಖಕಿಯರಾದ ಮಹಿಳೆಯರಲ್ಲೂ ವಿಮರ್ಶನ ಎಚ್ಚರವನ್ನು ಮೂಡಿಸಿತು ಎಂಬುದನ್ನು ಲೇಖಕಿಯರಿಬ್ಬರ ಈ ಮೇಲಿನ ಮಾತುಗಳು ಸೂಚಿಸಬಲ್ಲವು. ಆದರೆ ಆ ವೇಳೆಗಾಗಲೇ ಕಥೆ-ಕಾದಂಬರಿಗಳ ಮೂಲಕ ಜನರ ಆದರವನ್ನು ದೊಡ್ಡ ಪ್ರಮಾಣದ ಓದುಗರ ಅಭಿಮಾನಿವರ್ಗವನ್ನೂ ಬೆಳೆಸಿಕೊಂಡ ಹಿರಿಯ ಲೇಖಕಿಯರಿಗೆ ನವ್ಯಸಾಹಿತ್ಯ ಮತ್ತು ಅದರ ವಿಮರ್ಶಾ ವಿಧಾನಗಳು ಪರಕೀಯವಾಗಿಯೇ ಉಳಿದಿದ್ದವು. ಈ ರೀತಿಯ ಅಪರಿಚಿತತೆಯಿಂದಾಗಿ ಒಂದು ರೀತಿಯ ಕಂದರ ಲೇಖಕಿಯರಿಗೂ ನವ್ಯವಿಮರ್ಶೆಯ ಮುಖ್ಯವಾಹಿನಿಗೂ ಏರ್ಪಟ್ಟಂತೆ ಕಾಣುತ್ತದೆ. ಈ ಬಗ್ಗೆ ಅನುಪಮಾ ಅವರ ಈ ಕೆಳಗಿನ ನುಡಿಗಳು ನಿದರ್ಶನವೊದಗಿಸಬಲ್ಲವು.

"ನವ್ಯರ ಕಾಲದಲ್ಲಿ ಪಾಶ್ಚಿಮಾತ್ಯ ವಿಮರ್ಶಾ ಪದ್ಧತಿಯಿಂದ ಪ್ರಭಾವಿತರಾದ ಅನೇಕ ಹೊಸ ವಿಮರ್ಶಕರು ಹುಟ್ಟಿಕೊಂಡರು. ಕನ್ನಡ ಸಾಹಿತ್ಯದಲ್ಲೀಗ ಹೊಸ ಬಗೆಯ ವಿಮರ್ಶೆಗಳು ಕಾಣಬರತೊಡಗಿದವು. ಹಿಂದೆ ಪ್ರಕಟವಾಗುತ್ತಿದ್ದ 'ಸಹೃದಯ ವಿಮರ್ಶೆ'ಗಳು ಮಾಯವಾಗಿ ನಮ್ಮ ಸಾಹಿತ್ಯ ಲೋಕಕ್ಕೆ ಅಪರಿಚಿತವಾದ ವಿಮರ್ಶಾಮಾನದಂಡಗಳು ನೆಲೆ ಊರಿದವು. ಇದರ ಲಾಭ ಆದದ್ದು ನವ್ಯ ಲೇಖಕರಿಗೆ ಮಾತ್ರ, ಏಕೆಂದರೆ ಈ ವಿಮರ್ಶಕರು ಬಹುತೇಕ ಪ್ರಾಧ್ಯಾಪಕರಾಗಿದ್ದು, ತಮ್ಮ ಗುಂಪಿನವರ ಪುಸ್ತಕಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದರು. ಇದರಿಂದಾಗಿ ನವ್ಯ ಪುಸ್ತಕಗಳೇ ಶ್ರೇಷ್ಠ ಎಂಬ ಭ್ರಾಮಕಸ್ಥಿತಿ ಉಂಟಾಯಿತು. ಈ ಗುಂಪಿನವರಲ್ಲದ ಕೆಲವು ಪ್ರಖ್ಯಾತ ಲೇಖಕರ ಕೃತಿಗಳು ಅಲಕ್ಷ್ಯಕ್ಕೀಡಾದುವು"

-(ಬರಹಗಾರ್ತಿಯ ಬದುಕು. 1990 ಪು. 80)

"ಮಹಿಳೆಗೆ ಯಾವ ಒತ್ತಾಸೆಗಳೂ ಇಲ್ಲದ್ದರಿಂದ ಅವಳು ಹಿಂಬದಿಯಲ್ಲಿಯೇ ಉಳಿದುಬಿಡುವ ಪರಿಸ್ಥಿತಿ. 'ಮೂಕ' ಹಾಗೂ 'ಪ್ರಬಲ' ಸಂಸ್ಕೃತಿಗಳ ಮುಖಾಮುಖಿ ಯಾವಾಗಲೂ ಆಗುವುದು ಹೀಗೆಯೇ. ಹೆಣ್ಣುಮಕ್ಕಳ ಬದುಕು, ಅನುಭವ, ಬೌದ್ಧಿಕತೆ ಎಲ್ಲವೂ ಸೀಮಿತವಾದದ್ದೆಂದು ಹೀನೈಸಿ, ಗಂಭೀರ ವಿಮರ್ಶೆಗೆ ಅವು ಅನರ್ಹ ಎಂದು ಪರಿಗಣಿಸಿದ್ದು ನವ್ಯವಿಮರ್ಶೆಯ ದೊಡ್ಡ ದುರಂತ. ನವ್ಯರ ಪ್ರಾಬಲ್ಯ ಇದ್ದ ಕಾಲದಲ್ಲಿ ಮಹಿಳೆಯರ ಪುಸ್ತಕಗಳನ್ನು ಕೇಳುವವರೇ ಇಲ್ಲವಾಯಿತು. ಅವರ ಪ್ರಗತಿಯಲ್ಲಿ ಇದೊಂದು ದೊಡ್ಡ ಹಿಂಜರಿತ ಎನ್ನಬಹುದು"

-(ಬರಹಗಾರ್ತಿಯ ಬದುಕು: 1990, ಪು. 80-81)



ಅನುಪಮಾ ಅವರ ನುಡಿಗಳಲ್ಲಿ ಮಹಿಳಾ ಸಾಹಿತ್ಯದ ಬಗ್ಗೆ ನವ್ಯವಿಮರ್ಶೆ ಒಟ್ಟಾರೆ ತಳೆದಿದ್ದ ತಿರಸ್ಕಾರದ ಬಗ್ಗೆ ತೀವ್ರವಾದ ನೋವು ಇದೆ. ಆದರೆ ನವ್ಯಪಂಥದ ಒಳಗಿಂದಲೇ ಹೊಮ್ಮಿ ಬರುವಂಥ ವೀಣಾ ಶಾಂತೇಶ್ವರ ನವ್ಯ ವಿಮರ್ಶಕರ ಪರವಾದ ಪ್ರಬಲವಾದ ವಕ್ತಾರಿಕೆ ವಹಿಸಿದರು ಮತ್ತು ಕಳೆದ ಮೂರು ದಶಕಗಳಲ್ಲಿ ತಮ್ಮ ಅಂದಿನ ವೈಚಾರಿಕ, ತಾತ್ವಿಕ ನಿಲುವುಗಳಲ್ಲಿ ಯಾವುದೇ ಬದಲಾವಣೆಗೆ ಸಿದ್ಧರಿಲ್ಲದೆ ಅಂಟಿಕೊಂಡರು ಎಂಬುದು ನಾನು ಚರ್ಚಿಸುತ್ತಿರುವ ಸಂಧಿಕಾಲದ ಅನುಸಂಧಾನ ಪ್ರಕ್ರಿಯೆಯ ಒಂದು ಗಮನಾರ್ಹ ವಿದ್ಯಮಾನವೆಂದು ಭಾವಿಸುತ್ತೇನೆ.

ಅನುಪಮಾ ನಿರಂಜನರಂತೆ ತ್ರಿವೇಣಿಯವರಿಂದ ಪ್ರಭಾವಿತರಾಗಿ ಕಥೆ, ಕಾದಂಬರಿಗಳನ್ನು ಬರೆಯಲು ಆರಂಭಿಸಿದ ಎಚ್.ಎಸ್. ಪಾರ್ವತಿ ಬಹುಬೇಗ ತಮ್ಮದೇ ವೈಚಾರಿಕ ನಿಲುವನ್ನೂ ಶೈಲಿಯನ್ನೂ ಗುರುತಿಸಿಕೊಂಡ ವಿಷಯದಲ್ಲೂ ಅನುಪಮಾ ಅವರನ್ನೇ ಹೋಲುತ್ತಾರೆ. ಪಾರ್ವತಿ ಸ್ಪಷ್ಟವಾದ ವೈಚಾರಿಕ ಸಿದ್ಧಾಂತಗಳನ್ನು ಮುಂದಿಟ್ಟುಕೊಂಡು ಸಾಹಿತ್ಯರಚನೆಗೆ ತೊಡಗಿದವರಲ್ಲ; ಹಾಗೆಯೇ ಸಾಹಿತ್ಯವಿಮರ್ಶೆಯಲ್ಲೂ ಇಂಥದೇ ಎಂದು ಬೆರಳುಮಾಡಿ ಗುರುತಿಸಬಹುದಾದ ನಿಲುವು ಅವರಿಗಿತ್ತು ಎನ್ನಲು ಕಷ್ಟವಾಗುತ್ತಿದೆ. ಹೀಗಿದ್ದರೂ, ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ(ಭಾರತಿ), ಕೊಡಗಿನ ಗೌರಮ್ಮ, ತ್ರಿವೇಣಿ ಮುಂತಾದ ಮಹಿಳಾ ಬರಹಗಾರರ ಬದುಕನ್ನೂ ಸಾಹಿತ್ಯಾಭಿವ್ಯಕ್ತಿಯನ್ನೂ ಶೋಧಿಸಿ, ದಾಖಲಿಸುವಲ್ಲಿ, ಮಹಿಳೆಯರ ಬದುಕಿಗೂ ಬರಹಕ್ಕೂ ಇರುವ ಸಂಬಂಧದ ಬಗ್ಗೆ ವಿಚಾರ ಮಾಡುವಲ್ಲಿ ಪಾರ್ವತಿ ತೋರಿಸಿರುವ ಆಸಕ್ತಿ ಕುತೂಹಲಕರವಾದದ್ದು. ಇಂದಿನ ಸ್ತ್ರೀವಾದದ ಪರಿಭಾಷೆಯಲ್ಲಿ ಹೇಳುವುದಾದರೆ ಪಾರ್ವತಿ ಮೊದಲು Gynocriticism ಆರಂಭಿಸಿದ ವಿಮರ್ಶಕಿಯೇ ಸರಿ! ಅವರದೇ ಶಬ್ದಗಳಿಂದ ವಿವರಿಸುವುದಾದರೆ ಅವರದು ಸದಾ "ಸ್ತ್ರೀಪರ ಕಾಳಜಿ"ಯುಳ್ಳ ವಿಮರ್ಶೆಯಾಗಿದೆ. ಆದರೆ ಮಿತಿಗಳ ಅರಿವಿಲ್ಲದ, ಕೇವಲ ಕೊಂಡಾಟದ ವಿಮರ್ಶೆ ಅದಲ್ಲ.

ಈ ಮಾತಿಗೆ ತ್ರಿವೇಣಿಯವರ ಬಗೆಗಿನ ಅವರ ವಿಮರ್ಶಾನುಡಿಗಳನ್ನು ಉದಾಹರಣೆಯಾಗಿ ನೋಡಬಹುದು:

"...ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆ, ಸರಳಭಾಷೆ, ತಿಳಿಹಾಸ್ಯ ಇವುಗಳಿಂದಾಗಿ ತ್ರಿವೇಣಿ ಬಹುಬೇಗ ಜನಪ್ರಿಯರಾದರು. ಅವರು ತಮ್ಮ ಒಂದೊಂದು ಕಾದಂಬರಿಯಲ್ಲಿ ಸಮಾಜದ ಒಂದೊಂದು ಸಮಸ್ಯೆಯನ್ನು ವಸ್ತುವಾಗಿ ಆರಿಸಿಕೊಂಡರು. ಅದನ್ನು ಓದುಗರ ಮನಮುಟ್ಟುವಂತೆ ನಿರೂಪಿಸಿದರು. ಅವರ ಪಾತ್ರಗಳು ಅಷ್ಟೇ ವೈವಿಧ್ಯಮಯ, ಅಷ್ಟೇ ಸಹಜವಾದವು, ಜೀವಂತವಾದವು... ಆದರೆ ಒಟ್ಟಾಗಿ ತ್ರಿವೇಣಿಯವರ ಕೃತಿಗಳನ್ನು ಸಮೀಕ್ಷಿಸಿದಾಗ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಅವರಿಗೆಷ್ಟೇ ಕಾಳಜಿ ಇದ್ದರೂ ಗೃಹಿಣಿಯ ಬದುಕೇ ಹೆಣ್ಣಿನ ಆದರ್ಶ ಎಂದು ಅವರು ಬಲವಾಗಿ ನಂಬಿದ್ದಂತೆ ಭಾಸವಾಗುತ್ತದೆ. ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ತ್ರಿವೇಣಿಯವರಿಗಿರುವ ಭಾವನೆ ತೀರಾ ಸಾಂಪ್ರದಾಯಿಕ ಎನ್ನುವುದನ್ನು ಗಮನಿಸಿದಾಗ

ಆಶ್ಚರ್ಯವಾಗುತ್ತದೆ; ಜೊತೆಗೆ ವಿಷಾದವೆನಿಸುತ್ತದೆ. ಸಾಹಿತಿಯ ದೃಷ್ಟಿ ತನ್ನ ಜೀವಿತ ಕಾಲಕ್ಕಿಂತ ಮುಂದಿರಬೇಕು ಎನ್ನುತ್ತಾರೆ. ಆದರೆ ತ್ರಿವೇಣಿಯವರ ದೃಷ್ಟಿ ಸುತ್ತಲ ಸಮಾಜದಲ್ಲಿ ಬೇರೂರಿದ್ದ ವಿಚಾರಗಳಿಗಿಂತ ಭಿನ್ನವಾಗಿರಲಿಲ್ಲ ಎನ್ನುವುದು ಅವರ ಕಾದಂಬರಿಗಳನ್ನು ಓದಿದಾಗ ಅರ್ಥವಾಗುತ್ತದೆ."

–(ಎಚ್.ಎಸ್. ಪಾರ್ವತಿ: ಚಿಂತನ–ಮಂಥನ, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು, 1948, ಪು. 97–98)

ಮಹಿಳಾ ಸಾಹಿತ್ಯದ "ಹಿಂದುಳಿತ" ಕುರಿತಂತೆ, ನವ್ಯ ಪುರುಷ ವಿಮರ್ಶಕರಿಗಿಂತ ನಿರ್ದಾಕ್ಷಿಣ್ಯವಾಗಿ "ವಸುನಿಷ್ಠ"ವಾಗಿ ಆಕ್ರಮಣಕಾರಿ ವೈಚಾರಿಕ ನಿಲುವಿನಿಂದ ವೀಣಾ ಅವರ ವಿಮರ್ಶಾ ಲೇಖನಗಳು ಇತರ ಮಹಿಳಾ ವಿಮರ್ಶೆಗಿಂತ ಭಿನ್ನವಾಗುತ್ತವೆ.


ಮಹಿಳಾ ಸಾಹಿತ್ಯವು ನಿರ್ದಿಷ್ಟ ರೀತಿಯ ಪಾಶ್ಚಾತ್ಯ ಸಾಹಿತ್ಯಾಧ್ಯಯನ, ವಿಮರ್ಶಾ ಶಿಸ್ತಿನ ಅರಿವು, ತರಬೇತಿಗಳನ್ನು ಪಡೆಯದೆ ಇದ್ದ ಕಾರಣಕ್ಕಾಗಿಯೇ, ಅಂಥ ಎಲ್ಲ ಶಸ್ತ್ರಗಳಿಂದ ಸಜ್ಜಿತರಾಗಿ 'ಹೋರಾಟ'ಕ್ಕೆ ಹೊರಡುವ ವೀಣಾ ಅವರ ದೃಷ್ಟಿಯಲ್ಲೂ ಕಳಪೆಯದೆಂದೇ ಅರ್ಥೈಸಲ್ಪಡುವುದನ್ನು ಅವರ ಈ ಕೆಲವು ಮಾತುಗಳಲ್ಲಿ ಕಾಣಬಹುದು:

ತಮ್ಮ ಹಿಂದಿನ ಪೀಳಿಗೆ ಹಾಗೂ ಸಮಕಾಲೀನ ಲೇಖಕಿಯರ ಕೃತಿಗಳನ್ನು ಕುರಿತು ಚರ್ಚಿಸುತ್ತಾ ವೀಣಾಶಾಂತೇಶ್ವರ ಹೀಗೆ ಬರೆಯುತ್ತಾರೆ:

"ಬಾಲ್ಯವಿವಾಹ, ವಿಧವಾ ವಿವಾಹ, ವೇಶ್ಯಾ ಸಮಸ್ಯೆ, ಜಾತೀಯತೆ, ವರದಕ್ಷಿಣೆ ಮುಂತಾದ ಪಿಡುಗುಗಳು ಹಾಗೂ ಹಲವು ಬಗೆಯ ಮನೋವೈಪರೀತ್ಯಗಳು, ಅನೇಕ ಕಂದಾಚಾರಗಳು ಮೂಢನಂಬಿಕೆಗಳು ಇತ್ಯಾದಿಗಳ ಬಗ್ಗೆ ನಮ್ಮಲ್ಲಿ ಮಹಿಳೆಯರಿಂದ ರಚಿತವಾದ ಸಾಕಷ್ಟು ಕತೆ ಕಾದಂಬರಿಗಳಿವೆ.... ಆದರೆ ಒಟ್ಟು ಇವೆಲ್ಲವನ್ನೂ ಪರಿಶೀಲಿಸಿದಾಗ ಒಮ್ಮೆಲೆ ಅನಿಸುವುದೇನೆಂದರೆ ಇಲ್ಲಿನ ವೈಚಾರಿಕತೆ ಬಹಳ ತೆಳುವಾಗಿದೆ. ಅದಕ್ಕೆ ಸಂಕೀರ್ಣತೆಯಿಲ್ಲ, ಆಳವಿಲ್ಲ, ಗಟ್ಟಿತನವಿಲ್ಲ. ನಮ್ಮ ಮಹಿಳೆಯರ ಅನುಭವಗಳಲ್ಲಿ ವೈವಿಧ್ಯತೆಯಿಲ್ಲ"

–(ಮಹಿಳೆ ಮತ್ತು ಕನ್ನಡ ಸಾಹಿತ್ಯ: 1979, ಪುಟ. 71)

ಪಿತೃ/ಪುರುಷ ಸಂಸ್ಕೃತಿಯ ಪರಿಣಾಮವಾಗಿ ಮಹಿಳೆಯರಲ್ಲೇ ಕೀಳರಿಮೆ ಬೆಳೆದಿರುವುದನ್ನು, ಅದರ ಮತ್ತೊಂದು ಅತಿರೇಕದಲ್ಲಿ ಪುರುಷರೊಂದಿಗೆ ಪೈಪೋಟಿಗಿಳಿವ ಸಮಾನತೆ, ಸ್ವಾತಂತ್ರ್ಯ ಕುರಿತ ಹೆಗ್ಗಳಿಕೆಗಳೆರಡನ್ನೂ 'ಸರಿ' ಅಲ್ಲ ಎಂದು ಭಾವಿಸುವ ವೀಣಾ ನವ್ಯಪಂಥವು ಪ್ರತಿಪಾದಿಸುವ ರೀತಿಯಲ್ಲಿ ಸಾಹಿತ್ಯಕ್ಕೆ, ಸಾಹಿತ್ಯ ವಿಮರ್ಶೆಗೆ ಲಿಂಗಭೇದವಿರದು ಎಂದು ಮತ್ತೆ ಮತ್ತೆ ಪ್ರತಿಪಾದಿಸುವುದುಂಟು. ಶ್ರೇಷ್ಠಸಾಹಿತ್ಯ, ಉತ್ತಮಸಾಹಿತ್ಯ ಮತ್ತು ಅಂಥ ಸಾಹಿತ್ಯದ ಮೇರು ಪರಂಪರೆ (Great Tradition) ಯ ಪರಿಕಲ್ಪನೆಗಳಲ್ಲಿ ಬೆಳೆದುಬಂದ ವೀಣಾ ಅವರ ವಿಚಾರಗಳು, ಮಹಿಳೆಯರೊಂದಿಗೆ, ಅವರ ವಾಸ್ತವದ ಸ್ಥಿತಿಗತಿಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವಾಗಲೆಲ್ಲ ವ್ಯಗ್ರವಾಗುವಂತೆ ತೋರುತ್ತದೆ. "ವೈಚಾರಿಕತೆ ಅಂದರೆ ಅನುಭವವನ್ನು ವಿಶ್ಲೇಷಿಸಿ, ಸಾರಾಸಾರ ವಿಚಾರಮಾಡಿ, ಅಲಿಪ್ತತೆಯಿಂದ–ಅಂದರೆ ಒಂದು ನಮೂನೆ cold ಆಗಿ ನಿರ್ಧಾರಕ್ಕೆ ಬರುವುದು. ಈ ಮೂಲಕ ತನ್ನ ಸಂಬಂಧವನ್ನು ತನ್ನ ಪರಿಸರದೊಂದಿಗೆ ಪುನಃ ಪುನಃ establish ಮಾಡಿಕೊಳ್ಳುವುದು. ಒಳ್ಳೆಯ ಸಾಹಿತ್ಯದಲ್ಲಿ ಅದು ಗದ್ಯವೇ ಇರಲಿ, ಪದ್ಯವೇ ಇರಲಿ ಸತತವಾಗಿ ಆಗಲೇಬೇಕಾದ ಪ್ರಕ್ರಿಯೆ ಇದು" ಎಂದು ಲೀವಿಸ್ ವಿಚಾರವನ್ನು ಪ್ರಸ್ತಾಪಿಸುವ ವೀಣಾ 'ಅನುಭವಗಳ ಅಲಿಪ್ತ ವಿಶ್ಲೇಷಣೆ – Rational thinking' ಮಹಿಳೆಗೆ ಸಾಧ್ಯವೆ ಎಂದು ಪ್ರಶ್ನೆ ಹಾಕಿಕೊಂಡು ಮಹಿಳೆ ಕೇವಲ ಭಾವನಾಜೀವಿ ಎನ್ನುವ ಸಾಂಸ್ಕೃತಿಕ ಪರಿಸರಜನ್ಯ ತಿಳಿವಳಿಕೆಯನ್ನು ನಿರಾಕರಿಸುತ್ತಾರೆ. ಆದರೆ ಮಹಿಳಾ ಬರಹಗಾರಿಕೆಯಲ್ಲಿ ಇಂಥ ಭಾವ–ವಿಚಾರಗಳೆರಡರ ಸೃಷ್ಟಿಶೀಲ ಬೆಸುಗೆಯು ಹೊಮ್ಮಿ ಬರದೆ ಇರುವುದನ್ನು ಕಂಡು ಅವರು ವ್ಯಗ್ರವಾಗುತ್ತಾರೆ ಎನಿಸುತ್ತದೆ. *–(ಪೂರ್ವೋಕ್ತ ಪುಟ. 49)*



ಮಹಿಳೆಯರ ಬರಹಗಳ ಈ ವೈಚಾರಿಕ ಕೊರತೆಗೆ ಅವರ ಅಧ್ಯಯನ ಸೀಮಿತತೆ ಕೂಡ ಕಾರಣವೆಂದು ವೀಣಾ ಭಾವಿಸುವುದನ್ನು ಕಾಣಬಹುದು.

"ಇಪ್ಪತ್ತನೆಯ ಶತಮಾನದ ಮೊದಲರ್ಧದಲ್ಲಿ ಹಾಗೂ ಉತ್ತರಾರ್ಧದಲ್ಲಿ ನಮ್ಮ ಭಾಷೆಯ ಹಾಗೂ ಇತರ ಭಾಷೆಗಳ ಅನೇಕ ತೂಕದ ಸಾಹಿತಿಗಳು ಸಮರ್ಥವಾಗಿ ಬಳಸಿದ ಪ್ರಜ್ಞಾಪ್ರವಾಹ ತಂತ್ರವಾಗಲಿ, ಅಸಂಗತ ನಿರೂಪಣಾ ತಂತ್ರವಾಗಲಿ, ಅಂತರಂಗ ವಿಶ್ಲೇಷಣಾ ವಿಧಾನವಾಗಲಿ ನಮ್ಮ ಲೇಖಕಿಯರ ಗಮನ ಸೆಳೆಯಲಿಲ್ಲ. ನೇರ ನಿರೂಪಣಾ ವಿಧಾನದಿಂದ ಅಂದರೆ ಸುಲಭವಾದ ತಂತ್ರದ ಬಳಕೆಯಿಂದಲೂ ಎಷ್ಟೊಂದು ಸಲ ಸುಂದರವಾದ ಕೃತಿ ರಚಿಸಬಹುದು... ಆದರೆ ತಂತ್ರದ ಯೋಗ್ಯ ಬಳಕೆಯಿಂದ ಒಂದು ಕೃತಿಯ ಕಲಾತ್ಮಕ ಮೌಲ್ಯವನ್ನು ತುಂಬ ಹೆಚ್ಚಿಸಬಹುದು ಎನ್ನುವ ಅಂಶ ನಮ್ಮಲ್ಲಿ ಅನೇಕರ ಲಕ್ಷ್ಯ ಸೆಳೆದಿಲ್ಲ"


–(ಲೇಖನ ಸೌರಭ, 1989 ಪುಟ. 52–53)

ಯಾವ ರೀತಿಯ ವೈಚಾರಿಕತೆ ಮತ್ತು ಕಥನದ ತಂತ್ರಗಾರಿಕೆಗಳ ಬಗ್ಗೆ ವೀಣಾ ಪ್ರಬುದ್ಧವಾದ ಶಾಬ್ದಿಕ ವಾದಗಳನ್ನು ಮುಂದಿಡುತ್ತಾರೋ ಆ ಬಗೆಯ ಬೌದ್ಧಿಕತೆಗಳಷ್ಟೇ ಸಾಹಿತ್ಯದಲ್ಲಿ ಘನವಾದ ಮೌಲಿಕತೆಯನ್ನೂ ತಂದುಕೊಡಬಲ್ಲವು ಎಂಬುದು ಅಸಮಗ್ರ ವೈಚಾರಿಕ ತೀರ್ಮಾನ ಮಾತ್ರ. ಏಕೆಂದರೆ ಪ್ರತಿಯೊಂದು ಕಾಲಘಟ್ಟದಲ್ಲೂ ಹಿಂದಿನವರ ರಚನೆಗಳ ಮರುವಿಮರ್ಶೆ ಮರುಮೌಲ್ಯಮಾಪನ ನಡೆಯುತ್ತಿರುವುದೇ ಆ ಪರಂಪರೆಯ ಜೀವಂತಿಕೆಯ ಲಕ್ಷಣ. ಆದರೆ ಸ್ತ್ರೀವಾದ, ಸ್ತ್ರೀವಾದಿ ವಿಮರ್ಶೆಗಳ ಅನುಸಂಧಾನದ ವಿಷಯ ಬಂದಾಗ ವೀಣಾ ತಾವೇ ಹಿಂದೆ ಪ್ರತಿಪಾದಿಸಿದಂಥ ನವ್ಯ ತಾತ್ತ್ವಿಕತೆ, ಅದರ ಅಸ್ತಿತ್ವವಾದಗಳ ಜೊತೆಗೆ ಸ್ತ್ರೀವಾದಿ ತಾತ್ತ್ವಿಕತೆಯನ್ನೂ ಹೊಂದಿಸಲು ಪರಿಶ್ರಮ ಪಡುವ ರೀತಿಯು ಕುತೂಹಲ ಹುಟ್ಟಿಸುವಂಥದು. ಒಂದು ಕಡೆ ನವ್ಯ ಪುರುಷ ಬರಹಗಾರಿಕೆಯು ಹೆಣ್ಣಿನ ಅನುಭವ ಸಂವೇದನಾಶೀಲತೆಗಳನ್ನು ನಿರ್ಲಕ್ಷಿಸಿದ್ದು ಇಡೀ ಅವರ ಸಾಹಿತ್ಯ ಪುರುಷಕೇಂದ್ರಿತತೆಯ ಪುರುಷಾಹಮಿಕೆ, ಆತ್ಮರತಿಗಳಿಂದ ತುಂಬಿರುವುದರ ಬಗ್ಗೆ ಆಕೆ ಗಮನ ಸೆಳೆಯುತ್ತಾರೆ. ಆದರೆ ಅದೇ ನವ್ಯಪಂಥದ ವಿಮರ್ಶಕರು ಮಾತ್ರ ಇಂಥ ಜೆಂಡರ್ ಪಕ್ಷಪಾತದಿಂದ ನಿರ್ಲಿಪ್ತರು ಎಂದೂ ವಾದಿಸುತ್ತಾರೆ. ಕನ್ನಡದಲ್ಲಿ ಸ್ತ್ರೀವಾದಿ ವಿಚಾರಗಳನ್ನು ಮಹಿಳಾ ವಿಮರ್ಶಕರು ಬಳಸಲು ಆರಂಭಿಸಿದಾಗ ಮೊಟ್ಟ ಮೊದಲ ಅನುವಾದ, ಚಿಂತನೆಗಳು ಹುಟ್ಟಿದ್ದುದೇ ಸಿಮೋನ್ ದ ಬೋವಾ ಅವರ ಪ್ರಭಾವದಿಂದ. ಆದರೆ ಅದಾದ ಒಂದು ದಶಕದ ಬಳಿಕ ಸ್ತ್ರೀವಾದಿ ವಿಮರ್ಶೆ ಎಂದರೆ ಸ್ತ್ರೀಪರವಾದ ವಿಮರ್ಶೆಯೆಂದು ಕನ್ನಡದಲ್ಲಿ ತಪ್ಪಾಗಿ ಅರ್ಥೈಸಲಾಗಿದೆ ಎಂಬ ಬಲವಾದ ಆತಂಕದಿಂದ ಅಂಥ ವಿಮರ್ಶೆ ಹೇಗಿರಬೇಕು ಎಂಬ ಬಗ್ಗೆ ಸಿಮೋನ್ ದ ಬೋವಾಯಿಂದ ಹಿಡಿದು ಇತರ ಪಾಶ್ಚಾತ್ಯ

ಸ್ತ್ರೀವಾದಕರ ವಿಚಾರಗಳನ್ನು ಮುಂದಿಡುತ್ತಾರೆ. ಹೇಗೆ ತುಂಬ ಪರಸ್ಪರ ವಿರುದ್ಧವಾದ ಲಕ್ಷಣವುಳ್ಳ ವೀಣಾ ಅವರ ಚಿಂತನೆಗೆ ನಿದರ್ಶನಗಳನ್ನು ಇಲ್ಲಿ ನೋಡಬಹುದು:

"ನವ್ಯ ಬರಹಗಾರರು ಸಮಾಜ, ಅಧಿಕಾರಶಾಹಿ ಶಕ್ತಿಗಳು, ಬೇರುಬಿಟ್ಟ ಸಂಪ್ರದಾಯಗಳು, ರೂಢಿಗತ ನೈತಿಕತೆ ಈ ಎಲ್ಲಾ ಶಕ್ತಿಗಳ ಪ್ರಭುತ್ವದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಆದರೆ ಇವರು ಯಾರೂ ಮಹಿಳೆಯರ ಅಸ್ತಿತ್ವದ ಬಗ್ಗೆ, ತಮ್ಮಂತೆಯೇ ಆಕೆಗೂ ಇರಬಹುದಾದ ಸಮಸ್ಯೆಗಳು, ತೊಳಲಾಟ ಗಳು-ದ್ವಂದ್ವಗಳ ಬಗ್ಗೆ, ಆಕೆಗೂ ಸಹಜವಾಗಿ ಇರುವ ಸ್ವಾತಂತ್ರ್ಯದ ಬಗ್ಗೆ ಏನೂ ಯೋಚಿಸಿಲ್ಲ ಹಾಗೂ ಬರೆದಿಲ್ಲ. ಸೆರೆ, ಸಿಗರೇಟು, ಸ್ತ್ರೀ-ಈ ಮೂರನ್ನೂ ಗಂಡಸಿಗೆ ತಾತ್ಕಾಲಿಕ ಸುಖಕೊಡುವ ಹಾಗೂ ನೋವನ್ನು ಕ್ಷಣಿಕವಾಗಿ ಪರಿಶಮನಗೊಳಿಸುವ ಸಾಧನಗಳೆಂದೇ ಪರಿಗಣಿಸಲಾಗಿದೆ. ಹೀಗಾಗಿ ಇಡಿಯ ನವ್ಯಸಾಹಿತ್ಯದಲ್ಲಿ ನೆನಪಿನಲ್ಲಿ ಉಳಿಯುವ ಒಂದೂ ಮಹಿಳೆಯ ಪಾತ್ರ ಕಾಣುವುದಿಲ್ಲ."

-(ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ ಪುಟ. 129)



"ಪ್ರಭುತ್ವದ ಹಿಡಿತದಿಂದ ಬಿಡುಗಡೆ ಪಡೆಯಬೇಕೆನ್ನುವ ಆಶಯ ಗಂಡಸಿನಷ್ಟೇ ತೀವ್ರವಾಗಿ ಮಹಿಳೆಗೂ ಇರುತ್ತದೆ. ಹತ್ತಿಕ್ಕುವ ಶಕ್ತಿಗಳ ವಿರುದ್ಧ ಹೋರಾಡಲು ಆಕೆಯ ಜೀವವೂ ತಹತಹಿಸುತ್ತದೆ. ಹೋರಾಟವು ಸಾಧ್ಯವಾಗದಾಗ ಹಾಗೂ ವಿಫಲವಾದಾಗ ಬದುಕಿನ ಅರ್ಥಹೀನತೆಯ ತೀಕ್ಷ್ಣಪ್ರಜ್ಞೆಯಿಂದಾಗಿ ಆಕೆಯೂ ಆಂತರಿಕ ನೋವು ಅನುಭವಿಸುತ್ತಾಳೆ, ಎಂಬ ಈ ಯಾವ ವಾಸ್ತವಿಕ ಅಂಶಗಳೂ ಬಹುಪಾಲು ನವ್ಯ ಲೇಖಕರ ಗಮನ ಸೆಳೆದಿಲ್ಲ. ಇದರರ್ಥ ಸ್ಪಷ್ಟವಿದೆ. ಗಂಡಸಿನ ಭಾವನೆಗಳು ಅನಿಸಿಕೆಗಳು ವಿಚಾರಗಳು ಮಾತ್ರ ವಿಶ್ಲೇಷಣೆಗೆ ಅರ್ಹ, ಗಂಡಸಿನ ಅನುಭವಗಳೇ ಸಾರ್ವತ್ರಿಕ ಮಹತ್ವವುಳ್ಳವು; ಜೀವನವನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸುವುದೇ ಆದರೆ ಗಂಡಸಿನ ದೃಷ್ಟಿಕೋನದಿಂದ ಮಾತ್ರ ಈ ಕೆಲಸ ಮಾಡಿದರೆ ಸಾಕು; ಗಂಡಸಿಗಿರುವ ಸೂಕ್ಷ್ಮಬುದ್ಧಿಶಕ್ತಿ ಮತ್ತು ವಸ್ತುನಿಷ್ಠತೆ ಮತ್ತು ವಿಶ್ಲೇಷಣಾ ಸಾಮರ್ಥ್ಯ ಇತ್ಯಾದಿ ಗುಣವಿಶೇಷಗಳು ಮಹಿಳೆಯರಲ್ಲಿ ಅಪರೂಪ ಅಥವಾ ಅಸಾಧ್ಯ; ಗಂಡಸಿನ ನೋವು ಈ ಜೀವನದ ಅತಿ ಮಹತ್ವದ ಸಂವೇದನೆ; ಹೀಗೆ ನವ್ಯಸಾಹಿತಿಗಳು ತಿಳಿದಿರಲು ಸಾಕು" *-(ಅದೇ ಪು. 129)*

ಪುರುಷಕೇಂದ್ರಿತ ವ್ಯಕ್ತಿವಾದದ ನೆಲೆಯಿಂದ ಹೊರಟ ನವ್ಯಸಾಹಿತ್ಯದೊಳಗೆ ಪ್ರಭುತ್ವದ ಶಕ್ತಿಗಳ ವಿರುದ್ಧ ಬಂಡೇಳುವ ಪುರುಷ ಪ್ರಜ್ಞೆ ಹೇಗೆ ಮಹಿಳೆಯ ವಿಷಯದಲ್ಲಿ ಸ್ವತಃ ಪ್ರಭುತ್ವದ ಅವತಾರವೇ ಆಗಿ ಕೆಲಸಮಾಡಿದೆ ಎಂಬುದನ್ನು ವೀಣಾ ಸಮರ್ಥವಾಗಿ ತೋರಿಸಿ ಕೊಡುತ್ತಾರೆ. ಆದರೆ ಮಹಿಳಾ ಅಭಿವ್ಯಕ್ತಿಯ ಪ್ರಶ್ನೆ ಬಂದಾಗ ಅವರು ನವ್ಯ ವಿಮರ್ಶೆಯ ಮಾನದಂಡಗಳಿಂದಲೇ ಬೇರೆ ಮಹಿಳೆಯರ ಸಾಹಿತ್ಯವನ್ನು ವಿಮರ್ಶೆಮಾಡುತ್ತಾರೆ. ಸಾಹಿತ್ಯವಿಮರ್ಶೆ ಎಲ್ಲಾ ಬಗೆಯ ಲಿಂಗರಾಜಕಾರಣದ ಲಕ್ಷಣದಿಂದ ಮುಕ್ತವಾದದ್ದು ಎಂಬಂತೆ ಅವರು ಭಾವಿಸಿಕೊಂಡದ್ದು ಕಾಣಿಸುತ್ತದೆ. ಅವರು ಹಾಗೂ ಚ.ಸರ್ವಮಂಗಳಾ ಮಹಿಳೆಯರ ಕಥೆ, ಕಾದಂಬರಿಗಳನ್ನು ಕುರಿತು ಹೇಳುವ ವಿಮರ್ಶಾ ಮಾತುಗಳನ್ನು ಲಂಕೇಶ, ಗಿರಡ್ಡಿ ಅಥವಾ ಲಕ್ಷ್ಮೀನಾರಾಯಣ ಭಟ್ಟರ ಮಾತುಗಳ ಜೊತೆ ಸಲೀಸಾಗಿ ಸೇರಿಸಿಬಿಡಬಹುದು. ಹೆಸರು ಉಲ್ಲೇಖಿಸದಿದ್ದರೆ ಇವುಗಳನ್ನು ಹೇಳಿರುವವರು ಮಹಿಳೆಯರು ಎಂದು ಪ್ರತ್ಯೇಕಿಸಲು ಅಸಾಧ್ಯವೆನ್ನುವಷ್ಟು ಸಮರಸವಾಗಿ ಇವರ ವಿಚಾರಗಳು 'ನವ್ಯ'ದ್ದಾಗಿ ಕಾಣುತ್ತವೆ. ಸರ್ವಮಂಗಳಾ ಹೇಳುತ್ತಾರೆ:

"ಸಾಹಿತ್ಯದ ಬೇರೆ ಯಾವುದೇ ಪ್ರಕಾರವೇ ಆಗಲಿ ಓದುವುದಕ್ಕೆ ಗ್ರಹಿಸುವುದಕ್ಕೆ ಕೆಲವು ಸಿದ್ಧತೆಗಳು ಬೇಕು. ಆದರೆ ಯಾವ ಸಿದ್ಧತೆಯೂ ಇಲ್ಲದೆ ಓದು ಬರಹ ಗೊತ್ತಿದ್ದರೆ ಸಾಕು, ತಟ್ಟನೆ ಅರ್ಥವಾಗುವುದು ಕಥೆ ಮಾತ್ರ. ಕಥೆಗೆ ಹೆಚ್ಚಿನ ಅವಕಾಶವಿದ್ದ ಕಾದಂಬರಿ ಹೆಣ್ಣಿಗೆ ತುಂಬ ಇಷ್ಟವಾಯಿತು. ಕಾದಂಬರಿ ಪ್ರಕಾರ ಹೆಚ್ಚು ಜನಪ್ರಿಯವಾಗಲು ಹೆಂಗಸರೇ ಕಾರಣ. ...ವ್ಯಾಸಂಗ ಬೇಡದ ಚಿಂತನೆಯಿಲ್ಲದ ಆಳವಾದ ಬದುಕಿನ ಅರಿವು ಕಾಣದ, ಮಾನಸಿಕ ಶ್ರಮವಿಲ್ಲದೆ ತಿಳಿಯಬಹುದಾದ ಕಾದಂಬರಿಗಳನ್ನು ಓದುವುದು, ಬರೆಯುವುದು ಸುಲಭವಾಯಿತು. ಕಾದಂಬರಿ ಮುಖ್ಯವಾಗಿ ಆಚರಣೆಗೆ ಸಂಬಂಧಿಸಿದ್ದರಿಂದ ಅದರಲ್ಲಿ ತೊಡಗುವುದು ಅವಳಿಗೆ ಕಷ್ಟವಾಗಲಿಲ್ಲ. ಕೂತಲ್ಲೇ ಕನಸು ಕಾಣುವ, ಊರ ಸುದ್ದಿಗಳ ಬಗ್ಗೆ ಆಸಕ್ತಿಯಿದ್ದ ಹೆಂಗಸರಿಗೆ ಕಾದಂಬರಿ ತೋಡಿಕೊಳ್ಳಲು ಉತ್ತಮ ಮಾಧ್ಯಮವಾಯಿತು. ಸಣ್ಣಕಥೆಗೂ ಈ ಮಾತು ಅನ್ವಯಿಸಬಹುದು."

-(ಚ. ಸರ್ವಮಂಗಳಾ; ಮಹಿಳೆ ಮತ್ತು ಕನ್ನಡ ಸಾಹಿತ್ಯ, ಪು. 78)

ಕಾವ್ಯ ನಾಟಕಾದಿಗಳ ಪ್ರಕಾರಗಳಲ್ಲಿ ಮಹಿಳೆಯರು ಬರೆಯದಿದ್ದುದಕ್ಕೆ ಅವರ ಒಲವು-ನಿಲುವುಗಳಲ್ಲಿದ್ದ ಮಿತಿಯೇ ಕಾರಣ ಎಂದು ಭಾವಿಸುವ ಸರ್ವಮಂಗಳಾ ಸಾಹಿತ್ಯಕ ತರಬೇತಿ, ಮಾನಸಿಕ ಸಿದ್ಧತೆ, ಓದಿನಿಂದ ವಿಸ್ತಾರಗೊಂಡ ಬೌದ್ಧಿಕತೆ ಹಾಗೂ ಅನುಭವವನ್ನು ಪರಿಗ್ರಹಿಸುವ ದೃಷ್ಟಿ ವೈಶಾಲ್ಯ ಇವುಗಳು ಇಲ್ಲದೇ ಇರುವುದೇ ಮಹಿಳೆಯರ ಬರಹಗಳಿಗೆ ಪರಿಮಿತಿಗಳನ್ನು ಉಂಟುಮಾಡಿದೆ ಎಂದು ಸೂಚಿಸುತ್ತಾರೆ.

ವೀಣಾ ಶಾಂತೇಶ್ವರರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಬದುಕಿನ ಕ್ರಮದಲ್ಲೇ ಸಾಂಪ್ರದಾಯಿಕತೆ ಮೈಗೂಡಿದ್ದು ಅವರು ಅದರೊಳಗಿನ ಕೋಟಲೆ ಸಂಕೋಲೆಗಳಲ್ಲೇ ಉಳಿದಿರುತ್ತಾರೆ. ಕ್ರಾಂತಿಕಾರಕವಾಗಿ ಆ ದಿಗ್ಬಂಧನಗಳ ವಿರುದ್ಧ ಬಂಡೇಳಬಲ್ಲ, ಹೋರಾಡಬಲ್ಲ ಛಲ, ಧೈರ್ಯಗಳನ್ನು ತಳೆಯಲು ಅವರು ಹಿಂದೆಗೆಯುತ್ತಾರೆ. ಆದ್ದರಿಂದ ಅವರ ಬದುಕಿನ ಅನುಭವಗಳೇ ಸೀಮಿತ, ಗತಾನುಗತಿಕ ರೀತಿಯದಾದ್ದರಿಂದ ಬರಹದಲ್ಲಿ ಅವರು ಕಟ್ಟಿಕೊಡುವ ಅನುಭವವೂ ಪರಿಮಿತವೇ ಆಗಿದೆಯೆಂದು ವಿಶ್ಲೇಷಿಸುತ್ತಾರೆ.

"...ಆದರೆ ಒಟ್ಟು ಇವೆಲ್ಲವನ್ನೂ ಪರಿಶೀಲಿಸಿದಾಗ ಒಮ್ಮೆಲೆ ಅನಿಸುವುದೇನೆಂದರೆ ಇಲ್ಲಿನ ವೈಚಾರಿಕತೆ ಬಹಳ ತೆಳುವಾಗಿದೆ. ಅದಕ್ಕೆ ಸಂಕೀರ್ಣತೆಯಿಲ್ಲ, ಆಳವಿಲ್ಲ, ಗಟ್ಟಿತನವಿಲ್ಲ. ನಮ್ಮ ಮಹಿಳೆಯರ ಅನುಭವಗಳಲ್ಲಿ ವೈವಿಧ್ಯತೆಯಿಲ್ಲ. ಅಂಥ ಅನುಭವಗಳನ್ನು ಹೊಂದಲು ಅವರಿಗೆ ಅವಕಾಶವಿಲ್ಲ ಎಂಬ ನೆಪ ಹೇಳಿ ಈ ಕೊರತೆಯನ್ನು ಸಮರ್ಥಿಸಿಕೊಳ್ಳಲಾಗದು. ಯಾಕೆಂದರೆ ಅನುಭವಗಳು ಸೀಮಿತವಾಗಿದ್ದರೂ ಆ ಸೀಮಿತ ಅನುಭವಗಳನ್ನೇ ಸಂಕೀರ್ಣವಾಗಿ ಅಭಿವ್ಯಕ್ತಗೊಳಿಸುವುದು ಒಳ್ಳೆಯ ಸಾಹಿತಿಯ ಲಕ್ಷಣ. ಈ ಗುಣ ನಮ್ಮಲ್ಲಿನ ಬಹಳ ಪ್ರಮಾಣದ ಮಹಿಳೆಯರ ಬರಹಗಳಲ್ಲಿ ಕಂಡುಬರುತ್ತಿಲ್ಲ.

-(ಮಹಿಳೆ ಮತ್ತು ಕನ್ನಡ ಸಾಹಿತ್ಯ, ಪುಟ. 51)

ಮಹಿಳಾ ಬರಹಗಳು ಲಾಕ್ಷಣಿಕವಾಗಿ ನವ್ಯರ ಸಿದ್ಧಪಡಿಯಚ್ಚುಗಳೊಳಗೆ ಹೋಗದೆ ಉಳಿದವು ನಿಜ. ಆದರೆ ಈ ರೀತಿ ಒಂದು ಸಾಮೂಹಿಕ ಸಾಹಿತ್ಯ ನಿರ್ಮಾಣಕ್ಕೂ ಮುಖ್ಯ ಪರಂಪರೆಯ

ವೈಚಾರಿಕತೆಗೂ ಕಂದರ ಏರ್ಪಟ್ಟ ಸ್ಥಿತಿಯನ್ನು ಸಾವಧಾನದಿಂದ ಪರಿಶೀಲಿಸಬೇಕಾದ್ದು ಅವಶ್ಯಕವಿದೆ. ಚ. ಸರ್ವಮಂಗಳ ಹಾಗೂ ವೀಣಾಶಾಂತೇಶ್ವರ ಇಬ್ಬರೂ ಎಪ್ಪತ್ತರ ದಶಕದಲ್ಲಿ ತಾವು ಹೊಸದಾಗಿ ಪಡೆದುಕೊಂಡಿದ್ದ Modernist ದೃಷ್ಟಿಕೋನದ ಸಾಹಿತ್ಯಕ ಮಾನದಂಡಗಳ ಮೂಲಕ ಅದುವರೆಗಿನ ಮಹಿಳಾ ಬರಹವನ್ನು ಅಲಿಪ್ತವಾದ, cool ಆದ ವಸ್ತುನಿಷ್ಠವಾದ ರೀತಿಯಿಂದ (ಅಂಥದೆ ಮಹಿಳೆಯರದು ಎಂದು ತಮ್ಮ ಭಾವನಾತ್ಮಕ ಗುರುತಿಸಿಕೊಳ್ಳುವಿಕೆ ಇಲ್ಲದಂತೆ) ವಿಶ್ಲೇಷಿಸುವ ಉತ್ಸಾಹ ಮತ್ತು (ನಾವು ಅವರ ಹಾಗಲ್ಲ ಎಂಬ ನೆಲೆಯಲ್ಲಿ) ಹೊಸ ಆತ್ಮವಿಶ್ವಾಸಗಳಿಂದ ತೀರ್ಮಾನಕ್ಕೆ ಬಂದದ್ದನ್ನು ಕಾಣಬಹುದು. ಆದರೆ ತರ್ಕ–ವಾದದ ಈ ವಿಚಾರಧಾರೆಯನ್ನು ಅವರು ಮಹಿಳೆಯರ ವಿರುದ್ಧ ತಿರುಗಿಸಿರುವ ವೈಖರಿಯನ್ನು ಈಗ ಹಿಂದಿರುಗಿ ನೋಡಿದರೆ ಅಂಥ ವಸ್ತುನಿಷ್ಠೆ, ತಣ್ಣಗಿನ ಅಲಿಪ್ತತೆಗಿಂತ ಹೆಚ್ಚಿನ ರೋಷಭಾವನೆಯೇ ಅಲ್ಲಿ ವ್ಯಕ್ತವಾಗುವಂತೆ ಕಾಣಿಸುತ್ತದೆ.

"ಎಲ್ಲರೂ ಹೇಳುವ ಕಾರಣ–ನಮ್ಮ ಸಮಾಜದಲ್ಲಿ ಮೊದಲಿನಿಂದಲೂ ಹೆಂಗಸರಿಗೆ ಅನ್ಯಾಯವಾಗುತ್ತ ಬಂದಿದೆ, ಅವರಿಗೆ ಮುಕ್ತ ಅವಕಾಶಗಳಿಲ್ಲ, ಅವರು ಎಲ್ಲ ರೀತಿಯಿಂದ ಹಿಂದುಳಿದಿದ್ದಾರೆ. ಹೀಗಾಗಿ ಅವರ ವೈಚಾರಿಕ ಸ್ತರದ ಮಟ್ಟ ಸೀಮಿತವಾಗಿದೆ ಇತ್ಯಾದಿ, ಇತ್ಯಾದಿ. ಆದರೆ ಅನ್ಯಾಯವನ್ನು ಮಾಡಿಸಿಕೊಂಡ ವರ್ಗ ಯಾವಾಗಲೂ ದುರ್ಬಲವರ್ಗ ಮತ್ತು ಯಾವುದೇ ಬಗೆಯ ದೌರ್ಬಲ್ಯವೆಂದರೆ ಅದು ವ್ಯಕ್ತಿತ್ವದಲ್ಲಿನ ಕೊರತೆ, ದೋಷ, ಅಸಮರ್ಥತೆ."

–(ಮಹಿಳೆ ಮತ್ತು ಕನ್ನಡ ಸಾಹಿತ್ಯ, ಪುಟ. 51–52)

"ಇಷ್ಟು ವರ್ಷಕಾಲ ಅನ್ಯಾಯ ಸಹಿಸಿ ಮಹಿಳೆಯರು ಯಾಕೆ ಸುಮ್ಮನೆ ಕೂಡಬೇಕಾಯ್ತು? ಯಾಕೆ ಅವರು ಸಿಡಿದೇಳಲಿಲ್ಲ? ಯಾಕೆ ಅವರು ಅವಕಾಶಗಳನ್ನು ತಾವಾಗಿಯೇ ಹೋರಾಡಿ ದೊರಕಿಸಿಕೊಳ್ಳಲಿಲ್ಲ? ಯಾಕೆ ಅವರು ತಲೆ ತಗ್ಗಿಸಿ ಹಿಂದುಳಿಯ ಬೇಕಾಗಿತ್ತು? ಯಾಕೆಂದರೆ ಅವರಲ್ಲಿ ಅಭಿವ್ಯಕ್ತವಾಗಲೇ ಬೇಕೆನ್ನುವ ಛಲವುಳ್ಳ ಜಾಗೃತಿಯೇ ಉಂಟಾಗಲಿಲ್ಲ" *–(ಪೂರ್ವೋಕ್ತ, ಪುಟ. 52)*

"ನಮ್ಮ ಮಹಿಳೆಯರು ಈಗ ಮುಖ್ಯವಾಗಿ ಮಾಡಬೇಕಾದ್ದು ನಾನು ಮೊದಲೇ ಹೇಳಿದಂತೆ self-assertion. ಸ್ವತಃ ಭಾವನೆಗಳನ್ನು ವಿಚಾರಗಳನ್ನು ಇಡೀ ವ್ಯಕ್ತಿತ್ವವನ್ನು ಶಕ್ತಿಯುತವಾಗಿ ಪ್ರತಿಪಾದಿಸುವುದು... ಸಾಂಪ್ರದಾಯಿಕ ಕಟ್ಟುಕಟ್ಟಳೆಗಳ ಚೌಕಟ್ಟಿನಿಂದ ಹೊರಬಂದು ಯಾತಕ್ಕೂ ಯಾರಿಗೂ ಅಂಜದೆ ಹೊಸ ದಿಕ್ಕಿನಲ್ಲಿ ವಿಚಾರ ಮಾಡುವುದು ಹಾಗೂ ವಿಚಾರಗಳನ್ನು ಬಹಿರಂಗವಾಗಿ ನಿರ್ಭಯವಾಗಿ ಪ್ರಕಟಿಸುವುದು"

–(ಪೂರ್ವೋಕ್ತ ಪುಟ.52)

ಕನ್ನಡದಲ್ಲೂ ಇತರ ಭಾರತೀಯ ಭಾಷೆಗಳಲ್ಲೂ ಬಂದಿರುವ ಮಹತ್ವದ ಸಾಹಿತ್ಯ ಕೃತಿಗಳಲ್ಲಿ ಪ್ರಜ್ಞಾಪ್ರವಾಹ ತಂತ್ರ, ಅಸಂಗತ ನಿರೂಪಣಾ ತಂತ್ರ, ಅಂತರಂಗ ವಿಶ್ಲೇಷಣಾ ವಿಧಾನ ಮುಂತಾದವುಗಳನ್ನು ಬಳಸಿರುವ ಕಡೆಗೆ ಲೇಖಕಿಯರ ಗಮನ ಹರಿದಿಲ್ಲ. ಅವರು ನೇರ ನಿರೂಪಣೆಯ ಸರಳ ತಂತ್ರಕ್ಕೇ ಪರಿಮಿತವಾಗಿ ಉಳಿದರು ಎನ್ನುವುದು ವೀಣಾ ಅವರ ಮುಖ್ಯ ತಕರಾರುಗಳಲ್ಲಿ ಒಂದು. ಆದರೆ 1980ರ ನಂತರದ ಮಹಿಳಾ ಸಾಹಿತ್ಯವನ್ನು ಸ್ತ್ರೀವಾದಿ ನಿಲ್ಲಿನಿಂದ ಮರುಓದಿಗೆ ಒಳಗುಮಾಡುವ ಯತ್ನಗಳು ನಡೆದಿದ್ದು, ಹಳೆಯ ಲೇಖಕಿಯರೆಲ್ಲರೂ ಏಕಾಕಾರದಲ್ಲಿ ನೇರ ನಿರೂಪಣೆಯಲ್ಲೇ ತೃಪ್ತಿಪಟ್ಟುಕೊಂಡಿದ್ದರು ಎಂಬ ಇವರ ಈ ಹೇಳಿಕೆಯೇ ಪ್ರಶ್ನಾರ್ಹವಾಗಿ ಕಾಣಿಸುತ್ತದೆ. ಆದರೆ ಹಿಂದಿನಿಂದಲೂ ಬಿಡಿಬಿಡಿಯಾಗಿ ಲೇಖಕಿಯರು ಪುರುಷರಂತಲ್ಲದ ತಮ್ಮದೇ ಆದ ಅಭಿವ್ಯಕ್ತಿ ತಂತ್ರಗಳನ್ನು ಹುಡುಕುವ ಯತ್ನದಲ್ಲಿದ್ದಾರೆ ಎಂಬುದು ಮಹಿಳಾನಿಷ್ಠ ಅಧ್ಯಯನಕಾರರಿಗೆ ಕಾಣಿಸಿದರೂ ವೀಣಾ ಶಾಂತೇಶ್ವರರು ಅದನ್ನು ಸ್ತ್ರೀಪರ ವಿಮರ್ಶೆಯೆಂದು ಕರೆದರು. ಮಹಿಳೆಯರ ಸಾಹಿತ್ಯವನ್ನು ಅಳೆಯಲು ಕೋಮಲ ಮಾನದಂಡಗಳನ್ನು ಸ್ತ್ರೀಪರ ವಿಮರ್ಶಕಿಯರು ಬಳಸುತ್ತಿದ್ದು ಇದರಿಂದ ಮಹಿಳೆಯರ ಸಾಹಿತ್ಯದ ಸರಿಯಾದ ಮೌಲ್ಯಮಾಪನವೇ ಆಗದೇ ಲೇಖಕಿಯರು ತಮ್ಮ ಅಭಿವ್ಯಕ್ತಿಯನ್ನು ಉತ್ತಮಗೊಳಿಸಿಕೊಳ್ಳಲು ಬೇಕಾದ ಸ್ವವಿಮರ್ಶೆಯನ್ನೇ ಕೈಬಿಡಬಹುದೆಂದೂ ಹೆದರಿ ಈ ಅಪಾಯದ ವಿರುದ್ಧ ಧ್ವನಿಘಂಟೆ ಬಾರಿಸುತ್ತಾರೆ ವೀಣಾ.

"ಇತ್ತೀಚೆಗೆ ಕನ್ನಡದ ಕೆಲವು ಲೇಖಕಿಯರು ಮಹಿಳಾ ಸಾಹಿತ್ಯವನ್ನು ಪುರುಷ ವಿಮರ್ಶಕರು ಉದ್ದೇಶಪೂರ್ವಕವಾಗಿಯೇ ಕಡೆಗಣಿಸಿದ್ದಾರೆಂದೂ, ಇದರಿಂದ ಮಹಿಳಾ ಸಾಹಿತ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಅದರ ಪುನರ್ ಮೌಲ್ಯಮಾಪನವಾಗಬೇಕೆಂದೂ ಹೇಳುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಮಹಿಳಾ ಸಾಹಿತ್ಯವನ್ನು ವಿಶೇಷ ಸಹಾನುಭೂತಿಯ ದೃಷ್ಟಿಯಿಂದ ನೋಡುವ ರೀತಿಯ ವಿಮರ್ಶಾ ವಿಧಾನವನ್ನು ಪ್ರತಿಪಾದಿಸುತ್ತಿದ್ದಾರೆ. 'ಸ್ತ್ರೀವಾದಿ ವಿಮರ್ಶೆ'ಯ ಹೆಸರಿನಲ್ಲಿ ಬರುತ್ತಿರುವ ಈ ಧೋರಣೆಯ ಬಗ್ಗೆ ಗಂಭೀರವಾಗಿ ಆಲೋಚಿಸುವುದು ಅಗತ್ಯವಿದೆ, ಏಕೆಂದರೆ 'Feminist criticism' ಎಂದರೆ ಮಹಿಳಾ ಸಾಹಿತ್ಯವನ್ನು ಸಹಾನುಭೂತಿಪರವಾದ ಅಳತೆಗೋಲನ್ನು ಬಳಸುವುದು ಎಂದು ಖಂಡಿತಾ ಅಲ್ಲ. ಮುಖ್ಯವಾಗಿ ಸ್ತ್ರೀವಾದಿ ವಿಮರ್ಶೆಯು ಮಹಿಳೆಯ ದೃಷ್ಟಿಕೋನದಿಂದ ಮಾಡುವ ವಿಮರ್ಶೆ... ಸ್ತ್ರೀವಾದಿ ವಿಮರ್ಶೆಯ ಮುಖ್ಯಗುರಿ, ಒಂದು ಕೃತಿಯಲ್ಲಿನ ಸ್ತ್ರೀಪಾತ್ರಗಳನ್ನು, ಸ್ತ್ರೀಸಂವೇದನೆಗಳನ್ನು ಸ್ತ್ರೀಯದೃಷ್ಟಿಯಿಂದ ನೋಡಿ ಮೌಲ್ಯಮಾಪನ ಮಾಡುವುದೇ ವಿನಃ ಮಹಿಳೆಯರ ಬರವಣಿಗೆಯನ್ನು ಸಹಾನುಭೂತಿಯಿಂದ ನೋಡುವುದು ಎಂದಲ್ಲ"

–(ಹೊಸ ಹೆಜ್ಜೆ: 1990, ಪು. x)

ಸ್ತ್ರೀವಾದದ/ಸ್ತ್ರೀವಾದಿ ವಿಮರ್ಶೆಯ ತಳಹದಿಯೇ ಪಿತೃಸಂಸ್ಕೃತಿಯ ಲಿಂಗರಾಜಕಾರಣದ ವಿರುದ್ಧವಾಗಿ ಹೊಮ್ಮಿಬಂದಿದ್ದಾಗಿದ್ದು, ಕನ್ನಡದ ಸ್ಥಳೀಯ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಕನ್ನಡದ ಲೇಖಕಿಯರು ಎಷ್ಟೆಲ್ಲ ರೀತಿಗಳಿಂದ ಜೆಂಡರ್ ರಾಜಕೀಯವನ್ನು ಪ್ರತಿರೋಧಿಸಲು ಯತ್ನಿಸಿದ್ದಾರೆ ಎಂಬುದರ ಚಾರಿತ್ರಿಕ ಮರುನಿರ್ಮಾಣದ ಪ್ರಯತ್ನಗಳಾಗಿ ಮೊದಲ ಹಂತದಲ್ಲಿ ಪ್ರಕಟಗೊಂಡವು. ಇದು Eline showalter ಹೇಳುವ ರೀತಿಯ ಸ್ತ್ರೀಸಾಹಿತ್ಯ ವಿಮರ್ಶೆ (Gynocritics)ಗೆ ಹತ್ತಿರವಾದದ್ದು. ವೀಣಾ ಶಾಂತೇಶ್ವರರು ಕೃತಿ, ಕೃತಿಕಾರ, ಕೃತಿಕಾರನ ಪ್ರಜ್ಞಾಶ್ರೇಷ್ಠತೆ ಅದರಿಂದ ನಿರ್ಮಿತವಾಗುವ ಸಾಹಿತ್ಯಗಳೆಲ್ಲ ಸಂಸ್ಕೃತಿ ಬಾಧಿತವಲ್ಲದ ಸ್ವತಂತ್ರ ಘಟಕಗಳೆಂದು ನಂಬುವ ನವ್ಯಪಂಥದಿಂದ ಬಂದವರು. ಆದ್ದರಿಂದಲೇ ಸಾಹಿತ್ಯದ ಮೌಲ್ಯಮಾಪನ, ವಸ್ತುನಿಷ್ಠೆ ಮುಂತಾದವುಗಳ ಮೂಲಕ ಅವರು ನೋಡುತ್ತಾರಾಗಿ, ಮಹಿಳಾ ಸಾಹಿತ್ಯಕ್ಕೆ ಮೃದು ಮಾನದಂಡ ಬಳಸುವ ಅಪಾಯ ಮುಂತಾದ ಆತಂಕದಿಂದ ಅವರು ಬರೆಯುವಂತೆ ತೋರುತ್ತದೆ.

ಒಟ್ಟಾರೆಯಾಗಿ ಗಮನಿಸಿದಲ್ಲಿ ಸಾಹಿತ್ಯವಿಮರ್ಶೆಯ ಅನುಸಂಧಾನದ ಎರಡನೆಯ ಈ ಘಟ್ಟದಲ್ಲಿ ಬಹುಪಾಲು ಮಹಿಳಾ ಬರಹಗಾರರು ನವೋದಯ ಹಾಗೂ ಪ್ರಗತಿಶೀಲ ಪಂಥಗಳ ಸಾಹಿತ್ಯಕಾಂಶಗಳನ್ನು ಹೆಚ್ಚು ಕಡಿಮೆ ಅಪ್ರಜ್ಞಾಪೂರ್ವಕವಾಗಿಯೇ ತಮ್ಮ ಬರಹಗಳ ಒಳಗೆ ಸಮಾವೇಶಗೊಳಿಸಿಕೊಂಡದ್ದು ಕಾಣಿಸುತ್ತದೆ. ಕೆಲವು ಜನರಷ್ಟೇ

ಮುಖ್ಯಸಾಹಿತ್ಯ ವಿಮರ್ಶೆಗೆ ಸ್ಪಂದಿಸಿದ್ದಾರೆ. ನವ್ಯಸಾಹಿತ್ಯದ ಸಂದರ್ಭದೊಂದಿಗೆ ಮಹಿಳೆಯರ ಬರಹಗಳನ್ನು "ಜನಪ್ರಿಯ" ಎಂದು ಕರೆದು ಗಂಭೀರ ಸಾಹಿತ್ಯಕ್ಕಿಂತ ಪ್ರತ್ಯೇಕವಾಗಿ ಅವುಗಳ "ಬೇಲಿ" ಕಟ್ಟುವ ಯತ್ನಗಳು ನಡೆದವು. ತಾವು ಬರೆಯುತ್ತಿರುವ ಸಾಹಿತ್ಯದ ಲೋಪ, ದೋಷಗಳು ಕೊರತೆಗಳ ಬಗ್ಗೆ ಮಹಿಳೆಯರು ನವ್ಯ ವಿಮರ್ಶಕರಿಂದ ಹೇರಳವಾಗಿ ಉಪದೇಶಗಳನ್ನು ಪಡೆದರಾದರೂ ಈ ಹೊಸ ವಿಮರ್ಶೆಯು ಅಪೇಕ್ಷಿಸುತ್ತಿದ್ದ ಮಾದರಿಯಲ್ಲಿ ಸಾಹಿತ್ಯ ಸೃಷ್ಟಿಸುವಲ್ಲಿ ವಿಫಲರಾದ ಕೆಲವರು ಹತಾಶ ಅಳಲನ್ನು ಪ್ರಕಟಿಸಿದ್ದಾರೆ. ಹೆಚ್ಚು ಛಲವಂತರಾದ ಅನುಪಮಾ ನಿರಂಜನರಂಥವರು ಈ ಟೀಕೆಗಳನ್ನು ಗಂಭೀರವಾಗಿ ಸ್ವೀಕರಿಸಿ ತಮ್ಮ ಬರವಣಿಗೆಯಲ್ಲಿ ಸಾಮಾಜಿಕ ಪ್ರಜ್ಞೆಗೆ ಹೆಚ್ಚು ಒತ್ತುಕೊಡುವ ಮೂಲಕ ಮುಂದಿನ ಸಾಹಿತ್ಯಘಟ್ಟಗಳೊಂದಿಗೆ (ದಲಿತ-ಬಂಡಾಯ-ಸ್ತ್ರೀವಾದಿ) ಹೆಚ್ಚು ಸಂವಾದಿಯಾದ ಸಾಹಿತ್ಯ ರಚನೆಗೆ ತೊಡಗಿದರು.

ಹೊಸ ಪೀಳಿಗೆಯಲ್ಲಿ ಸಾಹಿತ್ಯವನ್ನು ಶಿಕ್ಷಣದ ಭಾಗವಾಗಿ ಗಂಭೀರ ಕಲಿಕೆಯ ಕ್ಷೇತ್ರವೆಂದು ಸ್ವೀಕರಿಸಿದವರು ನವ್ಯಸಾಹಿತ್ಯವನ್ನೂ ಅದರ ವಿಮರ್ಶಾ ಧೋರಣೆಗಳನ್ನೂ ಅರ್ಥಮಾಡಿಕೊಂಡು, ಅದರ ವಿಚಾರಗಳನ್ನೇ ಅನುಸರಿಸುತ್ತ ಸೃಜನಶೀಲ ಸಾಹಿತ್ಯಕ್ಕೂ ವಿಮರ್ಶೆಗೂ 'ಸಲ್ಲುವ' ಯತ್ನಗಳಲ್ಲಿ ತೊಡಗಿದ್ದುದಕ್ಕೆ ವೀಣಾ ಅವರನ್ನು ಮುಖ್ಯ ಮಾದರಿ ಎಂದು ಭಾವಿಸಬಹುದು. ಅವರ ಮುಖ್ಯ ಕಾಳಜಿ ಲೇಖಕಿಯರನ್ನು ತಿದ್ದಿರೂಪಿಸುವ ನಿಟ್ಟಿನಲ್ಲಿ ವ್ಯಕ್ತವಾಗುತ್ತದೆ.

ಒಟ್ಟಾರೆಯಾಗಿ ಈ ಅವಧಿಯನ್ನು ಎರಡು ಪರಸ್ಪರ ಭಿನ್ನವಾದ ವಿಚಾರಧಾರೆಗಳು ಹುಟ್ಟುಹಾಕಿದ ವೈಚಾರಿಕ ಮಥನದ ಘಟ್ಟವೆಂದೂ ನೋಡಬಹುದಾಗಿದೆ. ನವ್ಯ ವಿಮರ್ಶೆಯು ಮುಂದಿಡುತ್ತಿದ್ದ ಸಾಹಿತ್ಯ ಸಿದ್ಧಾಂತ, ವಿಮರ್ಶಾ ಮಾನದಂಡಗಳು ತಮಗೆ ಅಪರಿಚಿತವೂ ಪರಕೀಯವೂ, ಮುಖ್ಯವಾಗಿ ತಮ್ಮ ಬರಹವನ್ನು ಮಾನ್ಯಮಾಡದ್ದೂ ಆಗಿ ಕಂಡಾಗ ಕೆಲವು ಬರಹಗಾರರು ಅದಕ್ಕೆ ಪೂರ್ತಿ ವಿಮುಖರಾಗಿ, ಉದಾಸೀನರಾಗಿ ಉಳಿದು ರೂಢಿಗತ ಜಾಡಿನಲ್ಲೇ ಬರೆಯುವುದನ್ನು ಮುಂದುವರೆಸಿದರು. ಅವರ ಬರಹ ಪುಸ್ತಕೋದ್ಯಮಕ್ಕೆ ಲಾಭಕಾರಕವಾದ್ದರಿಂದ ಆ ಸಾಹಿತ್ಯ ಪ್ರಮಾಣದಲ್ಲೂ ಹೆಚ್ಚಿತು.

ಕೆಲವೇ ಕೆಲವರು ಹೆಚ್ಚು ಸೂಕ್ಷ್ಮಸಂವೇದನೆಯಿದ್ದವರು ಈ ವಿಮರ್ಶೆಯ ಹೊಡೆತದಿಂದ ನೊಂದು ಅಳಲು, ಆಕ್ರೋಶಗಳನ್ನು ವ್ಯಕ್ತಪಡಿಸಿದರೂ, ತಮ್ಮ ಬರಹದ ಜಾಡನ್ನೆ ಬದಲಿಸಿಕೊಂಡರು. ಆದರೆ ಅವರಾರೂ ನವ್ಯಸಾಹಿತ್ಯ ಧರ್ಮಕ್ಕೆ ಮತಾಂತರ ಹೊಂದಲೇ ಇಲ್ಲ ಎನ್ನುವುದು ವಾಸ್ತವ ವಿಸ್ಮಯ. ಏಕೆಂದರೆ ಪಶ್ಚಿಮದ ವ್ಯಕ್ತಿವಾದ ಹುಟ್ಟು ಹಾಕಿದ ಸ್ವತಂತ್ರ ವ್ಯಕ್ತಿತ್ವದ ಪ್ರಜ್ಞೆಯ ಅರಿವೇ ಅವರಿಗೆ ಪರಕೀಯವಾಗಿ ಉಳಿದುಬಿಟ್ಟಿತು.

ಈ ಎರಡು ಬಗೆಯ ಪ್ರತಿಕ್ರಿಯೆಗಳಿಗೆ ಭಿನ್ನವಾಗಿ ನೇರವಾಗಿ ನವ್ಯಪಂಥದ ಒಳಗಿನಿಂದಲೇ ಸಾಹಿತ್ಯ ಸೃಷ್ಟಿಸಿ, ಆ ನಿಟ್ಟಿನಲ್ಲೇ ಇತರ ಮಹಿಳೆಯರ ಬರಹಗಳನ್ನು ಮೌಲ್ಯಮಾಪನ ಮಾಡಿದ ವೀಣಾ ಶಾಂತೇಶ್ವರರು ಹೇಳುವ ಹಲವಾರು ವಿಮರ್ಶಾ ನಿಲುವುಗಳು ಅವರ ಸಾಹಿತ್ಯಕ ಹಿನ್ನೆಲೆಯ ದೃಷ್ಟಿಯಿಂದ, ಅಂದಿನ ಬಹುಪಾಲು ನವ್ಯ ವಿಮರ್ಶಕರೆಲ್ಲ ಹೇಳುತ್ತಿದ್ದ ವಿಚಾರಗಳೇ. ಅವುಗಳಲ್ಲಿ ವೀಣಾ ಅವರ ಸ್ವೋಪಜ್ಞತೆ ಎಂಬುದು ಕಾಣಿಸುವುದು ಕಷ್ಟ. ಆದರೆ ನವ್ಯೋತ್ತರ ಕಾಲಘಟ್ಟದಲ್ಲಿ ಸ್ತ್ರೀವಾದಿ ವಿಮರ್ಶೆಯು ಹೊಮ್ಮಿಬಂದಾಗ ವೀಣಾ ಅವರು ಸ್ವತಃ ಲೇಖಕಿಯಾಗಿ, ಕತೆಗಾರ್ತಿ ಆಗಿದ್ದರೂ ಎಷ್ಟು ವಸ್ತುನಿಷ್ಠವಾಗಿ ಮಹಿಳಾ ಸಾಹಿತ್ಯವನ್ನು (ಸ್ತ್ರೀವಾದಿಗಳಿಗಿಂತ ಭಿನ್ನವಾಗಿ) ವಿಮರ್ಶಿಸುತ್ತಾರಲ್ಲ ಎಂದು ಕೆಲವು ನವ್ಯವಿಮರ್ಶಕರು ಅವರಿಗೆ 'ವಿಶಿಷ್ಟ ಸ್ತ್ರೀಧ್ವನಿ'ಯಾಗುವ ಸ್ಥಾನವನ್ನು ಕಲ್ಪಿಸಿದ್ದನ್ನು ಕಾಣಬಹುದು. ವ್ಯಕ್ತಿಪ್ರಜ್ಞೆಯ ಪೂರ್ಣವಿಕಾಸದಿಂದ ಮಹಿಳೆಯ ಸ್ವಾಭಿವ್ಯಕ್ತಿಯೂ ಮೌಲಿಕವಾಗಲು ಸಾಧ್ಯ ಎಂಬುದು ವೀಣಾ ಎತ್ತಿ ಹಿಡಿದ ವಿಚಾರ.

ಈ ಯಾವ ಗುಂಪಿಗೂ ಸೇರದ, ಆದರೆ ಸಮತೋಲನದ ದೃಷ್ಟಿಯುಳ್ಳ ಕೆಲವರು ಮಹಿಳಾ ಬರಹ ಮತ್ತು ಮಹಿಳಾಪ್ರಜ್ಞೆಗಳೆರಡೂ ಸಂಸ್ಕೃತಿಜನ್ಯವೇ ಆಗಿರುವುದನ್ನು ಗ್ರಹಿಸುವ ಮೂಲಕ ಅಭಿವ್ಯಕ್ತಿಯು ಪರಿಮಿತಗೊಂಡಿದ್ದಕ್ಕೆ ಕಾರಣಗಳನ್ನು ಹುಡುಕುವ ಯತ್ನವನ್ನೂ ಮಾಡಿದ್ದುಂಟು ಇದಕ್ಕೆ ಡಾ. ವಿಜಯಾ (ಇಳಾ) ಅವರ ಈ ಮಾತುಗಳನ್ನು ಉದಾಹರಿಸಬಹುದು:

"ಸಮಾಜದ ಆರ್ಥಿಕ ವ್ಯವಸ್ಥೆ ನಮ್ಮ ಸಾಮಾಜಿಕ ಸ್ವಭಾವ ಶಿಲ್ಪವನ್ನು ನಿರ್ಧರಿಸಿದರೆ, ನಮ್ಮ ಹಲವು ಮೂಲ ಪ್ರವೃತ್ತಿಗಳು ವೈಯಕ್ತಿಕ ಸ್ವಭಾವ ಶಿಲ್ಪವನ್ನು ರೂಪಿಸುತ್ತವೆ ಎನ್ನುವಾಗಲೇ ಮಹಿಳೆಯ ದೃಷ್ಟಿಯಿಂದ ಸಹಾ ಉತ್ಪಾದನೆಯ ಹಂಚಿಕೆಯ ಕ್ರಮಗಳು ಈ ಮೂಲಕ ಉಂಟಾಗುವ ಹಿತಾಸಕ್ತಿಗಳು ಪ್ರಜ್ಞೆಯನ್ನು ನಿಯಂತ್ರಿಸುತ್ತವೆ ಎಂಬ ಮಾತೂ ಅಷ್ಟೇ ಸತ್ಯ. ಈ ನೆಲೆಗಟ್ಟಿನಲ್ಲಿ ನಿಂತು ಮಾತನಾಡುವಾಗ ಮಹಿಳೆಯ ಯಾವ ಅನುಭವ-ವಿಚಾರ ಭಾವನೆಗಳಿಗೆ ಆಕೆ ನಿಂತಿರುವ ಸಮಾಜದಲ್ಲಿ ಮನ್ನಣೆ ಇಲ್ಲವೋ ಆಗ ಆಕೆ ತನ್ನಂತೆ ಅಭಿವ್ಯಕ್ತಿಗೆ ಲಕ್ಷ್ಮಣರೇಖೆ ಹಾಕಿಕೊಳ್ಳ ಬೇಕಾಗುತ್ತದೆ. ಹೀಗೆ ಪ್ರಜ್ಞೆ ಹಾಗೂ ಅದರ ಹುಟ್ಟು ಸ್ಥಿತಿಗೆ ಕಾರಣವಾಗುವ ಸಮಾಜ ಯಾವುದೇ ಇರಲಿ ಅಂಥ ಒಂದು ಸಮಾಜದ ಅಂಗವಾಗಿ ಬದುಕುವ ಹೆಣ್ಣು ತನ್ನ ವ್ಯಕ್ತಿಪ್ರಜ್ಞೆಗಿಂತ ಹೆಚ್ಚಾಗಿ ಅಂಥ ಪ್ರಜ್ಞೆಯನ್ನು ನಿಯಂತ್ರಿಸುವ ಚಾಲನಶಕ್ತಿಯನ್ನು ಅರ್ಥಾತ್ ಪುರುಷ ಪ್ರಧಾನ ಸಮಾಜವನ್ನು ಮೀರಿ ನಿಲ್ಲುವುದು ಕಷ್ಟವಾಗುತ್ತದೆ. ಇದು ಇಂಥದೇ ತೊಡಕು ಎಂಬುದನ್ನು ಗುರುತಿಸಿಕೊಳ್ಳುವ ಹಂತವನ್ನು ಮೀರಿ ಬೆಳೆವ ಅಧೀನತೆ ಇತ್ಯಾದಿಗಳು ಅಂಥ ಪ್ರಭಾವದಿಂದ ಹೆಣ್ಣನ್ನು ಮುಕ್ತವಾಗಲು ಬಿಡುತ್ತಿಲ್ಲ. ಹಾಗೆ ಮುಕ್ತವಾದ ಹೊರತು ಸ್ವತಂತ್ರ ಸ್ಥಿತಿ-ಜವಾಬ್ದಾರಿ ಬರುವುದೂ ಅಸಾಧ್ಯವಾಗುತ್ತದೆ".

-(ಮಹಿಳೆ ಮತ್ತು ಕನ್ನಡ ಸಾಹಿತ್ಯ 1979 ಪ್ರ. 70)

ಡಾ. ವಿಜಯಾ (ಇಳಾ) ಅವರು ಪ್ರಸ್ತಾಪಿಸುವುದೂ ಪುರುಷ ಪ್ರಧಾನವ್ಯವಸ್ಥೆಯ ಒಳಗಿದ್ದುಕೊಂಡೇ ಬರೆಯಬೇಕಾಗಿರುವ ಮಹಿಳೆಯರ ಸಮಸ್ಯೆಯನ್ನೇ. ಅಭಿವ್ಯಕ್ತಿಗೆ ಪರಿಸರ ಮತ್ತು ಅದರಿಂದ ಹುಟ್ಟುವ ಪ್ರಜ್ಞೆಗಳು ಸದಾಕಾಲವೂ ಹೇಗೆ ದಿಗ್ಬಂಧನಗಳನ್ನು ಸೃಷ್ಟಿಸುತ್ತಲೇ ಇರುತ್ತವೆ ಮತ್ತು ಆ ಸ್ಥಿತಿಯಿಂದ ಹೊರಬರುವುದರ ಮೂಲಕವೇ ವ್ಯಕ್ತಿಯೂ ಅಭಿವ್ಯಕ್ತಿಯೂ ಸ್ವತಂತ್ರವಾಗಲು ಸಾಧ್ಯ ಎಂಬುದನ್ನು ಅವರು ಸೂಚಿಸುತ್ತಾರೆ. ನಾವು ಚರ್ಚಿಸಲು ಹೊರಟಿರುವ ಕಾಲಾವಧಿಯಲ್ಲಿ ಕಥೆ ಕಾದಂಬರಿಗಳನ್ನು ಬರೆಯುವವರೆಲ್ಲ ಮೇಲುಜಾತಿ, ಮಧ್ಯಮವರ್ಗಕ್ಕೆ ಸೇರಿದವರೇ. ಅವರ ವರ್ಗೀಯ ಪರಿಮಿತಿಗಳ ಜೊತೆಗೇ ಅವರ ಬಿಡುಗಡೆಯ ಹಂಬಲ ಮತ್ತು ಯತ್ನಗಳೂ ಹೊಂದಿಕೊಂಡಿರುತ್ತವೆ. ಕೆಳಜಾತಿ, ಕೆಳವರ್ಗಗಳ ಮಹಿಳೆಯರ ಬದುಕುಗಳ ಬಗ್ಗೆ ಶ್ಯಾಮಲಾದೇವಿ, ಅನುಪಮಾ ನಿರಂಜನರಂಥ ಕೆಲವರು ಮಾತ್ರವೇ ಆಸಕ್ತಿ ಹೊಂದಿದ್ದುದನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು. ಆದರೆ ಅನುಭವವನ್ನು ಶೋಧಿಸಿ ಬದುಕಿನ ಸತ್ಯವನ್ನು ಹುಡುಕಬೇಕೆಂಬುದು ನಿಧಾನವಾಗಿ ಬರಹಗಾರ್ತಿಯರ ಪ್ರಜ್ಞೆಯಲ್ಲಿ ತೀವ್ರತೆ ಪಡೆಯತೊಡಗಿತು. ಈ ಬೆಳವಣಿಗೆಗೆ ಈ ಕಾಲಘಟ್ಟದ ಪ್ರಮುಖ ಮಾದರಿ ವೀಣಾ ಶಾಂತೇಶ್ವರರಲ್ಲಿ ಕಾಣಿಸಿದರೂ ಅವರ ಒಟ್ಟು ವಿಚಾರ ಧಾರೆಯಲ್ಲಿ ಸಾಮಾಜಿಕ ವ್ಯವಸ್ಥೆ, ಅದರ ಶ್ರೇಣೀಕೃತ ಶೋಷಣೆ ಮತ್ತು

ಲಿಂಗರಾಜಕಾರಣಗಳ ತಾತ್ತ್ವಿಕ ಶೋಧನೆಗಿಂತ ವ್ಯಕ್ತಿಯ ಅನುಭವಗಳ ತೀವ್ರವೂ ಸಂಕೀರ್ಣವೂ ಆದ ಶೋಧನೆಗೆ ಒತ್ತು ಇತ್ತು.


ಈ ಪ್ರಬಂಧವನ್ನು ಸಾಹಿತ್ಯ ಚರಿತ್ರೆಯ ಅಂಗವಾಗಿ ಸಿದ್ಧಪಡಿಸಬೇಕಾಗಿದ್ದರೂ ನಾನು ಚರಿತ್ರೆಯ ಸಾಂಪ್ರದಾಯಿಕ ಕಾಲಾನುಕ್ರಮಣಿ, ಲೇಖಕಿಯರು ವಿಮರ್ಶೆಗೆ ಕೊಟ್ಟಿರುವ ವಿಮರ್ಶಾಸಾಹಿತ್ಯ ಪ್ರಮಾಣ ಮುಂತಾದ ಮಾಹಿತಿ ವಿಧಾನವನ್ನು ಕೈಬಿಟ್ಟಿದ್ದೇನೆ. ಬದಲಾಗಿ ಹಲವು ದಶಕಗಳಲ್ಲಿ ಸಾಹಿತ್ಯ ಸಂದರ್ಭಗಳು ಬದಲಾದಂತೆ ಮಹಿಳೆಯರ ಬರಹ ಮತ್ತು ವಿಮರ್ಶನ ಪ್ರಜ್ಞೆಗಳಲ್ಲಿ ಆದಂಥ ಬೆಳವಣಿಗೆ–ಬದಲಾವಣೆಗಳ ವಿವಿಧ ಮಗ್ಗುಲುಗಳನ್ನು ಅಕ್ಕಪಕ್ಕದಲ್ಲಿ ಇಡುವ ಮೂಲಕ ವಿಚಾರಗಳನ್ನು ಹೊಳೆಯಿಸಲು ಯತ್ನಿಸಿದ್ದೇನೆ. ಆರಂಭದಲ್ಲೇ ನಾನು ಸೂಚಿಸಿದ ಹಾಗೆ 'ಮಹಿಳಾವಿಮರ್ಶೆ' ಎಂಬ ಪರಿಗ್ರಹಿಕೆ ಸದಾ 'ಪುರುಷಪ್ರಧಾನ ವ್ಯವಸ್ಥೆಯ ಮುಖ್ಯ ಸಾಹಿತ್ಯ ವಿಮರ್ಶೆ' ಎಂಬ ಒರೆಗಲ್ಲನ್ನು ಇಟ್ಟುಕೊಂಡೇ ಚರ್ಚೆಗೆ ಒಳಪಡಬೇಕಾದ ಸ್ಥಿತಿಯಲ್ಲೇ ಇದೆ. ಕೆಲವೇ ವಿರಳ ಸಂದರ್ಭಗಳಲ್ಲಿ ಮಹಿಳೆಯರನ್ನು ಪುರುಷ ಪರಂಪರೆ ಒಳಕ್ಕೆ ಕರೆದುಕೊಂಡದ್ದಿದೆ. ಆದರೆ ಆ ಮಹಿಳೆಯರಾದರೂ ಒಟ್ಟು ಮಾನವರ ಬಗ್ಗೆ ಹೇಳುತ್ತಿದ್ದಾರೆಂದೂ ಅವರ ಮೂಲಕ 'ಮನುಷ್ಯ'ರನ್ನು ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವೆಂದು ಭಾವಿಸುವಂತಾಗಿದೆಯೆ ಎಂಬುದು ಶಂಕಾಸ್ಪದ. ಹೀಗೆ ಗೃಹೀತವಾಗದ ಹೊರತು 'ಮಹಿಳಾತನ'ಕ್ಕಾಗಿಯೇ ಎಷ್ಟು ಎತ್ತರದ ಪೀಠವನ್ನೇ ಕೊಟ್ಟರೂ ಅದು ಜ್ಞಾನಪೀಠವಾಗಲಾರದು–ಎಂಬ ಎಚ್ಚರ ನಮಗಿರಬೇಕಾಗುತ್ತದೆ. ●

ಪರಾಮರ್ಶಿತ ಗ್ರಂಥಗಳು

1. ಕನ್ನಡ ಸಾಹಿತ್ಯದ ಇತಿಹಾಸ: ರಂ. ಶ್ರೀ. ಮುಗಳಿ ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ, 1963. 2. ಕನ್ನಡ ಸಾಹಿತ್ಯ ಸಂದರ್ಭ : ಸಂ. ಜಿ.ಎಸ್. ಶಿವರುದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1990. 3. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ: ಪ್ರಧಾನ ಸಂ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1992. 4. ತಿರುಮಲೆ ರಾಜಮ್ಮ: ಲೇ: ಎಚ್.ಎಸ್ ಪಾರ್ವತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1992. 5. ತ್ರಿವೇಣಿ : ಸಂ. ಎನ್. ಗಾಯತ್ರಿ ಜಾಗೃತಿ ಪ್ರಕಾಶನ, ಬೆಂಗಳೂರು, 1989. 6. ಬರಹಗಾರ್ತಿಯ ಬದುಕು: ಅನುಪಮಾ ನಿರಂಜನ, ಪ್ರಕಾಶಕ: ಡಿ.ವಿ.ಕೆ. ಮೂರ್ತಿ ಮೈಸೂರು, 1990. 7. ಮಹಿಳೆ ಮತ್ತು ಕನ್ನಡ ಸಾಹಿತ್ಯ : ಸಂ. ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1979. 8. ಲೇಖ–ಲೋಕ 2 : ಸಂ. ನಾಗಮಣಿ ಎಸ್. ರಾವ್, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, 1999. 9. ಲೇಖನ ಸೌರಭ : ಪ್ರಕಾಶನ : ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, 1989. 10. ವಿಜಯ : ಡಾ. ಬಿ.ಎನ್. ಸುಮಿತ್ರಾಬಾಯಿ, ಇಳಾಪ್ರಕಾಶನ, ಬೆಂಗಳೂರು, 1995. 11. ಶ್ಯಾಮಲಾ ಸಂಚಯ: ಸಂ. ವಿಜಯಾದಬ್ಬೆ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು–1992. 12. ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ; ಸಂ. ಪ್ರೊ. ಎಲ್.ಎಸ್. ಶೇಷಗಿರಿರಾವ್, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1987. 13. ಸಮಕಾಲೀನ ಸಂಸ್ಕೃತಿ ಮತ್ತು ಅನುಪಮಾ ನಿರಂಜನರ ಸಾಹಿತ್ಯ; ಪ್ರಸಂ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು: 1993. 14. ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ : ಸಂ. ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ (ಪ್ರಸಾರಾಂಗ) ಬೆಂಗಳೂರು, ತೃ. ಮುದ್ರಣ, 1981. 15. ಹೊಂಬೆಳಕು; ಲೇಖನ ಸಂಗ್ರಹ, ವಿವಿಧ ಲೇಖಕಿಯರು, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು. 16. ಹೊಸ ಹೆಜ್ಜೆ: ಸಂ. ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ವೀಣಾ ಶಾಂತೇಶ್ವರ 17. ಹೊಸಗನ್ನಡ ಸಾಹಿತ್ಯ ಚರಿತ್ರೆ: ಪ್ರೊ. ಎಲ್.ಎಸ್. ಶೇಷಗಿರಿರಾವ್, ಅಂಕಿತ ಪ್ರಕಾಶನ, ಬೆಂಗಳೂರು, 1999. 18. ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ: ಸಂ. ಹಂಪ ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1982. 19. Feminism and poetry: Jan Montefiore, Paudora, London and Newyork, 1987.

ಯಾವುದೇ ಪತ್ರಿಕೆಯ ಆರಂಭದ ಹಿಂದೆ ಒಂದು ಗಂಭೀರವಾದ ತುರ್ತು ಇದ್ದೇ ಇರುತ್ತದೆ. ಅದರಂತೆ ಸ್ತ್ರೀ ಜಾಗೃತಿ, ಸ್ತ್ರೀ ಶಿಕ್ಷಣವೂ ಸಹ ಸ್ವಾತಂತ್ರ್ಯಪೂರ್ವಕ ತುರ್ತಾಗಿ ಪರಿಣಮಿಸಿದುದರಿಂದ ಕೆಲವು ಪತ್ರಿಕೆಗಳು ಸ್ತ್ರೀ ಕುರಿತ ಬರಹಗಳನ್ನು ಪ್ರಕಟಿಸತೊಡಗಿದವು. ಜೊತೆಗೆ ಸ್ತ್ರೀ ಬರಹಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲೂ ಕೆಲವು ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿವೆ.

ಡಾ. ಗೀತಾ ಪ್ರಸಾದ್
ಆಧುನಿಕ ಮಹಿಳಾ ಅಭಿವ್ಯಕ್ತಿ
(ಸ್ವಾತಂತ್ರ್ಯಪೂರ್ವ ಮಹಿಳಾ ಸಾಹಿತ್ಯೇತರ ಬರಹ: ಸ್ವರೂಪ ಮತ್ತು ತಾತ್ತ್ವಿಕತೆ)



ತಾದಾತ್ಮ್ಯದ ತಾಯಿ; ಬೆರಗಿನ ಕೂಸು - ವೈ. ಜಯಮ್ಮ

■ ಚರಿತಾ, ಮೈಸೂರು

ನಾನು ಕಾವಾ ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಒಮ್ಮೆ ಜಯಮ್ಮನವರ ಮನೆ/ಗ್ಯಾಲರಿಗೆ ಭೇಟಿ ಕೊಟ್ಟ ನೆನಪು. ಮಾಸಲು ಸೀರೆಯ, ಮಂದಕಿವಿಯ, ಈ ಲೋಕ-ಜನ-ಜಂಜಾಟದ ಉಸಾಬರಿಯೇ ಇಲ್ಲದ ನಿರ್ಲಿಪ್ತ ನಿಲುವು. ಕಿವಿ ಕೇಳುತ್ತಿದ್ದಿಲ್ಲವಾದ್ದರಿಂದ ನಮ್ಮ ಮಾತು, ಅವರ ಉತ್ತರ ಹಿಡಿತಕ್ಕೆ ಸಿಗದ ಬರಿಯ ಶಬ್ದಗಳಂತೆ ಅವರ ಮನೆ ಕಿಟಕಿಯಿಂದ ಜಿಗಿದು ಪಕ್ಕದ ರಸ್ತೆಯ ವಾಹನಗಳ ಚೀರಾಟದೊಂದಿಗೆ ಸೇರಿಹೋಗಿದ್ದವು. ಕಲಾವಿದೆ ಜಯಮ್ಮರನ್ನು ಹೆಚ್ಚು ಹತ್ತಿರದಿಂದ ನೋಡಲು-ಕೇಳಲು-ವಿಸ್ಮಯಗೊಳ್ಳಲು ಸಾಧ್ಯವಾದುದು ಇತ್ತೀಚೆಗೆ.

ಮೈಸೂರಿನ ಇರ್ವಿನ್ ರಸ್ತೆ ನೆಹರು ಸರ್ಕಲ್ ಸೇರುವಲ್ಲಿ, ಸಿಟಿ ಸೆಂಟ್ರಲ್ ಬ್ಯಾಂಕ್ ಎದುರು ನಿಂತು ಪ್ರಯತ್ನಪೂರ್ವಕ ಕಣ್ಣಾಡಿಸಿದರೆ 'ಜಯಾ ಶಂಖ-ಶುಕ್ತಿ ಕಲಾಕೇಂದ್ರ' ಎಂಬ ಬೋರ್ಡ್ ಕಂಡೀತು. ಅದು ಕಲಾವಿದೆ ವೈ. ಜಯಮ್ಮನವರ ಮನೆ ಮತ್ತು ಗ್ಯಾಲರಿ. ಮೂರುಹೊತ್ತು ಗಿಜಿಗುಡುವ ಆ ರಸ್ತೆಯಿಂದ ಮನೆಯನ್ನು ನೆಪಮಾತ್ರಕ್ಕೆಂಬಂತೆ ವಿಭಜಿಸಿರುವುದು ಜಗುಲಿಯ ತುದಿಯಿಂದ ಬಾಗಿಲೆತ್ತರಕ್ಕೆ ಅಳವಡಿಸಿರುವ ಕಬ್ಬಿಣದ ಜಾಲರಿ. ಅದರ ಮೆಟಲ್ ಗೇಟ್ ತೆರೆದು ಉದ್ದನೆಯ ಹಜಾರಕ್ಕೆ ಬಂದರೆ, ಯಾವುದೋ ಭದ್ರಕೋಟೆಯೊಳಗೆ ಪ್ರವೇಶ ಸಿಕ್ಕಂತೆ. ಮತ್ತೆ, ಸ್ವಲ್ಪ ಗಲಿಬಿಲಿಗೊಳಿಸಲೆಂಬಂತೆ ಎರಡು ಮೂರು ದೊಡ್ಡ ಬಾಗಿಲುಗಳು ಕಾವಲುಗಾರರಂತೆ ನಿಂತಿವೆ. ಅತ್ತ ಬಾಗಿಲು ತಟ್ಟಿ, ಮತ್ತೊಂದು ತುದಿಯ ಕಾಲಿಂಗ್ ಬೆಲ್ ಅದುಮಿ, ಅತ್ತಿತ್ತ ಶತಪಥ ತಿರುಗಿ ಪ್ರತಿಕ್ರಿಯೆ ಬರದಿದ್ದಾಗ ಹೊರಡಲು ತೊಡಗುತ್ತಿದ್ದಂತೆ ಒಂದು ಬಾಗಿಲು ತೆರೆದುಕೊಳ್ಳುತ್ತದೆ. ಕಿವಿಗೆ ಕೇಳಿಸದಿದ್ದರೂ, ತಪಸ್ಸು ಭಂಗಗೊಳಿಸಿದ್ದಕ್ಕೆ ನಿಮಗೆ ಸಣ್ಣ ಶಾಪವಂತೂ ಗ್ಯಾರಂಟಿ!

ಅದು ಜಯಮ್ಮನವರ ಕರ್ಮಭೂಮಿ-ಸ್ಟುಡಿಯೊ. ಒಂದಲ್ಲ ಒಂದು ಕಲಾಕೃತಿ ಮಾತು ಪಡೆಯುವ ಹಂತದಲ್ಲಿದ್ದುದು ನಿಮ್ಮ ಬಲವಂತ ಅತಿಕ್ರಮಣದಿಂದಾಗಿ ಮೌನತಾಳಿ ಕುಳಿತುಬಿಟ್ಟಿರುತ್ತದೆ. ಆ ದೊಡ್ಡ ಹಾಲ್ ಸುತ್ತಲೂ ಮುಗುಳ್ನಗುವ ಮೂಕಾಂಬಿಕೆ, ಕತ್ತಿ ಹಿಡಿದ ರಾವಣ, ರೆಕ್ಕೆ ಕಳೆದುಕೊಂಡಿರುವ ಜಟಾಯು, ಮುಖ ಮುಚ್ಚಿದ ಸೀತೆ, ಗದಾಯುದ್ಧದ ಮಲ್ಲರು, ಬಾಯಿತೆರೆದ ಪೂತನಿ, ಗದೆ ಹಿಡಿದು ಅತ್ತ ತಿರುಗಿದ ಹನುಮಂತ, ದಿವ್ಯನಗೆ ಬೀರುತ್ತ ನಿಂತಿರುವ ಕಲಾಂ - ಎಲ್ಲರೂ ಜಯಮ್ಮರೊಂದಿಗಿನ ಸಲ್ಲಾಪ ನಿಲ್ಲಿಸಿ ಅಲುಗಾಡದೆ ನಿಂತಿದ್ದಾರೆ. ಇತ್ತ ಉಗ್ರನರಸಿಂಹನಿಗೆ ಇನ್ನೂ ಕೈ-ಬಾಯಿ ಜೋಡಿಸಿಲ್ಲದ್ದರಿಂದ ಆತ ತನ್ನ ದಪ್ಪನೆಯ ದುಂಡು ಶಂಖದ ಕಣ್ಣುಗಳನ್ನು ನಿಮ್ಮತ್ತಲೇ ತಿರುಗಿಸಿ ಹೂಂಕರಿಸುತ್ತ ಕುಳಿತಿದ್ದಾನೆ. ತೊಂದರೆ ಕೊಟ್ಟಿದ್ದಕ್ಕೆ ನೀವು ಅನಿವಾರ್ಯವಾಗಿ ಭಂಡನಗೆಯೊಂದಿಗೆ ಮಾತಾಡುವುದಾದರೂ ಗಟ್ಟಿದನಿಯಲ್ಲಿ ಮಾತ್ರ ಸಂಪರ್ಕ ಸಾಧ್ಯ. ಅವರಿಗೆ ಕಿವಿ ಕೇಳುವುದಿಲ್ಲ. ಬಹುಶಃ ಇದು ನಿಮಗೆ ಸಣ್ಣ ಶಿಕ್ಷೆಯೂ ಆಗಿರಬಹುದು. ಆದರೆ, ಆ ನಿರಂತರ ಗಲಾಟೆಯ ರಸ್ತೆಗೆ ಓಗೊಡಲಾಗದೆ, ತಮ್ಮ ತದೇಕಚಿತ್ತದ ಚಿಪ್ಪಿನೊಳಗೆ ಅಡಗಲೆಂದೇ ಅವರಿಗೆ ಕಿವುಡುಂಟಾಗಿರಬಹುದು ಅನಿಸದೆ ಇರದು. ಮುಜುಗರದಿಂದಲೆ ದೊಡ್ಡ ದನಿಯಲ್ಲಿ ಮಾತಿಗೆ ತೊಡಗಿದ ನನಗೆ, ನಂತರ ಅವರ ನಿರರ್ಗಳ ಸ್ವಗತಕ್ಕೆ ಸಾಕ್ಷಿಯಾಗಿ ಮಾತ್ರ ಅಲ್ಲಿದ್ದಂತೆ ಅನಿಸಿತ್ತು. ಜಯಮ್ಮನವರ ತಾದಾತ್ಮ್ಯ ಅಂಥದ್ದು. ಅವರ ಭಾವಾತಿರೇಕದ, ಅಮಿತೋತ್ಸಾಹದ, ಭಕ್ತಿಯ ಪರಾಕಾಷ್ಠೆಯಲ್ಲಿ ಈ ಲೋಕದ ಜಿಗುಟು ಕೊಚ್ಚಿಹೋಗಲೇಬೇಕು!

ಮೈಸೂರು ಒಡೆಯರ ಕಾಲದಲ್ಲಿ ಸ್ಥಾನಮಾನ ಗಳಿಸಿದ್ದ ಮನೆತನ ಇವರದ್ದು. ತಂದೆ ಎಂ.ವೈ.ಸ್ವಾಮಿ ಸಿನಿಮಾ ಡಿಸ್ಟ್ರಿಬ್ಯೂಟರ್ ಆಗಿದ್ದವರು. ತಾತ ಯಾಲಕ್ಕಾಚಾರ್ ಪ್ರಮುಖ ಕಂಟ್ರಾಕ್ಟರ್ (ಲಲಿತಮಹಲ್, ದೊಡ್ಡ ಗಡಿಯಾರ, ಚಾಮುಂಡಿ ಬೆಟ್ಟದ ಅರಮನೆ ಇತ್ಯಾದಿ ಕಟ್ಟಡಗಳು ಇವರ ನೇತೃತ್ವದಲ್ಲಿ ಆದದ್ದು.) ಆಗಿನ ಅರಮನೆ ಕಲಾವಿದರಲ್ಲಿ ಒಬ್ಬರಾಗಿದ್ದ ಎಸ್.ಎನ್.ಸ್ವಾಮಿ ಜಯಮ್ಮನವರ ಸೋದರಮಾವ. ಈ ಹಿನ್ನೆಲೆಯಲ್ಲಿ ಬೆಳೆದ ಇವರಿಗೆ ಸಹಜವಾಗಿಯೇ ಕಲೆ-ಕುಶಲತೆಯ ಸೃಜನಶೀಲ ಹುಡುಕಾಟದ ನಂಟು. ತಮ್ಮ ಕಲಾಸಕ್ತಿಗೆ ತಾಯಿಯಿಂದ ಪ್ರಮುಖ ಒತ್ತಾಸೆ ಸಿಕ್ಕಿದ್ದಾಗಿ ಧನ್ಯತೆಯಿಂದ ನೆನಪಿಸಿಕೊಳ್ಳುತ್ತಾರೆ.

ಮೈಸೂರು ವಿ.ವಿ.ಯಲ್ಲಿ ಸೋಷಿಯಾಲಜಿ ರ‍್ಯಾಂಕ್ ವಿದ್ಯಾರ್ಥಿಯಾಗಿದ್ದ ಇವರಿಗೆ ಸಿ.ಟಿ.ಐ.ನಲ್ಲಿ (ಈಗಿನ ಕಾವಾ) ಪ್ರವೇಶ ದೊರಕಿತ್ತಾದರೂ ವೇಳೆ ಹೊಂದಿಸಲಾಗದೆ ಕಲಾವಿದ್ಯಾರ್ಥಿಯಾಗಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಜೆ.ಎಸ್.ಎಸ್.ನ ಡಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿದ ಜಯಮ್ಮನವರಿಗೆ ತಮ್ಮ ನೆಚ್ಚಿನ ಕಲಾಕೃತಿ ರಚನೆಯಲ್ಲಿ ಸಂಪೂರ್ಣ ತೊಡಗಿಕೊಳ್ಳಲು ಸಮಯ ಸಿಕ್ಕಿದ್ದು ನಿವೃತ್ತಿಯ ನಂತರವೇ. ಅವರೇ ಹೇಳುವಂತೆ ನಿದ್ದೆ-ಊಟ-ಜನ-ಗೌಜು ಎಲ್ಲವನ್ನೂ ಮರೆಸಿಬಿಡುವಂಥ ನಂಟು ಕಲೆಯೊಂದಿಗೆ ಅವರದ್ದು.

ಅಪರೂಪದ ಮಾಧ್ಯಮವಾದ ಶಂಖ-ಚಿಪ್ಪುಗಳನ್ನು ಬಳಸಿ ಕೃತಿ ರಚಿಸುವಂತೆ ತಮ್ಮ ತಾಯಿಯೇ ಮಾರ್ಗದರ್ಶನ ಮಾಡಿದುದಾಗಿ ಹೇಳುತ್ತಾರೆ. ಶಂಖ ಮತ್ತು ಚಿಪ್ಪುಗಳ ವಿವಿಧ ಅಳತೆ, ಮೈವಳಿಕೆ, ಬಣ್ಣಗಳ ಪ್ರಪಂಚದಲ್ಲೇ ತಮ್ಮ ಕಲ್ಪನಾಲೋಕವನ್ನು ಹರಡಿಕೊಂಡು ಕೂರುವ ಜಯಮ್ಮ ಕನ್ನಡ ಸಾಹಿತ್ಯ, ಪುರಾಣ, ಉಪಕಥೆಗಳಲ್ಲಿ ಬರುವ ದೇವ-ದಾನವರನ್ನು ಶಂಖ ಚಿಪ್ಪುಗಳ ವಿಶಿಷ್ಟ ಮೈವಳಿಕೆಗಳಲ್ಲಿ ಮೂರ್ತಗೊಳಿಸುತ್ತಾರೆ. ಚಾಮುಂಡೇಶ್ವರಿ, ಸರಸ್ವತಿ, ಹನುಮಂತ, ಶೇಷಶಾಯಿ ವಿಷ್ಣು, ಭೀಮ - ದುರ್ಯೋಧನರ ಗದಾಯುದ್ಧ, ರುಂಡಮಾಲಿನಿ, ಗಜೇಂದ್ರ ಮೋಕ್ಷ, ಪೂತನಾ ಸಂಹಾರ, ಸಿಂಹಿಕೆ,... ಹೀಗೆ ಎಲ್ಲವೂ ಇವರ

ಶಂಖು–ಶುಕ್ತಿಯ(ಚಿಪ್ಪು) ವಿಶಿಷ್ಟ ಕೃತಿಗಳು. ರಾಮಾಯಣದ ಒಕ್ಕಣ್ಣ 'ಕಬಂಧ' ಇಲ್ಲಿ ಹಸಿರು ಮಿಶ್ರಿತ ಕಪ್ಪು ಚಿಪ್ಪುಗಳಿಂದ ಒಡಮೂಡಿದ್ದಾನೆ. ಸುಮಾರು ನಾಲ್ಕುಅಡಿ ಎತ್ತರದ ಅಮೂರ್ತ ದೇಹ ಮತ್ತು ಏಳು ಅಡಿ ಉದ್ದದ ಕೈಗಳು ಈತನದ್ದು. ಚಾಮುಂಡೇಶ್ವರಿ, ಗದಾಯುದ್ಧ, ಸೀತಾಪಹರಣ ಮುಂತಾದ ಹಲವು ಬೃಹದ್ಗಾತ್ರದ ಕೃತಿಗಳು ಜಯಮ್ಮನವರಿಂದ ರಚಿತಗೊಂಡಿವೆ.

ಶಂಖ ಮತ್ತು ಚಿಪ್ಪುಗಳ ಒರಟು ಮೈವಳಿಕೆ, ಅಪರೂಪದ ವರ್ಣಸಂಯೋಜನೆ ಮತ್ತು ವಿಚಿತ್ರ ಡಿಸೈನ್‌ಗಳಿಗೆ ತಕ್ಕ ಪಾತ್ರ ಸೃಷ್ಟಿ ಮಾಡುತ್ತಾರೆ ಜಯಮ್ಮ. ಅದರಿಂದಲೋ ಏನೊ, ಇವರು ಆಯ್ದುಕೊಂಡ ಬಹುಪಾಲು ಪಾತ್ರಗಳು ರಾಕ್ಷಸ ಗಣಗಳದ್ದು! ಬಹುಶಃ ತಮ್ಮ ಅಭಿವ್ಯಕ್ತಿಗೆ ಹೆಚ್ಚು ಸಶಕ್ತ 'ಧ್ವನಿ' ಇದರಿಂದ ದೊರಕಿರಬಹುದು. ದೊಡ್ಡ ದನಿಯಲ್ಲಿ ಚೀತ್ಕರಿಸುವ, ಒಮ್ಮೆಗೇ ಸ್ಫೋಟಗೊಂಡಂತೆ ಕಾಣುವ ಈ ಕೃತಿಗಳು ಕಲಾವಿದೆಯ ಗಾಢಾನುಭವದ ತೀಕ್ಷ್ಣ ಅಭಿವ್ಯಕ್ತಿಯಂತೆ ಕಾಣುತ್ತವೆ. ಆಂತೆಯೇ ಪ್ರತಿಯೊಂದು ವಿವರವೂ ಸಂಪೂರ್ಣ ಮಗ್ನತೆಯಿಂದ ಸಾಕ್ಷಾತ್ಕರಿಸಿಕೊಂಡಂತಿದ್ದು ಒಟ್ಟಾರೆ ಕಲಾಕೃತಿ ನೋಡುಗನಲ್ಲಿ ಬಹುಕಾಲದವರೆಗೆ ಪ್ರತಿಧ್ವನಿಯ ತರಂಗಗಳನ್ನು ಹೊಮ್ಮಿಸುವಷ್ಟು ಶಕ್ತವಾಗಿವೆ.

ಪೌರಾಣಿಕ, ಸಾಹಿತ್ಯಿಕ ಪಾತ್ರಗಳಲ್ಲದೆ ಮಾರ್ಷಲ್ ಕಾರ್ಯಪ್ಪ, ರಾಷ್ಟ್ರಪತಿ ಅಬ್ದುಲ್ ಕಲಾಂ ಮುಂತಾದ ತಮ್ಮ ನೆಚ್ಚಿನ ವ್ಯಕ್ತಿಗಳನ್ನೂ ರಚಿಸಿದ್ದಾರೆ ಜಯಮ್ಮ. ಗಾಯಕ ಜೇಸುದಾಸ್ ಕೂಡ ಹಾಡಲಿದ್ದಾರೆ ಇಲ್ಲಿ. ಸದ್ಯಕ್ಕೆ ಹಂಪಿಯ 'ಉಗ್ರನರಸಿಂಹ' ಇವರ ಸ್ಟುಡಿಯೊದಲ್ಲಿ ಅವತರಿಸುತ್ತಿದ್ದಾನೆ. ಮೂವತ್ತು ವರ್ಷಗಳ ಕಲಾನುಭವದಿಂದ ಸಾಕಷ್ಟು ಪರಿಪಕ್ವಗೊಂಡಂತೆ ಕಾಣುವ ಇವರ ನರಸಿಂಹ ಒಮ್ಮೆ ಮನಸಾರೆ 'ಘರ್ಜಿಸಲು' ತವಕಿಸುತ್ತಿದ್ದಾನೆ!

"ಎಷ್ಟ್ ಚೆನಾಗಿದೆ ನೋಡಮ್ಮ... ಇದ್ ಹೆಂಗ್ ಬಂತು...ನಾನೇ ಮಾಡಿದ್ದಾ ಇದು? ಅಂತ ನಂಗೇ ಆಶ್ಚರ್ಯ ಆಗುತ್ತೆ ಕಣಮ್ಮ!" ಅನ್ನುತ್ತ ಕೆನ್ನೆಯ ಮೇಲೆ ಕೈಯಿಟ್ಟು ಪುಟ್ಟ ಮಗುವಿನಂತೆ ಬೆರಗುಗಣ್ಣು ಬಿಡುತ್ತ ಉದ್ಗರಿಸುತ್ತಾರೆ ಜಯಮ್ಮ. ಕೃತಿರಚನೆಯ ಬಗ್ಗೆ ಅತಿಯಾಗಿ ತಲೆಕೆಡಿಸಿಕೊಂಡು ಮಲಗಿದ್ದಾಗ ಕನಸಿನಲ್ಲಿ ಒಂದು ಬಿಳೀಕೈ ತಾನಾಗೇ ಚಿಪ್ಪುಗಳನ್ನು ಜೋಡಿಸಿ ತೋರಿಸಿತಂತೆ. ತಕ್ಷಣ ಎದ್ದು, ಕನಸಿನಲ್ಲಿ ಕಂಡಂತೆಯೇ ಜೋಡಿಸಿ ಅಂಟಿಸಿಟ್ಟರಂತೆ. ಅದು ಅವರ ಮೊದಲ ಮಾಸ್ಟರ್ ಪೀಸ್– 'ಬೆರಳ್ಗೆ ಕೊರಳ್' (ಕುವೆಂಪುರವರಿಂದ ಪ್ರೇರಿತ).


ಎಪ್ಪತ್ತೆರಡರ ಹರೆಯದ ಜಯಮ್ಮ ತಾವು ಅವಿವಾಹಿತರಾಗಿಯೇ ಉಳಿದುದಕ್ಕೆ ತಮ್ಮ ಹತ್ತಿಕ್ಕಲಾಗದ ಕಲಾಪ್ರೇಮವೇ ಕಾರಣ ಎನ್ನುತ್ತಾರೆ. ತಮ್ಮ ಜೀವನಶೈಲಿಗೆ, ಕಲೆಯ ತುಡಿತಕ್ಕೆ ಹೊಂದುವಾತ ಸಿಗದಿದ್ದರಿಂದ ಹೀಗೆಯೇ ಉಳಿದೆ ಎನ್ನುವ ಇವರು, ಮದುವೆಯ ಬಂಧನಕ್ಕೆ ಸಿಲುಕದಿರುವುದು ತಮ್ಮ ಅದೃಷ್ಟ ಎಂದು ನಿಟ್ಟುಸಿರುಬಿಡುತ್ತಾರೆ. ಅಕ್ಕ ಸರೋಜಾರವರ ಸಂಸಾರದೊಂದಿಗೆ ತಾವೂ ನೆಲೆಸಿದ್ದಾರೆ. ಸರೋಜಕ್ಕನೇ ಅಮ್ಮ, ಗೆಳತಿ, ತಂಗಿಯ ಕಲಾಕೃತಿಯ ಮೊದಲ ವೀಕ್ಷಕಿ, ವಿಮರ್ಶಕಿ. ಈ ಲೋಕದ ಸಿಹಿಪಾಲೊಂದು ಇವರೊಂದಿಗೇ ನಿರಂತರವಾಗಿ ಹೆಪ್ಪುಗಟ್ಟಿರುವುದೇನೋ ಎಂಬಂತೆ ಈ ಅಕ್ಕತಂಗಿಯರು ತಮ್ಮಷ್ಟಕ್ಕೆ ತಾವು ತಮ್ಮದೇ ಭಾವಲಹರಿಯಲ್ಲಿ ಹರಟುತ್ತಾರೆ. ಜಯಮ್ಮನವರ ಕಲಾಕೃತಿಗಳಿಗೆ ಶಾಶ್ವತ ನೆಲೆ ಕಲ್ಪಿಸುವ ಬಗೆಗಿನ ತಳಮಳವೂ ಇವರಲ್ಲಿದೆ. ಕೆಲವು ಕೃತಿಗಳನ್ನು ತಮ್ಮ ಸಂಗ್ರಹಕ್ಕೆ ಪಡೆಯುವುದಾಗಿ ಹೇಳಿದ್ದ ಧರ್ಮಸ್ಥಳದ ವೀರೇಂದ್ರ ಹೆಗಡೆಯವರನ್ನು ಸಾಕಷ್ಟು ಬಾರಿ ಸಂಪರ್ಕಿಸಿದರೂ ಯಾವುದೆ ಪ್ರತಿಕ್ರಿಯೆ ದೊರೆತಿಲ್ಲ. ಇನ್ನು ಮೈಸೂರಿನಲ್ಲೆ ಶಾಶ್ವತ ನೆಲೆ ಕಲ್ಪಿಸುವುದು ಕಲಾಸಕ್ತರ ನೆರವಿನಿಂದ ಮಾತ್ರ ಸಾಧ್ಯವಾಗಬಲ್ಲದು.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಬಹುಮಾನ ಗಳಿಸಿರುವ ಇವರ ಕೆಲವು ಕಲಾಕೃತಿಗಳು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿವೆ. ಅಲ್ಲದೆ, ಇವರ 'ಸಿಂಹಿಕೆ' ಮತ್ತು 'ಪೂತನಾ ಸಂಹಾರ' ಲಂಡನ್ ಮತ್ತು ಚೆನ್ನೈ ಪ್ರದರ್ಶನಕ್ಕೆ ಪ್ರಯಾಣ ಬೆಳೆಸಿವೆ.

"...ಕಾಳಿ, ...ಶಿರ್ಸಿ ಕಾಳಿ ಮಾಡ್ಬೇಕು, ತುಂಬ ಚೆನಾಗಿದಾಳೆ ಅವ್ಳು..." ಅನ್ನುವಾಗ ಮೈಮೇಲೆ ಕಾಳಿಯನ್ನೇ ಆವಾಹಿಸಿಕೊಂಡಂತೆ ಒಂದುಕ್ಷಣ ಆವೇಶಗೊಳ್ಳುತ್ತಾರೆ. "ಇನ್ನೂ ಎಷ್ಟೆಲ್ಲಾ ಮಾಡ್ಬೇಕು ಕಣಮ್ಮ... ನಂಗೆ ಇನ್ನೂ ಜಾಸ್ತಿ ಆಯಸ್ಸು ಬೇಕಿತ್ತು, ಇದನ್ನೆಲ್ಲ ತುಂಬ ಲೇಟಾಗ್ ಶುರುಮಾಡ್ದೆ..." ಎನ್ನುತ್ತ ಕೈಕೈ ಹೊಸಕಿಕೊಳ್ಳುತ್ತ ತಮ್ಮಷ್ಟಕ್ಕೆ ಗೊಣಗಿಕೊಳ್ಳುವಾಗ ನನಗೆ ನಿಜಕ್ಕು ಸಮಾಧಾನ ಮಾಡುವ ವಿಧಾನ ತಿಳಿಯಲಿಲ್ಲ. ಸ್ವಗತದ ಲಹರಿಯಲ್ಲಿದ್ದ ಅವರ ತಣಿಯದ ಹಸಿವಿಗೆ, ದಣಿಯದ ಚೇತನಕ್ಕೆ, ಅಗಾಧ ಬೆರಗು ಮತ್ತು ಶುದ್ಧ ಸಂಭ್ರಮಕ್ಕೆ ಶಿರಬಾಗುವುದಷ್ಟೆ ನನಗೆ ಸಾಧ್ಯವಾದುದು.

ನೂರು ವರ್ಷ ಹಳೆಯದಾದ ಇವರ ದೊಡ್ಡ ಮನೆಯ ಮಹಡಿಯ ಹಜಾರದಲ್ಲಿ ಅಷ್ಟೂ ಕೃತಿಪಾತ್ರಗಳು ಒಮ್ಮೆಗೆ ಮಾತಾಡತೊಡಗುತ್ತವೆ. ಕೆಳಗಿನ ತಮ್ಮ ಸ್ಟುಡಿಯೊದಲ್ಲೆ ಜಯಮ್ಮನವರ ಎಂದಿನ ವಾಸ್ತವ್ಯ. ನೆಚ್ಚಿನ ಕಲಾಕೃತಿಗಳ ನಡುವೆ ಸಂಭ್ರಮ, ತಳಮಳ, ಉತ್ಸಾಹ, ಕನಸುಗಳನ್ನು ಹೊದ್ದ ಜಯಮ್ಮ ಒಮ್ಮೆ ಮಹಾಯೋಗಿನಿಯಂತೆ, ಮತ್ತೊಮ್ಮೆ ಶುದ್ಧ ಬೆರಗಿನ ಕೂಸಿನಂತೆ, ಮಗದೊಮ್ಮೆ ಯಾವುದೋ ಅಲೌಕಿಕ ರುಚಿ ಚಪ್ಪರಿಸುವ ಸಂತೃಪ್ತಿಯ ಭಾವದಲ್ಲಿ ತಲೆಯಾಡಿಸುತ್ತ ಪುಳಕಗೊಂಡಂತೆ ಕಣ್ಮುಚ್ಚಿ ಕುಳಿತುಬಿಡುತ್ತಾರೆ. ●





ಶಾರದಾ ದಾಬಡೆ-
ನಾ ಕಂಡ ಅಪರೂಪದ ಮಹಿಳೆ

■ ಮಾಲತಿ ಪಟ್ಟಣಶೆಟ್ಟಿ

ಹೌದು, ಶಾರದಾ ದಾಬಡೆಯಂಥ ಅಪರೂಪದ ಮಹಿಳೆಯನ್ನು ನನ್ನ ಅನುಭವದ ಪರಿಧಿಯಲ್ಲಿ ಬೇರೆಲ್ಲೂ ಕಂಡಿಲ್ಲ. ಮಹಿಳೆಯರು ನಾವು ಸಹಸಾ ಗ್ರಹಿಸಿದಂತೆ ತಮ್ಮ ಪರಿವಾರದ ಪ್ರಗತಿ, ಯಶೋಭಿವೃದ್ಧಿಗಾಗಿ ಜೀವನವಿಡೀ ತೇಯುತ್ತಾರೆ. ಮನೆಯೇ ಇವರ ಜಗತ್ತು. ಹೊಸ್ತಿಲಾಚೆ ಕಣ್ಣು ಹಾಯಿಸದೆ ಇರುವಂಥ ಒಂದು ಪರಿಮಿತಿಯಲ್ಲಿ ಬದುಕುವುದೇ ಒಬ್ಬ ಉತ್ತಮ ಗೃಹಿಣಿಯ ಲಕ್ಷಣ ಎಂಬ ಭ್ರಮೆಯಲ್ಲಿ ಇರುತ್ತಾರೆ. ಆದರೆ ಮನೆಯಾಚೆಗೂ ಒಂದು ಮಹಾಮನೆ ಇದೆ. ಜಗತ್ತನ್ನೇ ಮನೆಯಾಗಿಸಿಕೊಳ್ಳುವ ಕರುಳು ನಮ್ಮಲ್ಲಿ ಇರುವುದಿಲ್ಲ. ಸುತ್ತಲಿನ ಪುಟ್ಟ ಪರಿಸರವನ್ನು ತನ್ನ ತೋಳ ತೆಕ್ಕೆಯಲ್ಲಿ ತೆಗೆದುಕೊಂಡು ಅಲ್ಲಿ ನ್ಯಾಯಬದ್ಧ, ಶುದ್ಧ ಬದುಕಿರಬೇಕೆಂದು



ಹೋರಾಡುವ ಮಹಿಳೆ ಶಾರದಾ. ಈಕೆ ನನ್ನ ಚಿಕ್ಕ ಸ್ನೇಹಿತೆ ಕೂಡ. ಐವತ್ತರ ಹರೆಯದ ಚೈತನ್ಯದ ಚಿಲುಮೆ. ಸದಾ ಖಾದಿ ಸೀರೆಯನ್ನುಟ್ಟು ಗಾಜಿನಬಳೆ ಹಾಕಿಕೊಂಡು, ಕೊರಳಲ್ಲಿ ಒಂದು ಸಾಧಾರಣ ಮಂಗಳಸೂತ್ರ. ಒಂದು ಗುಂಜಿ ಹೆಚ್ಚಿನ ಬಂಗಾರ ಆಕೆಯ ಮೈಮೇಲಿಲ್ಲ. ಹಲವು ಕನಸುಗಳನ್ನು ನನಸಾಗಿಸುವ ಹಟ ಅವಳ ನಗುಮೊಗದಲ್ಲಿ ಲಾಸ್ಯವಾಡುತ್ತದೆ. ಕಳೆದ 25 ವರ್ಷಗಳಿಂದ ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿಯ ಗ್ರಾಮಾಂತರ ಪ್ರದೇಶಗಳಾದ ಮೆಡ್ಲೇರಿ, ಲಿಂಗಸುಗೂರು, ಹಂಚಿನಾಳ, ಮಾಚಿ, ಕುಲವಳ್ಳಿ, ಗಲಗಿನಮಡ, ಖಾಸಾಪುರ, ಗಂಗ್ಯಾನಟ್ಟಿ, ಸಿಂಗಾಪುರ ಇತ್ಯಾದಿ ಹಳ್ಳಿಗಳಲ್ಲಿ ನಡೆದಾಡಿ ಗ್ರಾಮೀಣರ, ಗ್ರಾಮೀಣ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುತ್ತ, ಅನ್ಯಾಯವೆಸಗುತ್ತಿರುವ ಜಮೀನುದಾರರ, ಉದ್ದಿಮೆದಾರರ ಸರಕಾರದ ಹಾಗೂ ಅಧಿಕಾರಶಾಹಿಗಳೊಂದಿಗೆ ಹೋರಾಡಿ ನ್ಯಾಯ ದೊರಕಿಸಿ ಕೊಟ್ಟ ಧೀರ ಮಹಿಳೆ. ಗ್ರಾಮೀಣ ಪ್ರದೇಶಗಳಲ್ಲಿ ಜನಜಾಗೃತಿ, ಶಿಕ್ಷಣ, ಆರೋಗ್ಯ, ಗ್ರಾಮೀಣ ಕಸುಬು ಇವುಗಳನ್ನು ಮೂಲ ಉದ್ದೇಶವಾಗಿಟ್ಟುಕೊಂಡು ಅವಿರತವಾಗಿ ಒಂದು ಮೌನಕ್ರಾಂತಿಯನ್ನು ನಡೆಸಿದ್ದಾರೆ. ಶಾರದಾ ಆಯ್ಕೆ ಮಾಡಿಕೊಂಡ ಕಾಯಕದಲ್ಲಿ ಇವರ ಪತಿ ಡಾ. ಗೋಪಾಲ ದಾಬಡೆಯವರು ಸಂಗಾತಿಯಾಗಿ ಹೆಜ್ಜೆ ಹಾಕಿದ್ದು ಅವಿಸ್ಮರಣೀಯವೆ! ಎಂಥ ಕಾಕತಾಳೀಯವೋ ಡಾ. ಗೋಪಾಲ ದಾಬಡೆಯವರ ಮನೆತನವೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ತನ್ನನ್ನು ಅರ್ಪಿಸಿಕೊಂಡಿದೆ. ಕಳೆದವರ್ಷ ದಿವಂಗತರಾದ ಸುಪ್ರಸಿದ್ಧ ಗಾಂಧೀವಾದಿ ಶ್ರೀ ನರಸಿಂಹ ದಾಬಡೆ ಇವರ ತಂದೆ. ಗೋಪಾಲ ಅವರು ಶಾರದಾ ಅವರನ್ನು ಬಾಳಸಂಗಾತಿ ಎಂದು ಆಯ್ಕೆ ಮಾಡಿಕೊಂಡದ್ದಾಗಲಿ, ಅಥವಾ ಗೋಪಾಲ ಅವರನ್ನು ಶಾರದಾ ಆಯ್ಕೆ ಮಾಡಿಕೊಂಡದ್ದು ಇವರ ಸಮಾನಾಂತರ ಆಚಾರ ವಿಚಾರ... ಎಲ್ಲವು ಒಂದು ಅದೃಷ್ಟದ ಕತೆಯೆ!

ಈ ದಂಪತಿಗಳು ಆಯ್ದುಕೊಂಡ ಗ್ರಾಮೀಣಭಾರತದ ಕ್ಷೇತ್ರ ಹಲವಾರು ಸವಾಲುಗಳನ್ನು ಒಡ್ಡಿತ್ತು ಮತ್ತು ಇಂದಿಗೂ ಒಡ್ಡುತ್ತಲೇ ಇದೆ. ಶ್ರೀಮಂತರ, ಅಧಿಕಾರಶಾಹಿಗಳ ಮತ್ತು ಬೇಜವಾಬುದಾರಿ ಸರಕಾರಿ ಅಧಿಕಾರಿಗಳ ಕಪಿಮುಷ್ಠಿಯಲ್ಲಿ ಸಿಕ್ಕಿ ಎಂದೆಂದಿಗೂ ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯದ ಅಸಹಾಯಕ, ಅಮಾಯಕ, ಗ್ರಾಮೀಣರಿಗೆ ಅರಿವಿನ ಮಾರ್ಗ ತೋರಿ ಮುನ್ನಡೆಸುವುದು ಸುಲಭ ಸಾಧ್ಯದ ಮಾತಲ್ಲ. ಸಮಸ್ಯೆ, ನಿರಾಸೆ, ಭಯ ಹಲವು ಬಗೆಯ ಅವಘಡಗಳ ವಿರುದ್ಧ ಈಸುವ ಎದೆಗಾರಿಕೆ ಈ ದಂಪತಿಗಳಲ್ಲಿದ್ದುದರಿಂದ ಇವರು ಇಂದಿಗೂ ಸಂತೋಷದಿಂದಲೇ ಈ ಮಾರ್ಗದಲ್ಲಿ ಮುನ್ನುಗ್ಗುತ್ತ ನಡೆದಿದ್ದಾರೆ.

ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಬಕ್ಕೆಮನೆ ಎಂಬ ನಾಲ್ಕೇ ನಾಲ್ಕು ಮನೆಗಳ ಪುಟ್ಟ ಹಳ್ಳಿಯಲ್ಲಿ ತಾ॥ 28-09-1960ರಲ್ಲಿ ಶಾರದಾ ಅವರ ಜನ್ಮವಾಯ್ತು. ನವರಾತ್ರಿಯ ಸರಸ್ವತಿದೇವಿಯ ಆರಾಧನೆಯ ದಿನ ಜನಿಸಿದ ಈ ಮಗುವಿಗೆ ತಾಯಿ ಪಾರ್ವತಮ್ಮ 'ಶಾರದಾ' ಎಂದು ಹೆಸರಿಸಿದ್ದು ತುಂಬ ಅನ್ವರ್ಥಕ. ಹೊರಜಗತ್ತಿನಿಂದ ಸಂಪೂರ್ಣವಾಗಿ ಮುಚ್ಚಿಕೊಂಡ ಈ ಊರನ್ನು ಸುತ್ತುವರಿದ ಸಹ್ಯ ಪರ್ವತವನ್ನು ಭೇದಿಸಿ ಹೊರಬಂದವರು ಶಾರದಾ ಅವರ ತಂದೆ ನಾರಾಯಣ ಹೆಗಡೆಯವರು. ಸ್ವಾತಂತ್ರ್ಯಯೋಧರು, ಸಮಾಜಸೇನೆಗೆ ಟೊಂಕಕಟ್ಟಿ ನಿಂತವರು. ಊರಿಗೆ ರಸ್ತೆ, ದೀಪ, ಶಾಲೆ ತಂದು ರಸ್ತೆಗುಂಟ ಮರಗಳನ್ನು ನೆಟ್ಟು ಅಂದೇ ಬಕ್ಕೆಮನೆಯಿಂದ ಆಂದೋಲನ ನಡೆಸಿದರು. ಇಂಥ ಅಪ್ಪನ ಪ್ರತಿಮೂರ್ತಿ ಶಾರದಾ. ಈಕೆಯ ಅಣ್ಣ ಶ್ರೀ ನಾಗೇಶ ಹೆಗಡೆ ಶಾರದಾ ಅವರ ಬದುಕಿನಲ್ಲಿ ಹೊಸಬೆಳಕು ತಂದ ಸಹೋದರ. ಕರ್ನಾಟಕದಲ್ಲೇ

ಹೆಸರಾಂತ ಪರಿಸರವಾದಿ. ಪ್ರಜಾವಾಣಿಯಲ್ಲಿ ಸಂಪಾದಕರಾಗಿ ಈಗ ಬೆಂಗಳೂರಿನ ಜರ್ನಲಿಸಂ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ, ಹಲವಾರು ಮೌಲಿಕ ಗ್ರಂಥಗಳನ್ನು ರಚಿಸಿದ ಅಸಾಧಾರಣ ವ್ಯಕ್ತಿ! ಶಾರದಾನ ಭಾಗ್ಯವೇ ದೊಡ್ಡದು. ಅಂಥ ತಂದೆ, ಇಂಥ ಅಣ್ಣ ಮತ್ತು ಇಂಥ ಪತಿ, ಇಂಥ ಮಾವ–ಇವರೆಲ್ಲ ಇವಳ ಬಾಳದಾರಿಯಲ್ಲಿ ದೀಪಸ್ತಂಭಗಳಂತೆ ಬೆಳಗಿದ್ದಾರೆ. ಯಾರಾದರೂ ಮತ್ಸರ ಪಡುವಂಥ ಸಾಂಗತ್ಯವು ಶಾರದಾನ ಭಾಗ್ಯದಲ್ಲಿದೆ. ತುಂಬ ಅಚ್ಚರಿಪಡುವ, ಅಭಿಮಾನಪಡುವ ಸಂಗತಿ ಇದು.

ಬಕ್ಕೆಮನೆಯಲ್ಲಿ ತಾಯಿ ಪಾರ್ವತಿಯವರ ಪಾಠಶಾಲೆಯಲ್ಲಿ ಕಲಿತದ್ದು ಅಪಾರ ಎಂದು ಶಾರದಾ ಕೃತಜ್ಞತೆಯಿಂದ ನೆನೆಯುತ್ತಾರೆ. ಆಕೆ ಕತೆಗಳ ಕಣಜ, ಹಾಡುಗಳ ರಾಶಿಯಂತಿದ್ದರು. ಕೇವಲ 2ನೇ ಇಯತ್ತೆ ಪಾಸಾದ ಆ ತಾಯಿ ಕಲಿಸಿದ ಪಾಠ, ಉಣ್ಣಿಸಿದ ಜ್ಞಾನದ ತುತ್ತು ಶಾರದಾ ಅವರಲ್ಲಿ ಅಸಾಧಾರಣ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದೆ. ಅಣ್ಣ ನಾಗೇಶ ಅತ್ಯಂತ ಜಾಣ ಹುಡುಗ. ಹೈಸ್ಕೂಲು, ಕಾಲೇಜ ನಂತರ ಖರಗಪುರದಲ್ಲಿ IIT ಪರೀಕ್ಷೆಗಳಲ್ಲೆಲ್ಲ ಪ್ರಥಮಶ್ರೇಣಿಯಲ್ಲಿ ಪಾಸಾದ ಅಪರೂಪದ ವ್ಯಕ್ತಿ. ದಿಲ್ಲಿಯಲ್ಲಿ ಕೆಲಸಮಾಡುತ್ತಿರುವಾಗ ತನ್ನ ಎಂಟು ಜನ ಸೋದರ, ಸೋದರಿಯರಿಗೆ ಬರೆದ ಪತ್ರಗಳು ಇವರಿಗೆ ಗೀತೋಪದೇಶದಂತಿರುತ್ತಿದ್ದವು. ಅಣ್ಣನ ಜ್ಞಾನದ ಛತ್ರಛಾಯೆಯಲ್ಲಿ ನಿರಾಯಾಸವಾಗಿ ಬೆಳೆದ ಶಾರದಾ ಅಣ್ಣನಂತೆ ಸಮಾಜ ಮುಖಿಯಾದಳು, ಪರಿಸರ ಪ್ರೇಮಿಯಾದಳು. ಅಣ್ಣನಿಂದ ಆ ದಿನಗಳಲ್ಲಿ ಪಡೆದ ಪತ್ರ ಮತ್ತು ಅವುಗಳಿಗೆ ಪ್ರತಿಯಾಗಿ ಅವಳ ಉತ್ತರ... ಈ ಪತ್ರೋತ್ತರದ ಕುಲುಮೆಯಲ್ಲಿ ಶಾರದಾ ಒಬ್ಬ ಉತ್ತಮ ಲೇಖಕಿಯಾಗಿ ರೂಪುಗೊಂಡಳು.


ಸಿರ್ಸಿಯಲ್ಲಿ ಹೈಸ್ಕೂಲು ಮತ್ತು ಪಿ.ಯು.ಸಿ. ನಂತರ ದಿಲ್ಲಿಯಲ್ಲಿ ಅಣ್ಣನ ಆಶ್ರಯದಲ್ಲಿದ್ದು ಬಿ.ಎಸ್‌ಸಿ. ಪಾಸಾಗಿ ಬೆಂಗಳೂರಿನ ಭಾರತೀಯ ವಿದ್ಯಾಭವನ ಶಿಕ್ಷಣ ಸಂಸ್ಥೆಯಲ್ಲಿ ಜರ್ನಲಿಸಂ ಕೋರ್ಸಿನ ಡಿಪ್ಲೊಮಾ ಪರೀಕ್ಷೆ ಪಾಸಾದ ನಂತರ ಉಷಾ ನವರತ್ನರಾಂ ಅವರ 'ಗೆಳತಿ' ಪತ್ರಿಕೆಯಲ್ಲಿ ಮತ್ತು ಶ್ರೀ ಬಿ.ವಿ. ವೈಕುಂಠರಾಜು ಅವರ 'ವಾರಪತ್ರಿಕೆ'ಯಲ್ಲಿ ಕೆಲ ಸಮಯ ವೈಜ್ಞಾನಿಕ ಲೇಖನಗಳನ್ನು ಬರೆದರು. ಇವು ಪತ್ರಿಕೋದ್ಯಮದಲ್ಲಿ ಇವರು ಏರಿದ ಮೊದಲಿನ ಮೆಟ್ಟಿಲುಗಳು.

ಶಾರದಾ ಅವರ ಬದುಕಿನಲ್ಲಿ ಒಂದು ಅವಿಸ್ಮರಣೀಯ ತಿರುವು ಬಂತು. ಅದು ಅವರ ಬದುಕಿನ ಮಾರ್ಗವನ್ನೇ ಬದಲಿಸಿತು. ಶಾರದಾ ತುಂಬ ಸಂತಸದಿಂದ ಅಂದಿನ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಹರಿಹರದ ಪೊಲಿಫೈಬರ್ ಕಂಪನಿಯ ಕಾರಖಾನೆಗಳು ಹೊರಹಾಕಿದ ಜಲಮಾಲಿನ್ಯವನ್ನು ತುಂಗಭದ್ರೆಯಲ್ಲಿ ಸತತವಾಗಿ ಹರಿ ಬಿಟ್ಟಿದ್ದರಿಂದ ನದಿನೀರೆಲ್ಲ ಕಲುಷಿತಗೊಂಡಾಗ ಅನೇಕ ಸಮಾಜಸೇವಕರು ಹೋರಾಟ ನಡೆಸಿದರು. ಈ ಹೋರಾಟದ ಚಿತ್ರಣವನ್ನು ವರದಿರೂಪದಲ್ಲಿ ಒಪ್ಪಿಸಲು ಶಾರದಾ ಅವರನ್ನು ಕೇಳಿದಾಗ ಅವರು ಸಂತೋಷದಿಂದ ಬೆಂಗಳೂರಿಂದ ರಾಣಿಬೆನ್ನೂರಿಗೆ ಬಂದು ವಾಸ್ತವ್ಯ ಹೂಡಿದರು. ಈ ಹೋರಾಟದಲ್ಲಿ ಸ್ವತಃ ಪಾಲ್ಗೊಂಡಿದ್ದಲ್ಲದೆ ಇಡೀ ಹೋರಾಟವನ್ನು ಕುರಿತ ಒಂದು ಸುದೀರ್ಘ ವರದಿಯನ್ನು ಬರೆದರು. ಇದೇ ಸಮಯ ಹೋರಾಟದಲ್ಲಿ ಪಾಲ್ಗೊಂಡ ಶ್ರೀ ಎಸ್.ಆರ್. ಹಿರೇಮಠರ ಸಹಾಯದಿಂದ ರಾಣಿಬೆನ್ನೂರಿನ ಸುತ್ತಲಿನ ಹಳ್ಳಿಗಳನ್ನು ಸಂದರ್ಶಿಸಿದರು. ಅದೊಂದು ಆಘಾತಕಾರಿ ಅನುಭವವಾಗಿತ್ತು. ಗ್ರಾಮೀಣರ ಬದುಕು ನರಕಸದೃಶವಾಗಿದ್ದುದನ್ನು ಕಂಡ ಶಾರದಾ ಕಂಗೆಟ್ಟು ಅಂದೇ ತಮ್ಮ ಬದುಕಿನ ಮಾರ್ಗವನ್ನು ನಿರ್ಧರಿಸಿದರಂತೆ. ತಾನು ಗ್ರಾಮಸೇವೆ ಮಾಡುತ್ತೇನೆ ಎಂದು ತಂದೆಯವರಲ್ಲಿ, ಅಣ್ಣನಲ್ಲಿ ವಿನಂತಿಸಿದರು. ಅಪರಿಚಿತ ಪರಿಸರದಲ್ಲಿ ತಮ್ಮ ಹರೆಯದ ಮಗಳನ್ನು ಕಳಿಸಲು ಹಿಂದೇಟು ಹಾಕಿದರೂ ಶಾರದಾ ಪಟ್ಟುಬಿಡದೆ ಮಡ್ಲೇರಿಯಲ್ಲಿ ಹಿರೇಮಠ ದಂಪತಿಗಳು ಪ್ರಾರಂಭಿಸಿದ IDS ಸಂಸ್ಥೆಯಲ್ಲಿ ಕೆಲಸ ಕೈಕೊಂಡಳು. ಡಾ. ಗೋಪಾಲ ದಾಬಡೆ ಅವರು ಇದೇ ಸಂಸ್ಥೆಯಲ್ಲಿ ಮೆಡಿಕಲ್ ಆಫೀಸರರಾಗಿ ಸೇವೆ ಸಲ್ಲಿಸುತ್ತಿದ್ದರು. ಸಮಾನ ಮನಸ್ಕರಾದ ಇಬ್ಬರೂ ಭೇಟಿಯಾಗಿ ಒಬ್ಬರನ್ನೊಬ್ಬರು ಒಪ್ಪಿಕೊಂಡರು. 1985ರಲ್ಲಿ ಮದುವೆಯೂ ಆಯ್ತು. ಬಳಿಕ ಗೋಪಾಲ ರಾಯಚೂರಲ್ಲಿ INGRID ಸಂಸ್ಥೆಯ Rural Development ವಿಭಾಗದಲ್ಲಿ health officer ಆಗಿ ಸೇರಿಕೊಂಡು ಅಲ್ಲಿಯ ಗ್ರಾಮೀಣ ಪ್ರದೇಶಗಳಲ್ಲಿಯ ಜನರ ಸಂಕಷ್ಟಗಳಿಗೆ ಕಿವಿಗೊಟ್ಟರು. ಪರಿಹಾರಕ್ಕಾಗಿ ಆ ಸಂಸ್ಥೆಯೊಂದಿಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ 'ಅರಿವು' ಎಂಬ ಹೆಸರಿನ ಮಾಸಪತ್ರಿಕೆ ಹುಟ್ಟುಹಾಕಿದರು.

ವಿವಾಹ ಪೂರ್ವದಲ್ಲಿ ಶಾರದಾ ಹುಣಸೂರಲ್ಲಿಯ DEED ಸಂಸ್ಥೆಯವರು ಕೇಳಿಕೊಂಡಂತೆ ಜೇನುಕುರುಬ ಎಂಬ ಗಿರಿಜನರ ಜೀವನಪದ್ಧತಿ, ನಾಗರೀಕ ಸಮಾಜದಲ್ಲಿ ಅವರು ಸೇರಿಕೊಳ್ಳುವ ಸಾಧ್ಯತೆ, ಹೋರಾಟಗಳನ್ನು ದಾಖಲಿಸುವ ಲೇಖನಗಳನ್ನು ರಚಿಸಿದ್ದರು.

ಮುಂದೆ ಗ್ರಾಮಾಭಿವೃದ್ಧಿ ಕೆಲಸಗಳಿಗಾಗಿ ಕಿತ್ತೂರಲ್ಲಿ ನೆಲೆಸಿ 'ಗ್ರಾಮಜಾಗೃತಿ' ಎಂಬ ಸಂಸ್ಥೆಯನ್ನು ಕಟ್ಟಿದರು. ಬೈಲಹೊಂಗಲ ತಾಲೂಕಿನ ಕುಲವಳ್ಳಿ ಗುಡ್ಡದಲ್ಲಿ ಬೆಳೆದ ಅಸಂಖ್ಯ ಹುಣಸೇಮರಗಳಲ್ಲಿಯ ಹುಣಸೆಯನ್ನು ಬಿಡಿಸಿ ಯಾವುದೋ ಧನಿಕರು ಲಾಭ ಪಡೆಯುತ್ತಿದ್ದರು. ಇದನ್ನು ಗಮನಿಸಿದ ಶಾರದಾ ಗ್ರಾಮೀಣರಲ್ಲಿ "ಈ ಹಳ್ಳಿಯ ನೆಲದಲ್ಲಿ ಉತ್ಪನ್ನವಾದ ಯಾವುದೇ ಸಂಪತ್ತಿಗೆ ನೀವೇ ಫಲಾನುಭವಿಗಳು. ನೋಡಿ, ನಿಮ್ಮ ಪ್ರದೇಶದಲ್ಲಿ ಹುಣಸೇಮರಗಳ ಸಮೃದ್ಧಿ ಇದೆ. ಈ ಮರಗಳಲ್ಲಿಯ ಹುಣಸೇಹಣ್ಣಿನ ಉತ್ಪಾದನೆ ನಿಮಗೆ ಸೇರಿದ್ದು, ಆದರೆ ಯಾರೊ ಹೊರಗಿನವರು ಲೂಟಿ ಮಾಡುತ್ತಿದ್ದಾರೆ. ಆ ಸಂಪತ್ತು ನಿಮಗೆ ಸೇರಬೇಕು." ಎಂಬ ಅರಿವಿನ ಬೀಜ ಬಿತ್ತಿದರು. ಜನ ಎಚ್ಚೆತ್ತರು; ಲೋಭಿ ಕಂಟ್ರಾಕ್ಟರುಗಳನ್ನು ತಡೆದರು. ಗ್ರಾಮಪಂಚಾಯತಿಯ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಹಳ್ಳಿಗರು ಯಶಸ್ಸು ಕಂಡರು. ಇದು ಶಾರದಾ ಹಳ್ಳಿಗರಿಗೆ ಕೊಟ್ಟ ಜಾಗೃತಿಯ ಪಾಠದ ಫಲ.

ಕುಲವಳ್ಳಿ, ಗಲಗಿನಮಡ, ಗಂಗ್ಯಾನಟ್ಟಿ, ನಿಂಗಾಪುರ, ಸಾಗರಗಳಲ್ಲಿಯ ಜನರಿಗೆ ರಾತ್ರಿಯ ಶಾಲೆ ಪ್ರಾರಂಭವಾಯ್ತು. ಆ ಮೂಲಕ ಸಾಗುವಳಿ ಮಾಡುತ್ತಿರುವ ಸಾವಿರಾರು ಎಕರೆ ಭೂಮಿಯ ಮಾಲಿಕರು ಇನಾಮದಾರ ಎಂಬ ಮನೆತನದವರು. ಇವರು ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿಡಿ ಹೊತ್ತಿಸಿದ ಕಿತ್ತೂರು ಚೆನ್ನಮ್ಮನ ಬಲಗೈಬಂಟ ಸಂಗೊಳ್ಳಿರಾಯಣ್ಣನನ್ನು ಮೋಸದಿಂದ ಬ್ರಿಟಿಷ್ ಸರಕಾರಕ್ಕೆ ಹಿಡಿದು ಕೊಟ್ಟಾಗ, ಅವರಿಗೆ 12000 ಎಕರೆಯಷ್ಟು ದಟ್ಟವಾಗಿ ಬೆಳೆದ ಅರಣ್ಯ ಭೂಮಿಯನ್ನು ಆ ಸರ್ಕಾರ ಇನಾಮಾಗಿ ಕೊಟ್ಟಿತ್ತು. ಕಾಲಾಂತರದಲ್ಲಿ ಅರಣ್ಯ ಹೋಗಿ ಅಲ್ಲಿ ಒಂಬತ್ತು ಹಳ್ಳಿಗಳು ರೂಪುಗೊಂಡವು. ಆದರೆ ಸರಕಾರೀ ದಾಖಲೆಗಳಲ್ಲಿ ಇದು ಇನ್ನೂ ಕಾಡೇ. ಶಾಲೆಗಳಿಲ್ಲ, ರಸ್ತೆಗಳಿಲ್ಲ, ನೀರಿನ ವ್ಯವಸ್ಥೆ ಇಲ್ಲ. ಇಂದಿಗೂ ಜನರ ಹೆಸರಿನಲ್ಲಿ ಭೂಮಿ ಇಲ್ಲ. ಸವಾಲಾಗಿ ತೋರುವ ಈ ಪ್ರದೇಶವು ಶಾರದಾ, ಗೋಪಾಲ ದಂಪತಿಗಳನ್ನು ಆಕರ್ಷಿಸಿತು. ಅಲ್ಲಿ ಶಾಲೆ ತೆಗೆದರು. ಆರೋಗ್ಯ ಕುರಿತು ಪಾಠ ಹೇಳಿದರು ಮತ್ತು ಉಳುವವನೇ ಭೂ–ಒಡೆಯ ಎಂಬ ಅರಿವನ್ನು ಮೂಡಿಸಿದರು. ಇನಾಮದಾರಿ ಕುಟುಂಬ ರೈತರನ್ನು ವರ್ಷಾನುಗಟ್ಟಲೆ ದುಡಿಸಿಕೊಂಡು ಬಹಳ ಸ್ವಲ್ಪ ಕಾಳನ್ನು ಅವರ ಉಪಜೀವಿಕೆಗಾಗಿ ಕೊಡುತ್ತಿದ್ದ ರೀತಿ ಅತ್ಯಂತ ಅಮಾನವೀಯವಾಗಿತ್ತು. ಆಗ ದಾಬಡೆ ದಂಪತಿಗಳು ಸರಕಾರದ ಹಲವಾರು ಕಚೇರಿಗಳ ಬಾಗಿಲು ತಟ್ಟಿದರು.



ಈ ಹೋರಾಟದಲ್ಲಿ ಭಯಗೊಂಡ ಭೂಮಾಲಿಕರು ಡಾ. ಗೋಪಾಲರನ್ನು ಬಂಧಿಸಿ ರಹಸ್ಯವಾಗಿಟ್ಟಿದ್ದರು. ಮತ್ತು ಊರುಬಿಟ್ಟ ತಕ್ಷಣ ಹೊರಡ ಬೇಕು, ಎರಡುಸಾವಿರ ರೂಪಾಯಿ ದಂಡ ಕಟ್ಟಬೇಕೆಂದು ಪಟ್ಟು ಹಿಡಿದರು. ದಂಡದ ರೂಪದಲ್ಲಿಯ ಹಣವನ್ನು ಅನ್ಯಾಯವಾಗಿ ಇವರಿಂದ ವಸೂಲಿ ಮಾಡಿದರು. ದಾಬಡೆ ದಂಪತಿಗಳು ಧೈರ್ಯಗೆಡಲಿಲ್ಲ. ಹೋರಾಟ ಮುಂದುವರಿದು ಉಳುವ ರೈತ ತನ್ನ ದುಡಿಮೆಯ ಫಲಾನುಭವಿ ಆದ ಸಿಂಗಾಪುರ ಎಂಬ ಗ್ರಾಮವನ್ನು ಕಟ್ಟಿದವರೇ ಶಾರದಾ ಮತ್ತು ಗೋಪಾಲ್. ಈಗ ಈ ಪ್ರದೇಶದಲ್ಲಿ ಎರಡು ಗ್ರಾಮಪಂಚಾಯಿತಿ ಇವೆ, ಶಾಲೆ ಇವೆ. ದಾರಿಗಳು ನಿರ್ಮಾಣಗೊಂಡಿವೆ. ಈ ಪ್ರದೇಶದಿಂದ ಜಿಲ್ಲಾಪಂಚಾಯತಿಗೆ ಜನ ಆರಿಸಿ ಹೋಗಿದ್ದಾರೆ. ಜಿಲ್ಲೆಯ ಮುಖ್ಯರಸ್ತೆ ಅಂದರೆ, ಅಳ್ನಾವರ ಕಿತ್ತೂರುಗಳನ್ನು ಜೋಡಿಸುವ ರಸ್ತೆ ನಿರ್ಮಾಣಗೊಂಡಿದೆ. ಇದೆಲ್ಲ ಕನಸನ್ನು ನನಸಾಗಿಸಿದ್ದು ಶಾರದಾ ಹಾಗೂ ಗೋಪಾಲರ ಅವಿಚ್ಛಿನ್ನ ಪ್ರಯತ್ನ ಮತ್ತು ಮಾನವೀಯತೆ.

ಗೋಪಾಲ ದಾಬಡೆಯವರ ತಂದೆ ನರಸಿಂಹ ದಾಬಡೆ ತಮ್ಮ ಮುಪ್ಪಿನ ದಿನಗಳಲ್ಲಿ ಮಗ, ಸೊಸೆಯನ್ನು ಒತ್ತಾಯಪೂರ್ವಕ ಧಾರವಾಡಕ್ಕೆ ಕರೆತಂದರು. ಈಗಲೂ ಧಾರವಾಡದ ತೇಜಸ್ವಿ ನಗರದಲ್ಲಿ ಇದ್ದುಕೊಂಡೇ "ಜಾಗೃತಿ" ಸಂಸ್ಥೆಯನ್ನು ಮನೆಯಲ್ಲೇ ಕಟ್ಟಿಕೊಂಡು ಕಿತ್ತೂರಿನ ಆಸುಪಾಸಿನ ಗ್ರಾಮೀಣ ಭಾಗಗಳಿಗೆ, ಖಾನಾಪುರದ ಸುತ್ತಲಿನ ಹಳ್ಳಿಗಳಿಗೆ ಪ್ರಯಾಣ ಮಾಡಿ ಬಾಲ್ಯವಿವಾಹದ ವಿರುದ್ಧ ಹೋರಾಟ, ಬಡಕುಟುಂಬಗಳಲ್ಲಿ ಹೆಣ್ಣುಮಕ್ಕಳ ಮಾರಾಟ, ವರದಕ್ಷಿಣೆ ವಿರುದ್ಧ ಜನಜಾಗೃತಿ–ಇಂಥ ಹತ್ತು ಹಲವು ಸಾಮಾಜಿಕ ಅನಿಷ್ಟಗಳನ್ನು ಕುರಿತು ಅರಿವಿನ ಬೀಜಗಳನ್ನು ಬಿತ್ತುತ್ತಲೇ ಇದ್ದಾರೆ.

ಶಾರದನಿಗೆ ನಾನು ಪ್ರಶ್ನಿಸಿದೆ "ನೀವು ಆಯ್ಕೆ ಮಾಡಿಕೊಂಡಿರುವ ಈ ಮಾರ್ಗ ದುರ್ಗಮ, ಭಯಂಕರ, ಅಸುರಕ್ಷಿತವಾಗಿದ್ದರೂ ನೀವು ದಿಟ್ಟಹೆಜ್ಜೆಗಳನ್ನು ಮೂಡಿಸುತ್ತಲೇ ನಡೆದಿದ್ದೀರಿ... ಇದರಲ್ಲಿ ಎಂಥ ಸುಖವದೆ?" ಶಾರದಾನ ನಿರಾಳವಾದ ಉತ್ತರ ಹೀಗಿತ್ತು: "ನಮಗೆ ನಮ್ಮ ಈ ಕೆಲಸ ತುಂಬ ಖುಷಿಕೊಟ್ಟಿದೆ. ಗ್ರಾಮೀಣರ ಪ್ರೀತಿ ವಿಶ್ವಾಸದ ಕಡಲಲ್ಲಿ ನಾವು ಸದಾ ಈಸುತ್ತಲೇ ಇರುತ್ತೇವೆ." ಪಕ್ಕದಲ್ಲಿ ಕುಳಿತ ಡಾ. ಗೋಪಾಲ ಹೇಳಿದರು. " 'ಸುಖ'ವಂತೂ ಹತ್ತು ಹಲವು ರೀತಿಯಲ್ಲಿ ಬಂದಿದೆ. ಗ್ರಾಮೀಣರಿಗೆ ನಾವು ಕೊಡುವದಕ್ಕಿಂತ ಅವರು ಕೊಟ್ಟ ಬಾಳಪಾಠ ಬಲು ದೊಡ್ಡದು... ಇದೇ ನಮ್ಮ ಪ್ರಯತ್ನಗಳಿಗೆ ಸಿಕ್ಕ ಸತ್ಫಲ" ಎಂದರು. ಅವರಿಬ್ಬರ ಮುಖದಲ್ಲಿ ಸಾರ್ಥಕತೆಯ, ಕೃತಜ್ಞತೆಯ ಭಾವ ಅರಳಿಕೊಂಡಿತ್ತು.


ಇಂಥ ಹೋರಾಟದ ಬದುಕಿನಲ್ಲೂ ಶಾರದಾ ಬರೆದ ಪುಸ್ತಕಗಳು ಗಮನಾರ್ಹ :

1. **ಅಭ್ಯುದಯದ ಹಾದಿಯಲ್ಲಿ** 2. **ಔಷಧ ಮತ್ತು ನಾವು** (ಡಾ. ಗೋಪಾಲ ಮತ್ತು ಶಾರದಾ ಅವರ ಕೃತಿ) 3. **ದುಶ್ಚಟ ಇಲ್ಲದೆಡೆ**–ಮೂರನೇ ಆವೃತ್ತಿ ಕಂಡ ಜನಪ್ರಿಯ ಕೃತಿ. 4. **'Ecology and Equity'** ಮೂಲಕೃತಿ ಮಾಧವ ಗಾಡಗೀಳರದು. ಇವರ ಅನುವಾದ 'ಪರಿಸರ ನ್ಯಾಯದ ತಕ್ಕಡಿಯಲ್ಲಿ' ಈ ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿಯಿಂದ ಪುರಸ್ಕಾರ ಬಂದಿದೆ. 5. **ಜಂಟಿ ಅರಣ್ಯ ಯೋಜನೆ** (ಅನುವಾದಿತ ಕೃತಿ) 6. **ಯಾರಿಗೆ ಲಾಭ ಯಾರಿಗೆ ನಷ್ಟ** (ಅನುವಾದಿತ ಕೃತಿ) 7. **ನಗರದಲ್ಲಿ ಕಸದ ನಿರ್ವಹಣೆ** 8. **ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿ** 9. **ರಕ್ತಹೀನತೆಯ ಕಾರಣಗಳು** 10. **ಹೆಪೆಟ್ಯಾಟಿಸ್–ಬಿ** 11. **ಆಕಾಶದೆತ್ತರಕ್ಕೆ ಔಷಧದ ಬೆಲೆ**

ಇವರಿಬ್ಬರ ವಿನಮ್ರ ಸೇವೆಯನ್ನು ಗುರುತಿಸಿದ ಧಾರವಾಡದ ಪ್ರತಿಷ್ಠಿತ ಗಾಂಧಿ ಶಾಂತಿ ಪ್ರತಿಷ್ಠಾನವು 2011ರಲ್ಲಿ "ಬಾ–ಬಾಪೂ ಪ್ರಶಸ್ತಿ" ನೀಡಿ ಗೌರವಿಸಿತು. ತಮ್ಮ ಸಾಧನೆಯ ಬಗ್ಗೆ ಚಕಾರ ಶಬ್ದ ಮಾತನಾಡದೆ ತೆರೆಮರೆಯಲ್ಲಿದ್ದು ಯಾವುದೇ ಪ್ರಸಿದ್ಧಿ, ಪ್ರಶಸ್ತಿಗಳತ್ತ ಮುಖತಿರುಗಿಸದೆ ಕಾಡಲ್ಲಿ ನರ್ತಿಸುವ ನವಿಲಿನಂತೆ ಈ ದಂಪತಿಗಳು ಉತ್ತರ ಕರ್ನಾಟಕದ ಈ ಭಾಗದಲ್ಲಿ ನಿರಂತರವಾಗಿ ಮರೆಯಲ್ಲಿ ನಡೆಸಿದ ಮೌನ ಕ್ರಾಂತಿಯ ಕೆಲಸ ಸಣ್ಣದಲ್ಲ! ಹಲವು ವೇದಿಕೆ ಏರಿ ಲಕ್ಷಗಟ್ಟಲೆ ಭಾಷಣಗಳನ್ನು ಕುಟ್ಟಿ ಹಣ, ಅಧಿಕಾರ, ಪ್ರಸಿದ್ಧಿ, ಪ್ರಶಸ್ತಿಗಳನ್ನು ಪಡೆಯುತ್ತ ಬೀಗುವ ಜನರ ಜಗತ್ತಿನಿಂದ ಇವರು ದೂರ ಬಹುದೂರ! ಅಸಹಾಯಕ ಹಳ್ಳಿಗರ ಕಣ್ಣೀರೊರೆಸುವಂಥ ಶಾರದಾ–ಗೋಪಾಲರಂಥ ಜನರು ನಮಗೀಗ ಬೇಕಾಗಿದ್ದಾರೆ ಎಂದು ನಾನು ಮನಸ್ಸಿನಲ್ಲಿ ಸದಾ ಅಂದುಕೊಳ್ಳುತ್ತಾ ಈ ದಂಪತಿಗಳನ್ನು ಹೃದಯಪೂರ್ವಕ ಅಭಿನಂದಿಸುತ್ತಿರುತ್ತೇನೆ. ●

ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಪುರುಷರು ಎದುರಿಸುವುದಿಲ್ಲ. ಮಹಿಳೆಯರು ಕುಟುಂಬ ಜವಾಬ್ದಾರಿ ಹಾಗೂ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಇವುಗಳನ್ನು ಸದಾ ನೆನಪಿಸಿಕೊಳ್ಳಲೇಬೇಕಾಗುತ್ತದೆ. ಮನೆಗೆ ಅತಿಥಿಗಳು ಬಂದಾಗ ಆತಿಥ್ಯವನ್ನು ನೀಡಲೇಬೇಕಾಗುತ್ತದೆ. ಆದರೆ ಪುರುಷ ಲೇಖಕನಾದರೆ, ಆತ ಬರೆಯುತ್ತಿರುತ್ತಾನೆ. ಆತನಿಗೆ ತೊಂದರೆ ಕೊಡಬೇಡಿ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಆದರೆ ಮಹಿಳೆಯರ ಬಗ್ಗೆ ಈ ಧೋರಣೆ ಇರುವುದಿಲ್ಲ. ಅತಿಥಿಗಳನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಮನೆಗೆ ಬರುವಂತೆ ಹೇಳಲು ಸಾಧ್ಯವಿಲ್ಲ. ಸದ್ಯ ಅವರ ಮನೆಗೆ ಹೋಗುವುದೇ ಬೇಡ ಎಂದು ಭಾವಿಸುತ್ತಾರೆ. ಅದೇ ರೀತಿಯಲ್ಲಿ ಇಂದು ನಾನು ಅಡಿಗೆ ಮಾಡುವುದಿಲ್ಲ, ದಿನವೆಲ್ಲಾ ಬರೆಯುತ್ತೇನೆ ಎಂದು ಹೇಳಲೂ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಬರೆಯಲೂ ಸಾಧ್ಯವಾಗುವುದಿಲ್ಲ. ನನ್ನ ಬರವಣಿಗೆಗೆ ಸಂಬಂಧಪಟ್ಟ ಸಭೆ, ಸಮಾರಂಭಗಳಿಗೆ ಹೋಗಬೇಕೆಂದರೂ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಿ ಹೋಗಬೇಕಾಗುತ್ತದೆ. ಹಾಗಾಗಿ ನಾನು ಹೊರಗೆ ಹೋಗುವುದು ತುಂಬಾ ಕಡಿಮೆ. ಕುಟುಂಬಕ್ಕೆ ಸಂಬಂಧಪಟ್ಟ ವಿವಾಹ, ಸಾವು ಮುಂತಾದವುಗಳಿಗೆ ಮಾತ್ರ ಹೋಗುತ್ತೇನೆ. ಹಾಗಾಗಿ ನನಗಾಗಿ ಸಿಗುವ ಸಮಯ ತುಂಬಾ ಕಡಿಮೆ. ನನಗಾಗಿ ಸಿಗುವ ಕಡಿಮೆ ಸಮಯವನ್ನು ನಾನು ಬರವಣಿಗೆಗಾಗಿ ಮೀಸಲಿಡುತ್ತೇನೆ. ಹೀಗಾಗಿ ಇವು ನನಗೆ ನಾನೇ ಹಾಕಿಕೊಂಡ ಮಿತಿಗಳು.

ಬಿ.ಎಮ್. ಜುಹಾರಾ
ಮಲೆಯಾಳಂ ಲೇಖಕಿ
(ಸಂದರ್ಶನವೊಂದರಲ್ಲಿ, 'ಜಸ್ಟ್ ಬಿಟ್ವೀನ್ ಅಜ್' ಪುಸ್ತಕದಿಂದ)



ಬಿದಿರಿನ ಬುಟ್ಟಿ

■ ಊರ್ಮಿಳಾ ಪವಾರ್

ಅನು: ಮಂಗ್ಳೂರ ವಿಜಯ



(ಹಿಂದಿನ ಸಂಚಿಕೆಯಿಂದ)

ಬಸ್ ಬೇಗ ಸಿಗಲಿಲ್ಲ. ಸಾಕಷ್ಟು ಅಲೆದಾಡಬೇಕಾಯಿತು. ಕೆಲವು ಬಸ್‌ಗಳಲ್ಲಿ ಸೀಟು ಸಿಗಲಿಲ್ಲ. ಕೊನೆಗೆ ಸಮಯವಾಗುತ್ತದೆಂದು ತೀರ್ಮಾನಿಸಿ, ಬಂದ ಬಸ್ ಏರಿದೆವು. ಸೀಟು ಹಿಂದಿನ ಸಾಲಿನಲ್ಲಿ ಸಿಕ್ಕಿತು. ರಸ್ತೆ ಚೆನ್ನಾಗಿಲ್ಲದ್ದರಿಂದ ಬಸ್ ತುಂಬಾ ಕುಲುಕುತ್ತಿತ್ತು. ಗಂಡನ ಸಿಟ್ಟು ಇಳಿದಂತಿರಲಿಲ್ಲ. ಕಂಡಕ್ಟರ್ ಬಂದಾಗ ಟಿಕೆಟ್‌ಗಾಗಿ ಎರಡು ಮಾತಾಡಿದವ, ನನ್ನೊಂದಿಗೆ ಒಂದೂ ಮಾತಾಡಲಿಲ್ಲ. ನಾನೇ ಮಾತಾಡಿಸೋಣ ಎಂದರೆ ಹೊರಗೆ ದೃಷ್ಟಿ ನೆಟ್ಟು ಬಿಗುಮಾನದಿಂದ ಕುಳಿತಿದ್ದ. ಅಮ್ಮ ಕೊಟ್ಟಿದ್ದ ಚೀಲವನ್ನು ಕಾಲ ಬಳಿಯಿಟ್ಟು, ಬಸ್ ಕುಲುಕಿದಾಗ ಬೇಕಂತಲೇ ಹರಿಶ್ಚಂದ್ರನಿಗೆ ಅಂಟಿ ಕೂತೆ; ಕೋಪ ಕಡಿಮೆ ಮಾಡಲು ಇದು ಸಹಕಾರಿಯಾದೀತೇನೊ ಎಂದು ಭಾವಿಸಿದೆ. ಆದರೆ ಮೊದಲು ಪ್ರಯೋಜನವಾಗಲಿಲ್ಲ. ನಂತರ ಅವನೂ ನನ್ನನ್ನು ಬಿಗಿಯಾಗಿ ಹಿಡಿದುಕೊಂಡಾಗ ನಾನು ಚೀಲದ ಚಿಂತೆಯನ್ನೇ ಬಿಟ್ಟೆ.

ಕಣಕವಲಿ ತಲುಪಿದಾಗ ಆಗಲೇ ಎಂಟೂವರೆ ಆಗಿತ್ತು. ಬಸ್‌ನಲ್ಲಿ ಬಿಗಿ ಹಿಡಿತವನ್ನು ಅವಲಂಬಿಸಿದ್ದು ಪರಿಣಾಮ ಬೀರಿದಂತಿತ್ತು. ಬಸ್ ಇಳಿಯುತ್ತಲೇ "ಮನೆತುಂಬಾ ಜನ; ಇಲ್ಲೇ ಹೋಟೆಲ್‌ನಲ್ಲಿ ಊಟ ಮಾಡೋಣ; ನಂತರ ಯಾವುದಾದರೊಂದು ಲಾಡ್ಜ್‌ನಲ್ಲಿ ಹನಿಮೂನ್ ಆಚರಿಸೋಣ; ನನ್ನ ಐಡಿಯಾಗೆ ಏನ್ ಹೇಳ್ತೀ?" ಎಂದು ಕೇಳುತ್ತಾ ಕೈಯನ್ನು ಮೃದುವಾಗಿ ಅಮುಕಿದ. ಮೌನದ ಮೂಲಕವೇ ನಾನು ನನ್ನ ಸಹಮತವನ್ನು ತಿಳಿಸಿದೆ.

"ಈ ಮೀನುಗಳನ್ನೇನು ಮಾಡೋದು?" ನನ್ನ ಪ್ರಶ್ನೆ ಕೇಳದವನಂತೆ ಹರಿಶ್ಚಂದ್ರ ಮುಂದೆ ನಡೆದ. ಅದೇ ಪ್ರಶ್ನೆಯನ್ನು ಮತ್ತೆ ಕೇಳಿದರೆ ಈ ಐಡಿಯಾ ಎಲ್ಲಿ ಬದಲಾಗಿಬಿಡುತ್ತದೋ ಎಂದು ಅಳುಕಿ ಸುಮ್ಮನಾದೆ.

ಬಸ್ ನಿಲ್ದಾಣದ ಕ್ಯಾಂಟೀನ್‌ನಲ್ಲಿ ತಿಂಡಿ ತಿಂದೆವು. ನನಗಂತೂ ತಿಂಡಿ-ತಿನಿಸು-ಊಟ ಯಾವುದೂ ಬೇಡವಾಗಿತ್ತು. ಗಂಡನ ಐಡಿಯಾದಿಂದ ನನಗೆ ರೋಮಾಂಚನವಾಗಿತ್ತು. ಆ ಥ್ರಿಲ್‌ನಲ್ಲೇ ಹರಿಶ್ಚಂದ್ರನೂ ತೇಲಾಡುತ್ತಿದ್ದುದನ್ನು ಗಮನಿಸಿದೆ.

ಊಟ ಮುಗಿಯುತ್ತಲೇ ಲಾಡ್ಜ್ ಕಡೆ ತಿರುಗಿದೆವು. ಕಣಕವಲಿ ದೊಡ್ಡ ಊರಲ್ಲ. ಅಲ್ಲಿ ಇದ್ದುದೇ ಎರಡೋ-ಮೂರೋ ಲಾಡ್ಜ್‌ಗಳು; ಆಧುನಿಕ ಸೌಲಭ್ಯಗಳಾವುವೂ ಇಲ್ಲದವು; ಅಂಥದೇ ಒಂದರಲ್ಲಿ ಸಿಂಗಲ್ ರೂಮಿದೆ ಅಂದರು; ಅದನ್ನೇ ತೆಗೆದುಕೊಳ್ಳುವಾಗ ಲಾಡ್ಜ್ ಸಿಬ್ಬಂದಿ ನನ್ನನ್ನೇ ನೋಡುತ್ತಿರುವುದನ್ನು ಗಮನಿಸಿದೆ.

ರೂಂ ಬೀಗ ಪಡೆದು ಮೊದಲ ಮಹಡಿಗೆ ಹೋಗಿ ಬೀಗ ತೆಗೆದು ಒಳ ಹೋಗುತ್ತಲೇ, ಹರಿಶ್ಚಂದ್ರ ಮೊದಲು ಬಾಗಿಲು ಭದ್ರಪಡಿಸಿದ. ನಂತರ ತನ್ನ ಕೈಯಲ್ಲಿದ್ದ ಚೀಲವನ್ನು ಮಂಚದ ಕೆಳಗೆ ಎಸೆದ; ನನ್ನ ಕೈಯಲ್ಲಿನ ಚಿಕ್ಕ ಚೀಲವನ್ನೂ ಕಿತ್ತುಕೊಂಡು ಮುರುಕು ಟೇಬಲ್ ಮೇಲಿಟ್ಟ.

ನಾನು ಆ ಮಂದ ಬೆಳಕಲ್ಲಿ ರೂಂನಲ್ಲಿ ಎಲ್ಲಾ ಕಡೆ ಕಣ್ಣಾಡಿಸುತ್ತಿದ್ದೆ. ಹಳೇ ಕಟ್ಟಡ; ಸಿಮೆಂಟ್ ಉದುರುತ್ತಿದ್ದ ಗೋಡೆ; ತಂಬಾಕು, ಪಾನ್ ತಿಂದು ಉಗುಳಿದ ಗುರುತು ಮೂಲೆಗಳಲ್ಲಿ, ಕಮಟು ವಾಸನೆಯ ಹಾಸಿಗೆ; ಕಲ್ಲಿನಂಥ ತಲೆದಿಂಬು, ಮುರಿಯುವುದೇನೊ ಎಂಬ ಭಯ ಮೂಡಿಸುವ ಮಂಚ.

ಅಷ್ಟರಲ್ಲಿ ಗಂಡ ದಿಢೀರನೆ ಬಾಚಿ ತಬ್ಬಿಕೊಂಡ. ಈ ಅನಿರೀಕ್ಷಿತ ಆಕ್ರಮಣಕ್ಕೆ ಅರೆಕ್ಷಣ ಬೆದರಿದೆನಾದರೂ, ಆ ಹಿಡಿತ ಹಿತವೆನಿಸಿತು. ಲೈಟ್ ಆರಿಸಲು ಹೇಳಬೇಕೆನ್ನುವಷ್ಟರಲ್ಲಿ ನಾಲ್ಕು ತುಟಿಗಳೂ ಒಂದಾಗಿದ್ದವು.

ಅದು, ಸಿಂಗಲ್ ಕಾಟ್. ಪಕ್ಕ ಪಕ್ಕ ಮಲಗುವುದೇ ಸಾಹಸವಾಗಿತ್ತು. ರಸಿಕ ಗಂಡನ ಅಭಿರುಚಿ ಅನುಭವಕ್ಕೆ ಬರುತ್ತಿತ್ತು. ಪ್ರೀತಿಸಿ ಮದುವೆಯಾದ ಗಂಡ ಪಕ್ಕದಲ್ಲಿ (ಎನ್ನುವುದಕ್ಕಿಂತ ಮೇಲೆ ಎಂದರೂ ಸರಿಯೆ) ಇದ್ದಾಗಲೂ ಏನೋ ಒಂಥರದ ಸಂಕೋಚ, ನಾಚಿಕೆ, ಭಯ. ರಾತ್ರಿ ಕಳೆದದ್ದೂ ತಿಳಿಯಲಿಲ್ಲ. ಬೆಳಗಾಗಿದ್ದೂ ಗೊತ್ತಾಗಲಿಲ್ಲ.

ಎಂಟು ಗಂಟೆ ಹೊತ್ತಿಗೆ ಮುಖ ತೊಳೆದ ಶಾಸ್ತ್ರ ಮಾಡಿ ರೂಂ ಖಾಲಿ ಮಾಡಿದೆವು. ಮನೆ ದಾರಿ ಹಿಡಿದಾಗ, ಮೀನುಗಳಿದ್ದ ಚೀಲವನ್ನು ಎತ್ತಿ ಹರಿಶ್ಚಂದ್ರ ದೊಡ್ಡ ಚರಂಡಿಯೊಂದರಲ್ಲಿ ಬಿಸಾಡಿದ.

ನಾವಿಬ್ಬರೂ ಬಂದುದನ್ನು ಕಂಡು ಅತ್ತೆ ಸಂತೋಷ ಪಟ್ಟರು. ನನ್ನ ಅಕ್ಕಂದಿರೂ ಅಷ್ಟೆ ಸ್ನಾನ ಮಾಡುವ ಹೊತ್ತಿಗೆ ಅಡುಗೆ ಸಿದ್ಧವಾಗಿತ್ತು. ಊಟ ಮುಗಿಸಿ ಪಕ್ಕದ ಕೋಣೆ ಹಿಡಿದು ಮಲಗಿದೆ. ಹಿಂದೆಯೇ ಗಂಡ ಒಳಬಂದು ಬಾಗಿಲು ಮುಚ್ಚಿದ. 'ರಾತ್ರಿಯೇ ನಿದ್ದೆ ಆಗಿಲ್ಲ; ಈಗಂತೂ ಹತ್ತಿರ ಬರಬೇಡಿ' ಎಂದರೂ ಕೇಳದೇ ಹರಿಶ್ಚಂದ್ರ ಹತ್ತಿರ ಬಂದು ತಬ್ಬಿಕೊಂಡ. ನನ್ನ ಮಾತುಗಳಿಗೆ ವಿರುದ್ಧವಾದ ಭಾವನೆ ನನ್ನ ಮನಸ್ಸಿನಲ್ಲಿತ್ತು.

ಬೆಳಿಗ್ಗೆ ಲಾಡ್ಜ್‌ನಿಂದ ಬರುವಾಗ ಹರಿಶ್ಚಂದ್ರ 'ರಾತ್ರಿ ನೀನೇನೂ ಬಿಸಿ ಅನಿಸಲೇ ಇಲ್ಲ ಕಣೆ' ಎಂದ. ಮದುವೆಯಾದ ವಾರದಲ್ಲೇ ಗಂಡ ನನಗೆ ನೀಡಿದ ಸರ್ಟಿಫಿಕೇಟ್ ಇದು. ಗಂಡನ ಮುಖ ನೋಡಿದೆ. ಅಲ್ಲಿ ಕೋಪವಿರಲಿಲ್ಲ; ಬದಲಾಗಿ ಹುಸಿನಗು ಇತ್ತು. ಆ ಮಾತುಗಳು ನನ್ನನ್ನು ಚುಡಾಯಿಸಲಿಕ್ಕಾಗಿ ಆಡಿದವು ಎಂಬುದು ನನಗೆ ಅರ್ಥವಾಗಿತ್ತು.

ನಾನು ರಾತ್ರಿ ಹರಿಶ್ಚಂದ್ರನಿಗೆ ತಣ್ಣಗೆ ಅನಿಸಿದ್ದು ಅವನಿಗೆ ಪ್ರಿಯವಾಗಿರುವಂತಿತ್ತು. ನಿಜವೆಂದರೆ ನಾನು ಹಾಗೇನೂ ತಣ್ಣನೆಯವಳಲ್ಲ. ಆದರೆ, ಬಿಸಿಯೆನಿಸುವ ಹಾಗೆ ನನ್ನ ಕ್ರಿಯೆ-ಪ್ರತಿಕ್ರಿಯೆ ಮೂಡಿದರೆ 'ಇವಳಿಗೆ ಈ ಮೊದಲು ಅನುಭವವೇನಾದರೂ ಇದೆಯೇನೊ' ಎಂಬ ಗುಮಾನಿ ಗಂಡನಿಗೆ ಬರುವುದೇನೊ ಎಂಬ ಎಚ್ಚರ ನನಗಿತ್ತು. ಈ ಗಂಡಸರೇ ಇಷ್ಟು, ನನ್ನ ಹರಿಶ್ಚಂದ್ರನೂ ಅಷ್ಟೇ.

ನನ್ನ ನಿದ್ರೆಗೇನೂ ಹೆಚ್ಚು ತೊಂದರೆಯಾಗಲಿಲ್ಲ; ಬಂದ ಹರಿಶ್ಚಂದ್ರನನ್ನು ಅರ್ಧ ಗಂಟೆಯಲ್ಲಿ ಕಳಿಸಿದೆ; ನಂತರ ಎರಡು ಗಂಟೆ ಮಲಗಿದೆ.

ಎದ್ದು ಮುಖ ತೊಳೆದು, ಅಕ್ಕಂದಿರು-ಅತ್ತೆ ಜೊತೆ ಮಾತಾಡಿದೆ. ಸಂಜೆ ಅಕ್ಕನ ಜೊತೆ ಸೇರಿ ಚಹಾ ಮಾಡಿದೆ. ಎಲ್ಲರಿಗೂ ಕೊಟ್ಟೆ. ಸಂಜೆಯ ಹೊತ್ತಿಗೆ ಮತ್ತೊಮ್ಮೆ ಮುಖ ತೊಳೆದುಕೊಳ್ಳಲು ಹೋಗುತ್ತಿದ್ದಾಗ ಹರಿಶ್ಚಂದ್ರ 'ನಮ್ಮ ಜಮೀನಿನ ಕಡೆ ವಾಕಿಂಗ್ ಹೋಗೋಣ. ರೆಡಿಯಾಗು' ಅಂದ. ನಾನು ರೆಡಿಯಾದೆ.

ಜಮೀನು, ದೇವಸ್ಥಾನ, ಕೆರೆ, ಊರಿನ ಇತರ ಬೀದಿ ಎಲ್ಲವನ್ನೂ ಸುತ್ತಿದೆವು. ಹಲವರಿಗೆ ಹರಿಶ್ಚಂದ್ರ ನಮಸ್ಕಾರ ಮಾಡುತ್ತಾ ಮುಂದೆ

ನಡೆದರೆ, ನಮ್ಮ ಬೀದಿಗಳಲ್ಲಿ ಕೆಲವರು ಹರಿಶ್ಚಂದ್ರನನ್ನು ಮುತ್ತಿ ಮಾತನಾಡಿಸಿದರು. ಕೆಲವರು ಹೆಂಗಸರು ನನ್ನನ್ನು ಮನೆ ಒಳಗೆ ಕರೆದೊಯ್ದು ಮಾತಾಡಿಸಿದರು. ಹೀಗೆ ಎಷ್ಟೋ ಜನರ ಮನೆಗೆ ಹೋಗಿ, ನಾವು ಮನೆಗೆ ಮರಳಿದಾಗ ರಾತ್ರಿ ಎಂಟು ಗಂಟೆ ದಾಟಿತ್ತು.

ಬರುವಷ್ಟರಲ್ಲಿ ಅತ್ತೆ-ಅಕ್ಕಂದಿರು ಅಡುಗೆ ಮಾಡಿ ಮುಗಿಸಿದ್ದರು. ಬೇಗ ಊಟ ಮುಗಿಸಿ, ನವ ದಂಪತಿಗಳು ಮಲಗಲಿ ಎಂಬುದು ಅತ್ತೆಯ ಎಣಿಕೆಯಾಗಿತ್ತು. ಎಲ್ಲರ ಊಟವಾಯಿತು. ನಮಗಾಗಿ ನನ್ನ ಎರಡನೇ ಅಕ್ಕ ಹಾಸಿಗೆ ಸಿದ್ಧಪಡಿಸಿದಳು. ಹರಿಶ್ಚಂದ್ರ ಮೀಸೆಯಲ್ಲೇ ನಗುತ್ತಿದ್ದ. ನನಗೆ ತುಂಬಾ ಸಂಕೋಚವಾಗುತ್ತಿತ್ತು. ನಾನು ಅಡುಗೆ ಮನೆ ಕೆಲಸದಲ್ಲಿ ಅತ್ತೆಗೆ ಜೊತೆಯಾದೆ. ಹಾಸಿಗೆ ಹಾಸಿದ್ದು ಮುಗಿದಾಗ, ಅಕ್ಕ ಅಡುಗೆ ಮನೆಗೆ ಬಂದಳು. ಅದನ್ನು ಗಮನಿಸಿದ ಅತ್ತೆ, ನನಗೆ ಹೋಗಲು ತಿಳಿಸಿದರು. ಅಕ್ಕನೂ ನನ್ನತ್ತ ತಿರುಗಿ ಕಣ್ಸನ್ನೆ ಮಾಡಿದಾಗ, ನಾನು ನಾಚುತ್ತಾ, ಅಕ್ಕನ ಕೈ ಹಿಡಿದು ಕಣ್ಣಲ್ಲೇ ಕೃತಜ್ಞತೆ ಸೂಚಿಸಿದೆ.

ಅಕ್ಕ ಹಾಸಿಗೆ ಹಾಸಿದ್ದ ಕೋಣೆಯೊಳಗೆ ಹೋದೆ; ಹಿಂದೆಯೇ ಹರಿಶ್ಚಂದ್ರ ಬಂದು, ಬಾಗಿಲು ಮುಚ್ಚಿ, ಚಿಲಕ ಹಾಕಿದ. ನನಗೆ ವಿಪರೀತ ಸಂಕೋಚವಾಯಿತು. ಕೂಡಲೇ ಕೋಣೆಯಲ್ಲಿನ ದೀಪವನ್ನು ಆರಿಸಿದೆ.

ಬೆಳಿಗ್ಗೆ ಬೇಗನೇ ಎದ್ದೆ. ಹಿಂದಿನ ದಿನ ಮನೆಗೆಲಸದಲ್ಲಿ ಅತ್ತೆ-ಅಕ್ಕಂದಿರಿಗೆ ಸರಿಯಾಗಿ ನೆರವಾಗಿರಲಿಲ್ಲ ಎಂಬ ಅಳುಕಿತ್ತು. ಇನ್ನೂ ನಿದ್ರೆ ಹೋಗಿದ್ದ ಗಂಡನನ್ನು ಕಣ್ತುಂಬಿಸಿಕೊಂಡು ಕೋಣೆಯಿಂದ ಹೊರಬೀಳುವ ಮುನ್ನ ಸೀರೆ ಸರಿಪಡಿಸಿಕೊಂಡೆ. ಆಗ ಕಂಡ ದೃಶ್ಯ ಹುಚ್ಚು ಹಿಡಿಸಿತು. ಎಂದೂ ತಪ್ಪದೇ ಇದ್ದುದು ತಪ್ಪಿಹೋಗಿತ್ತು. ಮುಟ್ಟಾಗಿ ಸರಿಯಾಗಿ ಹದಿನೈದು ದಿನಗಳೂ ಕಳೆದಿರಲಿಲ್ಲ. ಆಗಲೇ ಮುಟ್ಟು ಕಾಣಿಸಿಕೊಂಡಿತ್ತು. ಸೀರೆಯೆಲ್ಲ ರಕ್ತವಾಗಿತ್ತು. ಆಗ ಪ್ಯಾಡ್‌ಗಳೇನೂ ಇರಲಿಲ್ಲ. ಅಗತ್ಯವಾದ ಬಟ್ಟೆಯನ್ನೂ ನಾನು ತವರು ಮನೆಯಿಂದ ತಂದಿರಲಿಲ್ಲ. ಅಕ್ಕಂದಿರನ್ನು ಕೇಳದೇ ಬೇರೆ ದಾರಿಯಿರಲಿಲ್ಲ. ಮನೆಯ ಹಿಂಭಾಗದಲ್ಲಿ ಪಾತ್ರೆ ತೊಳೆಯುತ್ತಿದ್ದ ಕಿರಿಯ ಅಕ್ಕನಿಗೆ ಸನ್ನೆ ಮಾಡಿ, ಬಟ್ಟೆ ಬೇಕಾಗಿದೆ ಎಂದು ವಿಚಾರಿಸಿದೆ. ವಿಷಯ ತಿಳಿಯುತ್ತಲೇ ಆಕೆ ಮನೆ ಒಳಗೆ ಹೋದಳು. ನಗುತ್ತಾ ಬಟ್ಟೆ ತರದೇ ಬರಿಗೈಲಿ ಹಿಂದಿರುಗಿ ಬಂದು, ಪಾತ್ರೆ ತೊಳೆಯುವುದನ್ನು ನಗುತ್ತಲೇ ಮುಂದುವರೆಸಿದಳು. ನನಗೆ ವಿಚಿತ್ರವೆನಿಸಿತು. ನಾನು ಏನಾದರೂ ಕೇಳಬೇಕೆನ್ನುವಷ್ಟರಲ್ಲಿ ಅತ್ತೆ-ಹಿರಿಯ ಅಕ್ಕ ನಗುತ್ತ ಜೊತೆಯಾಗಿ ಬಂದರು. ಅವರು ನನ್ನನ್ನು ತಬ್ಬಿಕೊಂಡರು. ಅವರ ಮುಖದಲ್ಲಿ ಅಭಿಮಾನದ ಭಾವ ಇತ್ತು. ನನಗೊಂದೂ ಆಗ ಅರ್ಥವಾಗಲಿಲ್ಲ.

ತುಸು ಹೊತ್ತಿನಲ್ಲಿ ಬಟ್ಟೆ ತಂದುಕೊಟ್ಟ ಹಿರಿಯ ಅಕ್ಕ, ಸ್ನಾನ ಮಾಡಲು ನನಗೆ ತಿಳಿಸಿದಳು. ನಾನು ಶೌಚ ಮುಗಿಸಿ ಸ್ನಾನ ಮಾಡಿದೆ. ಬೇಕಾದೀತೆಂದು ಬಟ್ಟೆಯನ್ನು ಒಂದೆಡೆ ಇಟುಕೊಂಡಿದ್ದೆ. ಸ್ನಾನ, ಉಪಾಹಾರ, ಚಹಾ, ಕೆಲಸ ಆಗಿ ಮಧ್ಯಾಹ್ನ ಕಳೆಯುತ್ತಾ ಬಂದರೂ, ಬಟ್ಟೆಯ ಉಪಯೋಗ ಬೀಳಲಿಲ್ಲ. ಮುಟ್ಟು ನಿಂತುಹೋಗಿತ್ತು. ಇದು ನನಗೆ ಇನ್ನಷ್ಟು ಆಶ್ಚರ್ಯವನ್ನು ತಂದಿತು.

ಮಧ್ಯಾಹ್ನ ಊಟವಾದ ಬಳಿಕ ಗಂಡನಿಗೆ ವಿಷಯ ತಿಳಿಸಿದೆ. ಕೆನ್ನೆಗೊಂದು ಪ್ರೀತಿಯ ಏಟು ಕೊಟ್ಟು 'ನಿನ್ನನ್ನು ನೀನು ಭಾರಿ ಜಾಣೆ ಎಂದುಕೊಂಡಿದ್ದೀ. ಅದರೆ ನೀನು ಮೂರ್ಖಳೇ ಸೈ; ಮದುವೆಯಾದ ಹೊಸತರಲ್ಲಿ ಹೀಗೆ ಆಗುತ್ತೆ. ಇದು ಆ ಲಾಡ್ಜ್‌ನಲ್ಲೇ ಆಗಬೇಕಿತ್ತು' ಎಂದು ಹೇಳಿ ಕಣ್ಣು ಹೊಡೆದ.

ಆ ದಿನದಿಂದ ಮೂರು ದಿನ ಎಲ್ಲರಿಂದ ದೂರ ಇರಲು ಅತ್ತೆ ಆಜ್ಞೆ ಮಾಡಿದರು. ಹರಿಶ್ಚಂದ್ರ ಕೈ ಕೈ ಹಿಸುಕಿಕೊಂಡ. ಆ ಮೂರು ರಾತ್ರಿ ನಾನು ಒಬ್ಬಳೇ ಅತ್ತೆ ಮಲಗುವ ಕಡೆ ಮಲಗುವುದು ಅನಿವಾರ್ಯವಾಯಿತು.

ಮದುವೆಯಾಗಿ ಹತ್ತು ದಿನಗಳು ಕಳೆದವು. ಹರಿಶ್ಚಂದ್ರ ಕೆಲಸಕ್ಕೆ ಹಾಜರಾಗಬೇಕಿತ್ತು. ಆಗ ಚಿಪಳೂಣದಲ್ಲಿ ಕೆಲಸವಿತ್ತು. ಒಂದೆರಡು ದಿನ ಮೊದಲೇ ನನಗೆ ವಿಷಯ ತಿಳಿಸಿದ್ದ. ಆ ದಿನ ಹತ್ತಿರ ಬರುತ್ತಿದ್ದಂತೆ ನನ್ನ ದುಃಖ ಹೆಚ್ಚುತ್ತಿತ್ತು. ನನ್ನ ಬಾಡಿದ ಮುಖ ಕಂಡು 'ಬರ್ತೀಯೇನು? ಒಂದು ರೂಂ ಮಾಡ್ತೀನಿ; ಕರ್ಕೊಂಡು ಹೋಗ್ತೀನಿ' ಎಂದೂ ಹೇಳಿದ್ದ. ಗಂಡನ ಹಿಂದೆ ಹೋಗೇ ಬಿಡೋದು ಸರಿ ಕಾಣಲಿಕ್ಕಿಲ್ಲವೆಂದು ಹೂಂ ಅನ್ನಲಿಲ್ಲ.

ಆ ದಿನ ಬೆಳಿಗ್ಗೆ ಹರಿಶ್ಚಂದ್ರ ಹೊರಟು ನಿಂತ. ಅತ್ತೆಯ ಮನೆಯಲ್ಲಿ ಯಾವ ತೊಂದರೆಯೂ ಇರಲಿಲ್ಲ; ಯಾರ ಕಾಟವೂ ಇರಲಿಲ್ಲ. ಅಮ್ಮ ಮತ್ತು ಅತ್ತೆಯನ್ನು ನಾನು ಮನಸ್ಸಿನಲ್ಲೇ ಹೋಲಿಸುತ್ತಿದ್ದೆ. ಆಗ ನನ್ನ ಅತ್ತೆಗೇ ಹೆಚ್ಚು ಅಂಕಗಳನ್ನು ಕೊಡುತ್ತಿದ್ದೆ. ಅಮ್ಮ ಎಲ್ಲರ ಮೇಲೂ ದರ್ಪ ತೋರುವಾಕೆ; ಕೈ ಭಾರಿ ಬಿಗಿ. ಔದಾರ್ಯ ಕಮ್ಮಿ. ಧಿಮಾಕು ಜಾಸ್ತಿ. ಅಣ್ಣನ ಮದುವೆಯಲ್ಲಿ ಗಂಡಿನ ತಾಯಿ ಎಂದು ಹೆಣ್ಣಿನವರ ಮೇಲೆ ಹರಿಹಾಯ್ದಿದ್ದು ನೆನಪಾಯಿತು. ಆದರೆ ಅತ್ತೆ ಒಂದು ಕ್ಷಣವೂ ಹಾಗೆ ಮಾಡಿದವರಲ್ಲ.

ನಾನು ಅತ್ತೆಯ ಮನೆಯಲ್ಲಿದ್ದುದು ಬೇಸಿಗೆ ಕಾಲದಲ್ಲಿ. ಬೇಸಿಗೆ ಏರುತ್ತಿದ್ದ ಹಾಗೆ, ಈ ಪ್ರದೇಶದಲ್ಲಿ ಬಾವಿಯ ನೀರು ಬತ್ತುತ್ತಾ ಹೋಗುತ್ತದೆ. ಆಗ ಜನರು ನೀರಿಗಾಗಿ ಬಾವಿ ಬಾವಿ ಹುಡುಕುತ್ತಾರೆ. ಆ ಬೇಸಿಗೆಯಲ್ಲೂ ಹೀಗೇ ಆಯಿತು. ಬಹು ದೂರದ ಬಾವಿಯಿಂದ ನೀರು ತರಬೇಕಾಗಿ ಬಂದಾಗ, ನಾನೂ ಬಿಂದಿಗೆ ಹಿಡಿದು ಅಕ್ಕನೊಂದಿಗೆ ಹೊರಟು ನಿಂತೆ. ಅದು ಮೊದಲ ಬಾರಿ. ನನ್ನನ್ನು ನೋಡಿದ ಅತ್ತೆ, ಗದರುವ ದನಿಯಲ್ಲಿ 'ನೀನು ಓದಿದವಳು; ಇಲ್ಲಿ ನೀರಿಗೆ ಹೋಗಬೇಡ' ಎಂದರು. 'ನಾನು ಅಕ್ಕನ ಜೊತೆಯಲ್ಲಿ ಹೋಗ್ತೀನಿ' ಎಂದು ತುಸು ಹಟದ ದನಿಯಲ್ಲಿ ಹೇಳಿದಾಗ, ಅತ್ತೆ ಇನ್ನೂ ಜೋರಾಗಿ ಗದರಿದರು. ನಂತರ ಗೊತ್ತಾಗಿದ್ದೇನೆಂದರೆ, ಬಾವಿಯಲ್ಲಿ ಮಹಾರರು ಬಾವಿ ನೀರು ಮುಟ್ಟುವ ಹಾಗಿರಲಿಲ್ಲ. ಹಿಂದೂ ಸವರ್ಣೀಯರನ್ನು ಕೇಳಿ, ಅವರಿಂದ ನೀರು ಹಾಕಿಸಿಕೊಂಡು ಪಡೆಯಬೇಕಾಗಿತ್ತು. ತಮಗೆ ಅನಿವಾರ್ಯವಾಗಿದ್ದ ಅವಮಾನ ನನಗೆ ಆಗಬಾರದೆಂಬುದು ಅತ್ತೆಯ ಅಭಿಪ್ರಾಯವಾಗಿತ್ತು. ಇದೆಲ್ಲ ತಿಳಿದಾಗ, ಅತ್ತೆಯ ಬಗೆಗಿನ ವಾತ್ಸಲ್ಯ, ಅಭಿಮಾನ, ಗೌರವಗಳು ನೂರ್ಮಡಿಯಾದವು.

ಹೀಗೇ ದಿನಗಳು ಕಳೆಯುತ್ತಿದ್ದವು. ಒಂದು ದಿನ ಇದ್ದಕ್ಕಿದ್ದ ಹಾಗೆ ನನ್ನಣ್ಣ ಶಾಹು ಬಂದ. ನನಗೆ ತುಂಬಾ ಆಶ್ಚರ್ಯವಾಯಿತು. ಪಾತ್ರೆ ತೊಳೆಯುತ್ತಿದ್ದವಳು ಕೈ ತೊಳೆದುಕೊಂಡು ಬಂದೆ. 'ಪತ್ರ ಇಲ್ಲ, ಸುದ್ದಿ ಇಲ್ಲ; ದಿಢೀರನೇ ಬಂದೆಯಲ್ಲ?' ಎಂದಾಗ 'ನಿನ್ನನ್ನು ಮನೆಗೆ ಕರೆದೊಯ್ಯಲು ಬಂದೆ' ಎಂದು ಹೇಳಿದ.

ಭಾವ ಇಲ್ಲದಾಗ ಬಂದು ತಂಗಿಯನ್ನು ಕರೆದೊಯ್ಯುವ ಮಾತಾಡುತ್ತಾನೆ; ಈ ಮಧ್ಯೆ ಎಂದೂ ಬರಲಿಲ್ಲ; ಪತ್ರ-ಸುದ್ದಿ ಏನೂ ಇಲ್ಲದೆ ದಿಢೀರನೆ ಬಂದು, ನಾಳೆಯೇ ತಂಗಿಯನ್ನು ಕರೆದೊಯ್ಯುವುದಾಗಿ ಹೇಳುತ್ತಾನೆ... ... ಮುಂತಾದ ಯಾವ ವಿಷಯಗಳನ್ನೂ ನನ್ನ ಅತ್ತೆ-ಮಾವ ಗಂಭೀರವಾಗಿ ಪರಿಗಣಿಸಲಿಲ್ಲ. ಶಾಹು ಜೊತೆ ಚೆನ್ನಾಗಿ ಮಾತಾಡಿದರು. ಕೋಳಿ ಊಟ ಬಡಿಸಿದರು. ಅಮ್ಮ-ಅಕ್ಕಂದಿರನ್ನು ವಿಚಾರಿಸಿದರು. ನನ್ನ ಬಗ್ಗೆ ಕಕ್ಕುಲತೆಯಿಂದ ಮಾತಾಡಿದರು.

ಮರುದಿನ ನಾವು ಉಪಾಹಾರ ಮಾಡಿ, ಹೊರಟು ನಿಂತೆವು. ಅತ್ತೆ ಎರಡು ಚೀಲಗಳ ತುಂಬಾ ಅಕ್ಕಿ ತುಂಬಿ ಕಳಿಸಿಕೊಟ್ಟರು. ಬಸ್ ನಿಲ್ದಾಣದವರೆಗೆ ಮೈದುನನನ್ನು ಕಳಿಸಿದರು. ನನಗೆ ನನ್ನಮ್ಮ ಇವರಿಗೆಂದು ಕಳಿಸಿದ ಹಳತಾದ ನಾಲ್ಕು ಮೀನುಗಳ ಚೀಲ ಆಗ ನೆನಪಾಯಿತು.

* * *

(ಮುಂದುವರಿಯುವುದು)

ವಿಕೃತಿಯ ಪರಮಾವಧಿ 'ಹಿಂಸೆಯ ಪಂಜರ'



ಈ ವರ್ಷದ ಮೇ 11ರಂದು ವಿಶ್ವಸಂಸ್ಥೆ ಒಂದು ಪ್ರಮುಖ ನಿರ್ಣಯವನ್ನು ಕೈಗೊಂಡು 'ಹಿಂಸೆಯ ಪಂಜರ'ವನ್ನು ಮನುಕುಲದ ಅಪಮಾನವೆಂದು ಬಣ್ಣಿಸಿ ಜಗತ್ತಿನ ಯಾವ ಭಾಗದಲ್ಲೂ ಎಂತಹ ಸೈನಿಕ ಅಗತ್ಯದಲ್ಲೂ ಅದು ಬಳಕೆ ಯಾಗಬಾರದು ಎಂದ ಕಟ್ಟುನಿಟ್ಟಾಗಿ ಸೂಚಿಸಿದೆ. ಹಾಗೇನಾದರೂ ಬಳಕೆಯಾದರೆ ಅದಕ್ಕೆ ಸಂಬಂಧಿಸಿದ ದೇಶಗಳೇ ಹೊಣೆಗಾರರಾಗಿರುತ್ತವೆ ಎಂದೂ ಎಚ್ಚರಿಕೆ ನೀಡಿದೆ. ಹಿಂಸೆಯ ಪಂಜರ ಎಂದರೆ ಏನು ಎಂದು ವಿವರಿಸಲು ಕಳೆದ ವರ್ಷ ಬೆಳಕಿಗೆ ಬಂದ ಇಂಗ್ಲೆಂಡ್‌ನ ಬಂಕಿಂಗ್‌ಹ್ಯಾಂನಲ್ಲಿನ ಘಟನೆಯನ್ನು ಉದಾಹರಣೆ ಯಾಗಿ ನೀಡಬಹುದು. ಭಾರತೀಯ ಮೂಲದ ಬಬಿತಾ ಬಿಬ್ಲಿಯ ಕಥೆ ಅದು. ಬಬಿತಾಳ ಕುಟುಂಬ ಪಂಜಾಬ್‌ನಿಂದ ವಲಸೆ ಹೋಗಿ ಇಂಗ್ಲೆಂಡಿನಲ್ಲಿ ನೆಲೆಸಿತ್ತು. ಆಗ ಅವಳಿಗೆ ರಿಚರ್ಡ್ಸ್ ಎಂಬುವವನ ಪರಿಚಯವಾಯಿತು. ಅದು ಬಹುಬೇಗ ಪ್ರೇಮಕ್ಕೆ ತಿರುಗಿತು. ಭಾರತೀಯನಲ್ಲದವನ ಜೊತೆಗಿನ ವಿವಾಹಕ್ಕೆ ಬಬಿತಾಳ ಕುಟುಂಬ ಒಪ್ಪಲಿಲ್ಲ. ಪ್ರೇಮಿಗಳು ಓಡಿ ಹೋಗಿ ವಿವಾಹವಾದರು. ಕೆಲಕಾಲ ಅವರ ದಾಂಪತ್ಯ ಸುಂದರವಾಗೇ ಸಾಗಿತು. ಆದರೆ ರಿಚರ್ಡ್ಸ್ ಕೆಲವು ತಿಂಗಳುಗಳ ನಂತರ ಬೇರೆ ಹೆಣ್ಣಿನ ವ್ಯಾಮೋಹಕ್ಕೆ ಸಿಲುಕಿ ಬಬಿತಾಳನ್ನು ಮನೆಬಿಟ್ಟು ಹೋಗಲು ತಿಳಿಸಿದ. ದಾರಿ ಕಾಣದೆ ಅವಳು ಹೆತ್ತವರ ಮನೆಗೆ ಬಂದಳು. ಸಂಪ್ರದಾಯ ವಾದಿಗಳಾದ ಹೆತ್ತವರು ಮಗಳನ್ನು ಮನೆಗೆ ಸೇರಿಸಲಿಲ್ಲ. ಬೇರೆದಾರಿ ಕಾಣದೆ ರಿಚರ್ಡ್ಸ್‌ನ ಹೆತ್ತವರ ಬಳಿ ನ್ಯಾಯ ಕೇಳಲು ಹೋದಳು. ಅಲ್ಲಿ ಅವಳ ನಿರೀಕ್ಷೆಗಿಂತ ಭಿನ್ನವಾಗಿ ಸ್ವಾಗತ ದೊರಕಿತು. ಆದರೆ ಅದರ ಹಿಂದಿನ ರಹಸ್ಯ ತಿಳಿಯುವ ವೇಳೆಗೆ ಕಾಲ ಮಿಂಚಿತ್ತು. ರಿಚರ್ಡ್ಸ್‌ನ ತಂದೆ ಅಂದರೆ ಅವಳ ಮಾವ, ನೆಲಮಾಳಿಗೆಯಲ್ಲಿ ಬಬಿತಾಳನ್ನು ಬಂಧಿಸಿಟ್ಟ, ಅವಳು ಅಸಹಾಯಕಳಾದ ನಂತರ ಹಿಂಸೆಯ ಪಂಜರದಲ್ಲಿಟ್ಟು ಸ್ಯಾಡಿಸ್ಟ್ ಆಗಿ ಹಿಂಸಿಸಲು ಗಿರಾಕಿಗಳಿಗೆ ಅವಕಾಶ ನೀಡುವ ಮೂಲಕ ಹಣ ಸಂಪಾದಿಸಲು ಆರಂಭಿಸಿದ. ನಾಲ್ಕು ವರ್ಷಗಳ ಕಾಲ ಹೀಗೆ ದಾರುಣವಾದ ಹಿಂಸೆಗಳನ್ನು ಅನುಭವಿಸಿದ ಬಬಿತ ಕೊನೆಗೆ ಗಿರಾಕಿಯೊಬ್ಬನು ಅವಳ ಕತೆಯನ್ನು ಕೇಳಿ ತೋರಿದ ಮಾನವೀಯತೆಯಿಂದ ಬಿಡುಗಡೆ ಕಂಡಳು. ಪ್ರೀತಿಯ ಕನಸು ಅವಳನ್ನು ಹಿಂಸೆಯ ಪಂಜರಕ್ಕೆ ದೂಡಿತ್ತು.

ಹಿಂಸೆಯ ಪಂಜರವನ್ನು ಮನುಕುಲದ ಅತ್ಯಂತ ಅನಾಗರೀಕವಾದ ವರ್ತನೆಯ ರೂಪಕ ಎನ್ನಬಹುದು. ಮಧ್ಯಕಾಲೀನ ಯುಗದಲ್ಲಿ ಇದು ಬಳಕೆಯಲ್ಲಿತ್ತು ಎಂಬುದಕ್ಕೆ ಚಾರಿತ್ರಿಕ ದಾಖಲೆಗಳಿವೆ. 1928ರಲ್ಲಿ ಇದನ್ನು ಆಧರಿಸಿದ ಫ್ರೆಡ್ ಪಾಲ್ ನಿರ್ದೇಶನದ 'ಟಾರ್ಚರ್ ಕೇಜ್' ಎಂಬ ಚಲನ ಚಿತ್ರ ಕೂಡ ತೆರೆ ಕಂಡಿತ್ತು. ಇದರ ಭಯಾನಕ ಸ್ವರೂಪದ ಅರಿವು ಜಗತ್ತಿಗೆ ಉಂಟಾಗಿದ್ದು 1940ರ ಸೆಪ್ಟಂಬರ್‌ನಲ್ಲಿ. ಲಂಡನ್ ಕೇಜ್ ಎಂಬ ಹಿಂಸೆಯ ತಾಣ ಆಗ ಪತ್ತೆಯಾಯಿತು. ಇದರಲ್ಲಿ ಜರ್ಮನಿಯ ನಾಜಿ ಸೈನಿಕರನ್ನು ಬಂಧಿಸಿ ಹಿಂಸಿಸಲಾಗುತ್ತಿತ್ತು. 1943ರಲ್ಲಿ ಜರ್ಮನಿ ತನ್ನ ನಾಗರೀಕರನ್ನು ಹಿಂಸಿಸಿದ ಕುರಿತು ಅಧಿಕೃತವಾಗಿ ವಿಶ್ವಸಂಸ್ಥೆಯಲ್ಲಿ ದೂರು ಸಲ್ಲಿಸಿತು. ಅನಂತರ ನಡೆದ ವಿಚಾರಣೆಯಲ್ಲಿ ಬೆಳಕಿಗೆ ಬಂದ ವಿವರಗಳು ಭಯಾನಕವಾಗಿದ್ದವು. ಕರ್ನಲ್ ಅಲೆಗ್ಸಾಂಡರ್ ಎನ್ನುವವನ ನೇತೃತ್ವದಲ್ಲಿ ಬ್ರಿಟಿಷ್ ಸೈನಿಕರು ಇಂತಹ ಪಂಜರಗಳನ್ನು ನಿರ್ಮಿಸಿ ಅದರಲ್ಲಿ ನಾಜಿ ಸೈನಿಕರನ್ನು ಬಂಧಿಸಿ ಉಪವಾಸ ಹಾಕಿ ನಿದ್ದೆಗೂ ಅವಕಾಶ ನೀಡದೆ ಅನಾಗರೀಕವಾಗಿ ಹಿಂಸಿಸಿದ್ದರು. ಇದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಯಿತು. ಆಗ ಬ್ರಿಟನ್ ದೇಶವು ನಾಜಿಗಳು ನೀಡಿದ್ದ ಕ್ರೂರಹಿಂಸೆಯ ವಿವರಗಳನ್ನು ನೀಡಿ ತನ್ನನ್ನು ಸಮರ್ಥಿಸಿಕೊಂಡಿತ್ತು. ಕೊನೆಗೆ 1948ರಲ್ಲಿ ಲಂಡನ್ ಕೇಜ್ ಅನ್ನು ಅಧಿಕೃತವಾಗಿ ಮುಚ್ಚಲಾಯಿತು. 1954ರಲ್ಲಿ ಈ ಕುರಿತ ಪುಸ್ತಕವೂ ಪ್ರಕಟವಾಯಿತು. ಇದು ಅಂತ್ಯಕ್ಕೆ ಬದಲು ನಾಂದಿಗೆ ಕಾರಣವಾಗಿದ್ದು ವಿಪರ್ಯಾಸವೇ ಸರಿ. ಬ್ರಿಟನ್ ಸೇರಿದಂತೆ ಯೂರೋಪಿನ ಹಲವು ದೇಶಗಳಲ್ಲಿ ಹಿಂಸೆಯ ಪಂಜರ ವಿಕೃತ ಕ್ರೀಡೆಯಾಗಿ ಜನಪ್ರಿಯವಾಯಿತು. ಏಷ್ಯ ಮತ್ತು ಆಫ್ರಿಕಾದ ಹಲವು ಯುವತಿಯರನ್ನು ಹೀಗೆ ಹಿಂಸೆಯ ಪಂಜರದಲ್ಲಿರಿಸಿ ವಿಕೃತವಾಗಿ ಹಿಂಸಿಸುವುದು ಸಿರಿವಂತರ ಮೋಜಾಯಿತು. ಇವರಲ್ಲಿ ಹಲವರು ಮನೆಕೆಲಸದವರಾಗಿ ಕರೆತಂದವರಾಗಿದ್ದರು. ಇನ್ನು ಕೆಲವರು ಪ್ರೀತಿಯ ಬೆನ್ನುಹತ್ತಿ ಬಂದು ವಂಚನೆಗೆ ಒಳಗಾಗಿದ್ದರು. ವಿವಾಹದ ನಂತರ ಪಾಸ್‌ಪೋರ್ಟ್ ವಿಷಯದಲ್ಲಿ ಅಸಹಾಯಕತೆಗೆ ಸಿಕ್ಕವರೂ ಕೆಲವರಿದ್ದರು. ಇದು ರಾಜಾರೋಷವಾಗಿ ನಡೆಯುತ್ತಿದ್ದರೂ ಕನಿಷ್ಠ ಮಾನವೀಯತೆಯ ಹಿನ್ನೆಲೆಯಲ್ಲಾದರೂ ಅಲ್ಲಿನ



ಆಡಳಿತ ಅದನ್ನು ನಿಯಂತ್ರಿಸುವ ಬದಲು ವರ್ಣಭೇದ ನೀತಿಯ ಆಧಾರದಲ್ಲಿ ಕಪ್ಪುವರ್ಣದ ಹೆಣ್ಣುಮಕ್ಕಳನ್ನು ಹೀಗೆ ಹಿಂಸೆಯ ಪಂಜರದ ವಿಕೃತಿಗೆ ಗುರಿ ಮಾಡುವುದನ್ನು ಅಪರೋಕ್ಷವಾಗಿ ಬೆಂಬಲಿಸುತ್ತಿತ್ತು. ಕೇವಲ ಅಸಹಾಯಕರನ್ನು, ಲೈಂಗಿಕ ದಾಸಿಯರನ್ನು ಹೀಗೆ ಹಿಂಸಿಸಲಾಗುತ್ತಿದೆ ಎಂದು ಭಾವಿಸಿದವರೆಲ್ಲ ಬೆಚ್ಚಿ ಬಿದ್ದದ್ದು 2010ರ ನವೆಂಬರ್ 11ರಂದು ಬೆಳಕಿಗೆ ಬಂದ ಚೆಲಿಸಾ ಪ್ರಕರಣದ ನಂತರ. 14 ವರ್ಷಗಳಿಂದ 24 x 17 ಇಂಚಿನ ಪಂಜರದಲ್ಲಿ ಚೆಲಿಸಾಳನ್ನು ಅವಳ ಹೆತ್ತವರೇ ಬಂಧಿಸಿಟ್ಟಿದ್ದರು. ಇದಕ್ಕೆ ಕಾರಣ ಅವಳ ಮಾನಸಿಕ ಅಸ್ವಸ್ಥತೆ.

ಬ್ರಿಟನ್ ಮಾತ್ರವಲ್ಲದೆ ವಿಶ್ವದ ಇನ್ನೂ ಕೆಲವು ದೇಶಗಳಲ್ಲಿ ಇಂತಹ ಹಿಂಸೆಯ ಪಂಜರ ಅಸ್ತಿತ್ವದಲ್ಲಿರುವುದು ಇತಿಹಾಸದ ಪುಟಗಳಲ್ಲಿ ಕಂಡು ಬಂದಿದೆ. ದಕ್ಷಿಣ ಅಮೇರಿಕಾದ ಬ್ರೆಜಿಲ್, ಚಿಲಿ ಮೊದಲಾದ ದೇಶಗಳಲ್ಲಿ ಇದನ್ನು ಪೆರಿಲ್ಲಾ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಬಂಡುಕೋರರನ್ನು ಹಿಂಸಿಸಲು ಇದನ್ನು ಬಳಸಲಾಗುತ್ತಿತ್ತು. ಇರಾನ್‌ನಲ್ಲಿ ಮಹಿಳಾ ಹೋರಾಟಗಾರ್ತಿಯರನ್ನು ಹಿಂಸೆಯ ಪಂಜರದಲ್ಲಿ ಕುದುರೆಯ ಮಾದರಿಯಲ್ಲಿ ನಿಲ್ಲಿಸಿ ಕೈಕಾಲುಗಳನ್ನು ಕಟ್ಟಿ ಹಾಕಿ ಅವರ ದೇಹದ ವಿವಿಧ ಸೂಕ್ಷ್ಮಭಾಗಗಳನ್ನು ಹಿಚುಕಿ ನೋವಿಗೆ ಗುರಿ ಪಡಿಸಿದ ವಿವರಗಳನ್ನು ಈಗ ಇಂಗ್ಲೆಂಡಿನಲ್ಲಿ ನೆಲೆಸಿರುವ ಅಂತಹ ನೋವುಗಳನ್ನು ಅನುಭವಿಸಿದ ಲೆಲೆತರಿಗ್ಯೆ ಎಂಬ ಹೋರಾಟಗಾರ್ತಿ ದಾಖಲಿಸಿದ್ದಾರೆ. ಅವರು ದಾಖಲಿಸಿರುವಂತೆ ಚಳವಳಿಯ ಮೊದಲ ದಿನವೇ ಪೊಲೀಸರು ಅವರನ್ನು ಬಂಧಿಸಿದರು. ಅರ್ಧದಿನಗಳ ಕಾಲ ಕೋಣೆಯೊಂದರಲ್ಲಿ ಅವರನ್ನು ಏಕಾಂಗಿಯಾಗಿ ಕುಳ್ಳಿರಿಸಲಾಗಿತ್ತು. ನಂತರ ನಾಲ್ವರು ಅಧಿಕಾರಿಗಳು ಏಕಕಾಲಕ್ಕೇ ಒಳಕ್ಕೆ ನುಗ್ಗಿ ಅವರ ಟೀ ಶರ್ಟ್ ಅನ್ನು ಬಲವಂತವಾಗಿ ತೆಗಿಸಿ ಅರೆ ನಗ್ನವಾಗಿಸಿದರು. ನಂತರ ಹಿಂಸೆಯ ಪಂಜರದೊಳಗೆ ಅವರನ್ನು ತಳ್ಳಿ ಕೈಗಳನ್ನು ಪಂಜರದ ಮೇಲು ಭಾಗದಿಂದ ಬಂದ ಸರಪಳಿಗೆ ಕಟ್ಟಲಾಯಿತು. ಕಿರಿದಾದ ಪಂಜರದಿಂದ ಲೆಲೆತರಿಗ್ಯೆ ಅವರ ಸ್ತನಗಳು ಹೊರ ಇಣಕುವಂತೆ ಮಾಡಿ ಪಂಜರದ ಸರಳುಗಳಿಗೆ ಅವರನ್ನು ಆನಿಸಿ ನಿಲ್ಲಿಸಲಾಯಿತು. ಅಧಿಕಾರಿಗಳು ಹೊರಗಿನಿಂದ ಸರದಿಯ ಮೇಲೆ ಸ್ತನಗಳನ್ನು ಹಿಸುಕುತ್ತಾ ಯಮಯಾತನೆ ನೀಡಿದರು. ಕೊನೆಗೆ ಪೂರ್ಣ ನಗ್ನವಾಗಿಸಲು ಸಿದ್ಧರಾದಾಗ ಲೆಲೆತರಿಗ್ಯೆ ಭಯದಿಂದ ಕ್ಷಮಾಪಣೆ ಪತ್ರ ಬರೆದು ಕೊಟ್ಟು ಬಿಡುಗಡೆ ಪಡೆದರು. ಲೂಯಿಸ್ ಬೆಕ್ ಮತ್ತು ಗಲೂಟಿ ಸಂಪಾದಕತ್ವದ 'ವುಮೆನ್ ಇನ್ ಇರಾನ್' ಕೃತಿಯಲ್ಲಿ ಹಿಂಸೆಯ ಪಂಜರದ ಕುರಿತ ಹಲವು ಘಟನೆಗಳು ದಾಖಲಾಗಿವೆ.

ಚೀನಾದಲ್ಲೂ ಹೀಗೆ ಬಂಡುಕೋರರನ್ನು ಬಗ್ಗಿಸಲು ಹಿಂಸೆಯ ಪಂಜರವನ್ನು ಬಳಸಿದ ವಿವರಗಳಿವೆ. ಇಲ್ಲಿ ಬಳಕೆಯಾಗುತ್ತಿದ್ದ ಪಂಜರ 1.5 ಮೀಟರ್ ಎತ್ತರ ಮತ್ತು 1.3 ಮೀಟರ್ ಅಗ ಇರುತ್ತಿತ್ತು. ಇಲ್ಲಿ ಕೈಕೋಳ ತೊಡಿಸಿದ ಬಂಧಿಗಳನ್ನು ಇಡಲಾಗುತ್ತಿತ್ತು. ಕೆಲವೊಮ್ಮೆ ಪಂಜರಕ್ಕೇ ಕೈಕೋಳ ಸೇರಿಸಲಾಗುತ್ತಿದ್ದರಿಂದ ಬಂಧಿಗಳು ನಿಂತು ಕೊಳ್ಳಲೂ ಆಗದೆ ಕುಳಿತುಕೊಳ್ಳಲೂ ಆಗದೆ ಪರಿತಪಿಸುತ್ತಿದ್ದರು. ಕೆಲವು ದಿನಗಳಲ್ಲಿ ಬಂಧಿತರ ಕಾಲುಗಳು ಊದಿಕೊಳ್ಳುತ್ತಿದ್ದವು. ಹಲವಾರು ಪ್ರಸಂಗಗಳಲ್ಲಿ ಅವರು ಶಾಶ್ವತವಾಗಿ ಅಂಗವಿಕಲರಾದ ಉದಾಹರಣೆ ಗಳಿವೆ. ಈ ಚಿಕ್ಕಪಂಜರಗಳನ್ನು ಜೈಲಿನ ಹೊರಭಾಗದಲ್ಲಿ ಇಡಲಾಗುತ್ತಿತ್ತು. ಬಂಧಿಗಳು ಚಳಿ-ಮಳೆಗಳನ್ನು ಅನುಭವಿಸಲಿ ಎಂಬುದೇ ಇದರ ಉದ್ದೇಶ. ಇದಲ್ಲದೆ ಕೈಗಳನ್ನು ಕಟ್ಟಲ್ಪಟ್ಟಿದ್ದರಿಂದ ಕೀಟಗಳ ದಾಳಿಗೆ ಅವರು ನೇರವಾಗಿ ತುತ್ತಾಗುತ್ತಿದ್ದರು. ಎಪೋಕ್ ಟೈಮ್ಸ್ ದಾಖಲಿಸಿರುವ ಕೆಲವು ನೈಜ ಪ್ರಸಂಗಗಳು ಹೀಗಿವೆ. ಚಂಗಲಿಂಜಿ ಲೇಬರ್ ಕ್ಯಾಂಪ್‌ನಲ್ಲಿ ಮಾ ವಿನೂರಿ ಮತ್ತು ಯಾನ್ ಜಿಗಾಯೋ ಅವರನ್ನು ಹಿಂಸೆಯ ಪಂಜರದಲ್ಲಿ ಎರಡು ದಿನಗಳ ಕಾಲ ಬಂಧಿಸಿಡಲಾಗಿತ್ತು. ಈ ಅವಧಿಯಲ್ಲಿ ಅವರಿಗೆ ಶೌಚಾಲಯವನ್ನು ಬಳಸಲು ಕೂಡ ಅವಕಾಶ ನೀಡಲಾಗಿರಲಿಲ್ಲ. ಮಸಾಂಜಿಯಾ ಲೇಬರ್ ಕ್ಯಾಂಪ್‌ನಲ್ಲಿ 40 ವರ್ಷದ ಜಿಯಾನಾಜಿಹಿ ಎಂಬ ಮಹಿಳೆಯನ್ನು 19 ದಿನಗಳ ಕಾಲ ಹಿಂಸೆಯ ಪಂಜರದಲ್ಲಿಡಲಾಗಿತ್ತು. ಕಾಲನ್ನು ಬಗ್ಗಿಸಲು ಆಗದಂತೆ ಅವರನ್ನು ಸರಪಳಿಯಿಂದ ಬಂಧಿಸಲಾಗಿತ್ತು. ಅವರ ಮುಂಗೈಯನ್ನು ಆರುದಿನಗಳ ಕಾಲ ಗಟ್ಟಿಯಾಗಿ ಬೇಡಿಯಿಂದ ಕಟ್ಟಲಾಗಿತ್ತು. ಅವರು ತೀವ್ರ ಜ್ವರಕ್ಕೆ ತುತ್ತಾದ ನಂತರ ಬೇಡಿಯನ್ನು ಕೊಂಚ ಸಡಿಲವಾಗಿಸಲಾಯಿತೇ ಹೊರತು ತೆಗೆಯಲಿಲ್ಲ. ಕುಡಿಯುವ ನೀರು ಮತ್ತು ವಸ್ತ್ರದ ಕುರಿತ ಅವರ ಬೇಡಿಕೆಯನ್ನು ನಿರಾಕರಿಸಿ ಬಂಧನದ ಅವಧಿ ಪೂರ್ತಿಯಾಗಿ ಅವರು ನಗ್ನರಾಗಿಯೇ ಇರುವಂತೆ ಮಾಡಲಾಗಿತ್ತು. ಶೌಚಾಲಯದ ಅನಿವಾರ್ಯತೆಯಲ್ಲಿ ಅವರನ್ನು ಲೇವಡಿ ಮಾಡಲಾಗುತ್ತಿತ್ತು. ಮಾತ್ರವಲ್ಲ,





ಪದೇ ಪದೇ ಇಲೆಕ್ಟ್ರಿಕ್ ಬಟನ್‌ಗಳಿಂದ ಶಾಕ್‌ಗಳನ್ನು ನೀಡಲಾಗುತ್ತಿತ್ತು. ವಂಜಿಯಾ ಲೇಬರ್ ಕ್ಯಾಂಪ್‌ನಲ್ಲಿ 24 ವಯಸ್ಸಿನ ಲಿನಾ ಕ್ಸಿಯಾರು ಎಂಬ ಮಹಿಳೆಯನ್ನು ಹತ್ತು ದಿನಗಳ ಕಾಲ 0.6 ಮೀಟರ್ ಅಗಲ 1.3 ಮೀಟರ್ ಎತ್ತರದ ಹಿಂಸೆಯ ಪಂಜರದಲ್ಲಿ ಬಂಧಿಸಿಡಲಾಗಿತ್ತು. ಈ ಪಂಜರವನ್ನು 'ನರಕದ ಪ್ರತಿರೂಪ' ಎಂದು ಕರೆಯಲಾಗಿತ್ತು.

ಪಾಕಿಸ್ಥಾನದಲ್ಲಿಯೂ ಇಂತಹ ಹಿಂಸೆಯ ಪಂಜರದ ಅಸ್ತಿತ್ವದ ದಾಖಲೆಗಳಿವೆ. ಇವುಗಳಲ್ಲಿ ಅತ್ಯಂತ ದಾರುಣವಾದ ಪ್ರಸಂಗ ಪಾಕಿಸ್ಥಾನದ ಜರೀನಾ ಮೇರಿಯವರದು. ಈ ಪ್ರಸಂಗ, ಬಂಧಿತನಾಗಿದ್ದ ಬಲೂಚಿ ಭಾಷೆಯ ಟಿ.ವಿ.ಛಾನೆಲ್ ಒಂದರ ನಿರ್ದೇಶಕ ಮುನೀರ್ ಮಂಗಾಲ್ 'ಇಂಟರ್ ನ್ಯಾಷನಲ್ ರೆಡ್ ಕ್ರಾಸ್'ಗೆ ಸಲ್ಲಿಸಿದ ಹೇಳಿಕೆಯಿಂದ ಬೆಳಕಿಗೆ ಬಂದಿತು. ಮುನೀರ್ ಕರಾಚಿಯ ಜೈಲಿನಲ್ಲಿ ಬಂಧಿಯಾಗಿದ್ದ ಅವಧಿಯಲ್ಲಿ ಜರೀನಾ ಅವರನ್ನು ನಗ್ನರನ್ನಾಗಿಸಿ ಬಂಧಿಸಲಾಗಿದ್ದ ಹಿಂಸೆಯ ಪಂಜರಕ್ಕೆ ಆತನನ್ನು ತಳ್ಳಿ ಅತ್ಯಾಚಾರ ನಡೆಸುವಂತೆ ಒತ್ತಾಯಿಸಲಾಗಿತ್ತು. ನಡುಗುತ್ತಿದ್ದ ಜರೀನಾ ತನ್ನನ್ನು ಕೊಲ್ಲುವಂತೆ ಮುನೀರರನ್ನು ಪ್ರಾರ್ಥಿಸಿದ್ದರು. ಸಹಾನುಭೂತಿಯಿಂದ ಆಲಿಸಿದ ಮುನೀರರಿಗೆ ತಿಳಿದು ಬಂದ ವಿವರಗಳೆಂದರೆ 2005ರಲ್ಲಿ ಶಾಲೆಯ ಶಿಕ್ಷಕಿಯಾಗಿದ್ದ 23 ವರ್ಷದ ಜರೀನಾರನ್ನು ಪಾಕಿಸ್ಥಾನದ ಸೇನೆಯು ಬಲೂಚಿ ಸ್ವಾತಂತ್ರ್ಯ ಹೋರಾಟಗಾರರಿಗೆ ನೆರವಾದ ಆಪಾದನೆಯ ಮೇಲೆ ಬಂಧಿಸಿತು. ನಂತರ ಬೆತ್ತಲಾಗಿಸಿ ಕರಾಚಿಯ ಜೈಲಿನ ಹಿಂಸೆಯ ಪಂಜರದಲ್ಲಿ ಬಂಧಿಸಿ, ಪ್ರತಿನಿತ್ಯ ಒಬ್ಬೊಬ್ಬ ಖೈದಿಯನ್ನು ಆ ಪಂಜರಕ್ಕೆ ಬಿಟ್ಟು ಅತ್ಯಾಚಾರ ಮಾಡಲು ಹೇಳಲಾಗುತ್ತಿತ್ತು. ಜರೀನಾ ಅವರು ಮುನೀರ್ ಅವರಿಗೆ ತಿಳಿಸಿದಂತೆ



ಪಾಕಿಸ್ಥಾನದ ಸೇನೆ ಇಂತಹ 52 ಹಿಂಸೆಯ ಪಂಜರಗಳನ್ನು ಹೊಂದಿತ್ತು. ಇದರಲ್ಲಿ ಬಲೂಚಿಸ್ಥಾನದ ಹಲವು ಮಹಿಳೆಯರನ್ನು ಬಂಧಿಸಲಾಗಿತ್ತು. ಅವರ ಜೊತೆ ತನಗೆ ಮಾತನಾಡುವ ಅವಕಾಶ ಸಿಕ್ಕಲಿಲ್ಲವೆಂದು ಜರೀನಾ ತಿಳಿಸಿದ್ದರು. ಜರೀನಾ ಅವರ ಮೇಲೆ ಅತ್ಯಾಚಾರ ಮಾಡಲು ನಿರಾಕರಿಸಿದರು ಮುನೀರ್. ಅದರಿಂದಾಗಿ ಮುನೀರ್ ಅವರ ಗುಪ್ತಾಂಗಕ್ಕೆ ಪಾಕಿಸ್ತಾನದ ಸೈನಿಕರು ಕರೆಂಟ್ ಶಾಕ್ ನೀಡಿದ್ದರು. ಒಂಬತ್ತು ತಿಂಗಳ ನಂತರ ಮುನೀರ್ ಬಿಡುಗಡೆಯಾದರು, ಜರೀನಾ ಏನಾದರು ಎಂಬ ಬಗ್ಗೆ ಇಂದಿಗೂ ಮಾಹಿತಿ ಇಲ್ಲ. ಭಾರತದಲ್ಲಿಯೂ ಇದು ಗುಟ್ಟಾಗಿ ಬಳಕೆಯಲ್ಲಿರುವ ಬಗ್ಗೆ ಆಗಾಗ ವಿವರಗಳು ಲಭಿಸುತ್ತಿರುತ್ತವೆ. 2001ರ ಫೆಬ್ರವರಿ 11ರಂದು ಬೆಳಕಿಗೆ ಬಂದ ಇಂತಹ ಘಟನೆಯಲ್ಲಿ ಚೆನ್ನೈನಲ್ಲಿ ಇದನ್ನು ಬಳಸುತ್ತಿದ್ದ ಮಣಿನಾಥನ್ ಎಂಬ ದರೋಡೆಕೋರನನ್ನು ಪೊಲೀಸರು ಬಂಧಿಸಿ ಅವನ ಹಿಂಸೆಯ ಪಂಜರದಲ್ಲಿ ಬಂಧಿಗಳಾಗಿದ್ದ ಹನ್ನೆರಡು ಮಹಿಳೆಯರನ್ನು ಬಿಡುಗಡೆ ಮಾಡಿದ್ದರು.

ತನ್ನ ಅಡಿಯಾಳಾದ ಹೆಣ್ಣನ್ನು ಸ್ಯಾಡಿಸ್ಟ್ ಆಗಿ ಹಿಂಸಿಸುವ ಮನೋಸ್ಥಿತಿ ದ್ರೌಪದಿಯ ವಸ್ತ್ರಾಪಹರಣ ಕಾಲದಿಂದಲೂ ಇದ್ದದ್ದೇ. ಆಧುನಿಕ ಯುಗದಲ್ಲಿ ಅದು ವಿಕೃತಿಯ ದಾರಿ ಹಿಡಿದಿದೆ. ಹಿಂಸೆಯ ಪಂಜರವನ್ನು ನಿಷೇಧಿಸಿದ್ದರೂ ಅದು ಕ್ರೀಡೆಯಾಗಿ ಇಂಟರ್‌ನೆಟ್‌ನಲ್ಲಿ ಬಳಕೆಯಲ್ಲಿದೆ. ಬಿ.ಡಿ.ಎಸ್.ಎಂ ನಂತಹ ಕಾಮತಾಣಗಳಲ್ಲಿ ಅದು ವಿವಿಧ ಮಾದರಿಗಳಲ್ಲಿ ಲಭ್ಯ. ಗ್ರಾಫಿಕ್ಸ್‌ಗಳ ಮೂಲಕ ಹೆಣ್ಣನ್ನು ಹಿಂಸೆಯ ಪಂಜರದಲ್ಲಿ ನಿಲ್ಲಿಸಿ ವಿವಿಧ ಭಂಗಿಗಳಲ್ಲಿ ಹಿಂಸಿಸುವ ಈ ಕ್ರೀಡೆ ಯಾವ ತಡೆಯೂ ಇಲ್ಲದೆ ಎಳೆಯರ ಕೈಗೆ ಸಿಕ್ಕುತ್ತಿದೆ. ಒಂದು ಸಮೀಕ್ಷೆಯ ಪ್ರಕಾರ ಭಾರತದ ಶೇ 26ರಷ್ಟು ಹದಿಹರಯದವರು ಈ ಕ್ರೀಡೆಯ ಗೀಳಿಗೆ ಬಿದ್ದಿದ್ದಾರೆ. ಇದು ಉಂಟು ಮಾಡುವ ವಿಕೃತ ಮನಸ್ಥಿತಿ ಅತ್ಯಾಚಾರ, ಅಪಹರಣಗಳಂತಹ ದುಷ್ಕೃತ್ಯಗಳಿಗೆ ಅವರು ಇಳಿಯುವಂತೆ ಮಾಡುತ್ತದೆ ಎಂಬುದನ್ನು ಸಮೀಕ್ಷೆ ಗುರುತಿಸಿದೆ. ಈಗಾಗಲೇ ಭಾರತೀಯ ಚಿತ್ರರಂಗದಲ್ಲಿ ಹೆಣ್ಣಿನ ಅಭಿನಯಕ್ಕೆ ಮಹತ್ವ ಕಮ್ಮಿಯಾಗಿದೆ. ಹಿಂಸೆಯ ದೃಶ್ಯಗಳಿಗೆ ಮಹತ್ವ ಹೆಚ್ಚುತ್ತಿದೆ. ಈಗ ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ಕಿರುತೆರೆಯ ಧಾರಾವಾಹಿಗಳಲ್ಲಿ ಹೆಣ್ಣನ್ನು ಬಂಧಿಸಿ ಹಿಂಸಿಸುವ ದೃಶ್ಯಗಳು ಸಹಜ ಎನ್ನುವಂತೆ ಕಾಣಿಸಿಕೊಳ್ಳುತ್ತಿವೆ. ಇವೆಲ್ಲವೂ ಹೆಣ್ಣನ್ನು ಲೈಂಗಿಕ ಆಟಿಕೆಯ ಮಟ್ಟಕ್ಕೆ ಇಳಿಸಿಬಿಡುವ ಅಪಾಯಕ್ಕೆ ಕಾರಣವಾಗುತ್ತಿವೆ. ಜಾಹೀರಾತಿನ ಅಂಕುಶಕ್ಕೆ ಸಿಲುಕಿರುವ ಸಮಕಾಲೀನ ಸನ್ನಿವೇಶದಲ್ಲಿ ಹೆಣ್ಣು ಮಾರಾಟದ ಸರಕಾಗಿದ್ದಾಳೆ. ವಿಕೃತಿ ಇಲ್ಲಿನ ಮಾರಾಟದ ತಂತ್ರವಾಗಿದೆ. ಸಮಾಜದ ಸ್ವಾಸ್ಥ್ಯ ಹಾಳಾದರೂ ಪರವಾಗಿಲ್ಲ ತಾವು ಹಣ ಗಳಿಸಬೇಕು ಎಂಬ ಬಂಡವಾಳಶಾಹಿ ಮನೋಭಾವ ಈಗ ಮೇಲುಗೈ ಪಡೆದಿದೆ. ಇಂತಹ ಜಾಗತಿಕ ಸಂದರ್ಭದಲ್ಲಿ 'ಹಿಂಸೆಯ ಪಂಜರ'ದ ನಿಷೇಧ ಒಂದು ಆಶಾದಾಯಕ ಬೆಳವಣಿಗೆಯೇ. ಆದರೆ ಇದಷ್ಟೇ ಬದಲಾವಣೆಗೆ ಸಾಕಾಗದು. ವಿಕೃತ ಮನೋಭಾವ ಬದಲಾಗದಿದ್ದರೆ ಹಿಂಸೆಯ ಪಂಜರದ ಜಾಗದಲ್ಲಿ ಇನ್ನೊಂದು ಹಿಂಸಿಸುವ ಅಸ್ತ್ರ ಕಾಣಿಸಿಕೊಳ್ಳುತ್ತದೆ. ಮುಖ್ಯವಾಗಿ ಹೆಣ್ಣಿನ ಆತ್ಮಾಭಿಮಾನವನ್ನು ಎತ್ತಿ ಹಿಡಿಯುವ ಕೆಲಸ ಈಗ ಆಗಬೇಕಾಗಿದೆ. ವಿಪರ್ಯಾಸವೆಂದರೆ ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲೂ ಪುರುಷನಿಗೆ ಸಮನಾಗಿ ಸಾಧನೆ ಮಾಡುತ್ತಿರುವ ಕಾಲದಲ್ಲೇ ಇಂತಹ ಬೆಳವಣಿಗೆಗಳು ಕಾಣಿಸಿಕೊಳ್ಳುತ್ತಿವೆ!


■ ಎನ್.ಎಸ್.ಶ್ರೀಧರ ಮೂರ್ತಿ



ವಿಧಿಯಾಚರಣೆಯ ನೆಪದಲ್ಲಿ ಹೆಣ್ಣಿಗೆ ಅಮಾನುಷ ಕ್ರೌರ್ಯ

■ ಸೇತುಮಾಧವ ಎಂ.ವಿ.

ಇತ್ತೀಚೆಗೆ ನಾನು ಚಿತ್ರದುರ್ಗದ ಹಿರಿಯೂರು, ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಹಲವು ಗ್ರಾಮಗಳಿಗೆ ಸಾಕ್ಷ್ಯಚಿತ್ರದ ಉದ್ದೇಶದಿಂದ ಭೇಟಿ ನೀಡಿದೆ. ಹಿರಿಯೂರು ತಾಲ್ಲೂಕಿನ ಯರಬಳ್ಳಿಯಿಂದ ಪ್ರತ್ಯೇಕವಾದ ಗೊಲ್ಲಗಹಟ್ಟಿ ಒಂದಿದೆ. ಅಲ್ಲಿರುವವರೆಲ್ಲರೂ ಕಾಡುಗೊಲ್ಲರು. ಕಾಡುಗೊಲ್ಲರು ಜನಗಣತಿಯನ್ವಯ ಪರಿಶಿಷ್ಟ ಪಂಗಡಕ್ಕೆ ಸೇರುವುದಿಲ್ಲ. ಅವರನ್ನು ಹಿಂದುಳಿದ ಪಂಗಡವೆಂದೇ ಗುರುತಿಸಲಾಗಿದೆ. ಅತ್ಯಂತ ಒಳಹೊಕ್ಕು ನೋಡಿದಾಗ ಕಾಡುಗೊಲ್ಲರ ಹಲವು ಆಚರಣೆಗಳು ಮಹಿಳೆಯರ ಬಗೆಗಿನ ಧರ್ಮದ ನಂಬಿಕೆ, ಧೋರಣೆ, ಕ್ರೌರ್ಯಕ್ಕೆ, ಅಮಾನುಷತೆಗೆ ಸಾಕ್ಷಿಯಾದಂತಿದೆ. ಯರಬಳ್ಳಿ ಗೊಲ್ಲರ ಹಟ್ಟಿಯಲ್ಲಿ 'ಹಾಲು ಗುಡದಪ್ಪ'ನ ದೇವಸ್ಥಾನವಿದೆ. ದೇವಸ್ಥಾನದ ಆವರಣದೊಳಗೆ ಹೊರಗಿನವರು ಯಾರೂ ಹೋಗುವಂತಿಲ್ಲ. ಅವರದೇ ಕೋಮಿನವರು ಆವರಣದೊಳಗೆ ಹೋಗಬಹುದೇ ಹೊರತು, ಅವರೂ ಸಹ ದೇವಸ್ಥಾನದ ಒಳಗೆ ಹೋಗುವಂತಿಲ್ಲ. ಅವರ ಪೂಜಾರಿ ಯಾರ ಮನೆಯಲ್ಲೂ ಊಟ ಮಾಡುವ ಹಾಗಿಲ್ಲ. ಕಾಲಿಗೆ ಚಪ್ಪಲಿ ಹಾಕುವಂತಿಲ್ಲ, ಬೇರೆಯವರ ನೆರಳು ಬಿದ್ದರೂ ಮೈಲಿಗೆ. ದೇವಸ್ಥಾನದ ಬಾಗಿಲು ಎಷ್ಟು ಕಿರಿದಾಗಿರುತ್ತದೆ ಎಂದರೆ, ಒಬ್ಬರು ಕಷ್ಟಪಟ್ಟು ನುಸುಳಿಕೊಂಡು ಹೋಗಬೇಕು, ನೀಲಗಿರಿ ಜಿಲ್ಲೆಯ ತೋಡಗಳ 'ಮುಂದ್'ನಂತೆ. ಆದರೆ ಅವರು ಬದುಕುವ ಭೌಗೋಳಿಕ ಪರಿಸರ ಬೇರೆ. ಈ ಹಳ್ಳಿಯ ಹೆಣ್ಣುಮಕ್ಕಳು ಇಂತಹ ವಾತಾವರಣದಲ್ಲಿ ಬದುಕಬೇಕು. ಹುಡುಗಿ ಮೈನೆರೆದರೆ, ಪ್ರತ್ಯೇಕ ಗುಡಿಸಲು ಅಂತಾ ಅವರು ಹೇಳುತ್ತಾರೆ. ಅದಕ್ಕೆ ಯಾವ ಆಸರೆಯೂ ಇರುವುದಿಲ್ಲ. ಜೋರಾಗಿ ಗಾಳಿ ಬೀಸಿದರೆ ಧೂಳು, ಮಣ್ಣು ಎಲ್ಲ ಅವರ ಮೈಮೇಲೆ. ಅದಿರಲಿ, ಹುಡುಗಿ ಋತುಮತಿಯಾಗಿದ್ದಾಳೆ, ಬಲಹೀನತೆ ಇರುತ್ತದೆ ಎನ್ನುವುದು ಬೇರೆ ಬುಡಕಟ್ಟು ಪಂಗಡಗಳಲ್ಲಿ ನಂಬಿಕೆ. ಅದಕ್ಕಾಗಿ ಇಂತಹ ಸಮಯದಲ್ಲಿ ಪೌಷ್ಟಿಕ ಆಹಾರ ನೀಡುತ್ತಾರೆ. ಆದರೆ, ಗೊಲ್ಲರ ಮನೋಧರ್ಮ ವಿಭಿನ್ನ, ಅಮಾನವೀಯ. ಹುಡುಗಿಗೆ ಯಾವ ರೀತಿಯ ಭದ್ರತೆಯೂ ಇರುವುದಿಲ್ಲ. ಮಳೆ ಬಂದರೆ ನೆನೆಯಬೇಕು. ಕೊಟ್ಟಿದ್ದನ್ನು ತಿನ್ನಬೇಕು. ತನ್ನ ದೇಹದ ಆರೈಕೆ ತಾನೇ ಮಾಡಿಕೊಳ್ಳಬೇಕು. ಇದು ಇಲ್ಲಿಗೇ ನಿಲ್ಲುವುದಿಲ್ಲ, ಈ ಗೊಲ್ಲರ ಹಟ್ಟಿಯಲ್ಲಿ ಮಾಸಿಕ ಋತುಚಕ್ರದ ಮಹಿಳೆಯರ ಪಾಡು ಹೇಳತೀರದು. ನಾವು ಚಿತ್ರೀಕರಣ ನಡೆಸುತ್ತಿದ್ದ ಸಂದರ್ಭದಲ್ಲಿ ಹಟ್ಟಿಯ ಹೊರಗೆ ಒಂದು ಪಾಳು ಬಿದ್ದಂತಿರುವ ಏಕ ಕೋಣೆಯ ಮನೆ, ಅಲ್ಲಿ ನಾಲ್ಕು ಮಹಿಳೆಯರು ಇದ್ದರು. ಆ ಕೋಣೆಯ ಗೋಡೆಯನ್ನು ನಾವು ಮುಟ್ಟುವಂತಿಲ್ಲ. ಮುಟ್ಟಿದರೆ ಹಿಂತಿರುಗಿ ಹಟ್ಟಿಗೆ ಹೋಗುವ ಹಾಗಿಲ್ಲ. ಅಕಸ್ಮಾತ್ ಊರೊಳಗೆ ಬರುವ ಮೊದಲೇ ಇವರನ್ನು ಮಾತನಾಡಿಸಿದರೂ, ಊರಿನೊಳಗೆ ನಿಮ್ಮ ಪ್ರವೇಶ ನಿಷಿದ್ಧ. ಈ ನಾಲ್ಕು ಹೆಣ್ಣುಮಕ್ಕಳು ಒಂದುವಾರ ಆ ಕೋಣೆಯಲ್ಲಿರಬೇಕು. ಆಯಾ ಮನೆಯವರು ಅಕ್ಕಿಯನ್ನೋ ಹಿಟ್ಟನ್ನೋ ಕೊಟ್ಟರೆ ಅವರೇ ಅಡುಗೆ ಮಾಡಿಕೊಳ್ಳಬೇಕು. ಆ ಹೆಣ್ಣುಮಕ್ಕಳನ್ನು ಮಾತನಾಡಿಸಿದಾಗ ಅಕ್ಕಿಯೇನೋ ಕೊಟ್ಟಿದ್ದಾರೆ. ಆದರೆ ನೀರಿಲ್ಲ, ಬೇಯಿಸಲು ಕಟ್ಟಿಗೆ ಇಲ್ಲ ಊರೊಳಗೆ ಹೋಗುವಂತಿಲ್ಲ. ಮೊದಲೇ ನಿಶ್ಶಕ್ತಿ, ಅದರೊಂದಿಗೆ ಉಪವಾಸ. ಪಕ್ಕದಲ್ಲಿರುವ ತೋಟಕ್ಕೆ ಅಥವಾ ಬೇರೆಯವರ ಮನೆಯಿಂದಲೋ ನೀರು ತರುವ ಹಾಗೂ ಇಲ್ಲ. ಇದೆಂತಹ ಪಾಡು? ಆ ನಾಲ್ವರಲ್ಲಿ ಬಹುಶಃ ಹಸಿವು, ಬಿಸಿಲು, ದೈಹಿಕ ನಿಶ್ಶಕ್ತಿಯಿಂದ ಮೂರುಜನ ಕಣ್ಣುಮುಚ್ಚಿ ಮಲಗಿದ್ದರು, ಒಬ್ಬಾಕೆ ಮಾತ್ರ ಯಾರಿಗೆ ಬೇಕು ಈ ಹೆಣ್ಣು ಜನ್ಮ? ಈ ಪಾಡು? ಎಂದಿದ್ದು ಕೇಳಿ 21ನೆಯ ಶತಮಾನದ ಯಾರೂ ನಾಚಬೇಕು. ಹೀಗೆ ಋತುಚಕ್ರದಿಂದ ಸಾಗಿ, ಮದುವೆಯಾಗಿ, ಗರ್ಭಿಣಿಯಾದಳೆಂದರೆ ಅದು ಇನ್ನೊಂದು ನರಕ ಸದೃಶ ಬದುಕು. ಕಾಡುಗೊಲ್ಲರ ಹೆಣ್ಣುಮಗಳು ಗರ್ಭಿಣಿಯಾದರೆ ಪ್ರಸವದವರೆಗೂ ಪರವಾಇಲ್ಲ. ಪ್ರಸವವಾದೊಡನೆ ಮನೆಯಿಂದ ಹಸಿಮೈಯ ಆ ಹೆಣ್ಣನ್ನು, ಆ ಎಳೆಕಂದಮ್ಮನನ್ನು ಅಮಾನುಷವಾಗಿ ಪ್ರತ್ಯೇಕವಾಗಿಡುತ್ತಾರೆ. ಅಂದರೆ ಬತ್ತದ ಹುಲ್ಲಿನ ಹಾಸಿಗೆ, ಬಿದಿರು ಅಥವಾ ಗಳದ ತ್ರಿಕೋನದಿಂದ ತಾತ್ಕಾಲಿಕ ಗುಡಿಸಲು, ಅದರ ಮೇಲೆ ಕೆಲವೊಮ್ಮೆ 'ತಾಡಪಾಲು' ಅಥವಾ ಕಂಬಳಿ ಹೊದೆಸುವುದುಂಟು. ಬಯಲುಸೀಮೆಯ ಬಿರುಬಿಸಿಲಿಗೆ ಆ ಹಸಿಮೈಯ ಹೆಣ್ಣು, ಮಗು ಆ ಗುಡಿಸಲಿನಲ್ಲಿರಬೇಕು. ಅದೂ 16ರಿಂದ 21 ದಿವಸದವರೆಗೆ. ಎಲ್ಲಕ್ಕಿಂತ ಅಮಾನುಷವಾದದ್ದೆಂದರೆ, ಪ್ರಸವದ ನಂತರ ಹೊಳಬಳ್ಳಿಯೊಂದಿಗೆ ಮಗುವಿರುವವರೆಗೂ ಆಕೆಯನ್ನು ಮನೆಯಲ್ಲಿರಿಸಿಕೊಳ್ಳುತ್ತಾರೆ. ನಂತರ ಆಕೆಯೇ ಆ ತಾತ್ಕಾಲಿಕ ಗುಡಿಸಲಿಗೆ ಹೋಗಿ ಕರುಳಬಳ್ಳಿಯನ್ನು ಕತ್ತರಿಸಿಕೊಳ್ಳಬೇಕು. ಇಂತಹ ನರಕ! ಆ ತಾಯಿ ತನ್ನ ಆರೋಗ್ಯ ನೋಡಿಕೊಳ್ಳಬೇಕೇ? ಮಗುವಿನ ಆರೈಕೆ ಮಾಡಬೇಕೇ? ಬಿಸಿಲಿನ ಝಳ ತಡೆದುಕೊಳ್ಳಬೇಕೆ? ಇಂತಹ ಪದ್ಧತಿಯನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಹಾಗಾಗಿ ನಮ್ಮ ದೈವ ನಮ್ಮನ್ನು ಕಾಪಾಡುತ್ತಿದೆ ಎಂಬುದು ಅಲ್ಲಿಯ ಗಂಡಸರ ಹೆಮ್ಮೆಯ ಮಾತು. ಇವರ ನಂಬಿಕೆ ಹೇಗಿದೆಯೆಂದರೆ, ಈ ಹಳ್ಳಿಗೆ ಮೂರುತಿಂಗಳ ಹಿಂದಿನವರೆಗೂ ವಿದ್ಯುತ್‌ಸಂಪರ್ಕವಿರಲಿಲ್ಲ. ಹಲವಾರು ಬಾರಿ ಲೈಟ್ ಗೂಟಗಳನ್ನು ನೆಟ್ಟದ್ದಾಯಿತು. ಆದರೆ, ಊರಿನವರು ವಿದ್ಯುತ್ ಬೇಡ ಎಂದಿದ್ದಾರೆ. ಯಾಕೆಂದರೆ ಅವರ ದೇವರು ನಡೆದಾಡುವ ಮಾರ್ಗದಲ್ಲಿ ವಿದ್ಯುತ್ ತಂತಿ



ಹಾಯಬಾರದು. ಅಂತು, ಇಂತು ಹಲವಾರು ಜನರು ಸೇರಿ, ಅವರನ್ನು ಒಪ್ಪಿಸುವ ಪ್ರಯತ್ನವೂ ನಡೆದಿದೆ. ಇತ್ತೀಚೆಗೆ ದೇವರನ್ನು ಕೇಳಿದರಂತೆ, ದೇವರು "ನನ್ನ ನಡೆದಾಡುವ ಮಾರ್ಗಕ್ಕೆ ಅಡ್ಡಬರದಿದ್ದರೆ, ವಿದ್ಯುತ್ ಸಂಪರ್ಕ ಪಡೆಯಿರಿ" ಎಂದಿತಂತೆ. ಹೀಗಾಗಿ, ಅಲ್ಲಿಯ ಕೆಲವು ಹಿರಿಯರು "ನೋಡಿ, ನಮ್ಮ ಸ್ವಾಮಿ ನಡೆದಾಡುವ ಮಾರ್ಗಕ್ಕೆ ಅಡ್ಡಿಯಾಗದಂತೆ, ಕಂಬಗಳನ್ನು ನಡಿಸಿದ್ದೇವೆ" ಎಂದು ಹೆಮ್ಮೆಯಿಂದ ತೋರಿಸಿದರು. ಏನು ಹೇಳಬೇಕು ಇದಕ್ಕೆ! ಅಲ್ಲಿಯ ಹೆಣ್ಣುಮಕ್ಕಳು ಅವ್ಯಕ್ತವಾಗಿ ಅನುಭವಿಸುವ ನೋವು ಯಾರಿಗೂ ತಿಳಿಯುವುದಿಲ್ಲವೋ! ಅಥವಾ ಧರ್ಮ, ಆಚರಣೆಯ ಹೆಸರಿನಲ್ಲಿ ಮತ್ತೆ ಮತ್ತೆ ಹೇರುವ ಪುರುಷಪ್ರಧಾನ ಮೌಲ್ಯಗಳ ಬಗ್ಗೆ ಯಾರು ಕೇಳಬೇಕು. ಒಟ್ಟಾರೆ, ಅಲ್ಲಿಯ ಹೆಣ್ಣುಮಕ್ಕಳು ರಕ್ತಹೀನತೆಯಲ್ಲಿ ಬದುಕುತ್ತಿದ್ದಾರೆ. ಯಾರ ಮುಂದೂ ಹೇಳಿಕೊಳ್ಳಲಾರದ ಯಾತನೆಯನ್ನು ಅನುಭವಿಸುತ್ತಿದ್ದಾರೆ.

●

ಮೆಹರ್

ಒಂದೇ ಉಸುರಿನಲ್ಲಿ
ಹೇಳಿ ಮೂರು ತಲ್ಲಾಖ್
ಹೊರಟೆ ನೀನು ಎಲ್ಲಿಗೆ?
ಬದುಕಿನ ಏರುಪೇರುಗಳಲಿ
ಬಹಳ ಸಹಿಸಿಹೆನು ಪೀಡನೆ
ಸಾಕು ಹೋಗು ನಿನ್ನ ದಾರಿಗೆ

ಮೆಹರ್‌ನ ಮೊತ್ತ ಇಟ್ಟು
ಹಸಿರು ನೋಟಿನ ಕಟ್ಟು
ಬಹುಮಾನವೆರಡು ಕೈಗಿಟ್ಟು
ನಿನ್ನ ಕರ್ಮ ಕಾಂಡದ ಫಲ
ಬದುಕೆಲ್ಲ ತೊಳೆಯಲೇ ಘಮಟು?

ನಿನ್ನ ಮೆಹರಿನ ಮೊತ್ತ
ಸಾಕಾಗುತ್ತಿಲ್ಲ ವಿಷಕೊಳ್ಳಲು ಚುಟುಕು
ಸಿಕ್ಕಾಳು ನಿನಗೊಬ್ಬ ಸಂಗಾತಿ
ನನ್ನ ಮಕ್ಕಳಿಗೊಬ್ಬ ತಂದೆ
ಎಲ್ಲಿಂದ ತರಲಿ ಹೇಳು?

ಕೊಡುವುದೇ ಆದಲ್ಲಿ ಕೊಟ್ಟು ಹೋಗು
ನನ್ನ ಮಕ್ಕಳ ಭವಿಷ್ಯತ್ತಿಗೆ
ಬದುಕು ಕೊಟ್ಟು ಹೋಗು
ಎಳೆಯ ರಟ್ಟೆಗಳಲಿ ಕಸುವು ತುಂಬಿ,
ನಿನ್ನ ನೆರಳಲ್ಲಿ ಕಳೆದು ಹೋದ
ನನ್ನ ಆತ್ಮವಿಶ್ವಾಸ ಮರಳಿ ಕೊಟ್ಟು ಹೋಗು.

■ ಡಾ. ಕೆ. ಷರೀಫಾ



Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018